

# ಅಪರಂಜಿ

ತಿಳಿನಗೆಯ ಕಾರಂಜಿ


ಡಿಸೆಂಬರ್ 2023





ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in


ಕೈ ಕೊಟ್ಟ ಬೀಗದ ಕೈ


ಆರೋಕ್ಯಸಾಮಿಯ ಆಶಾಭಂಗ

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 41

ಸಂಚಿಕೆ – 03

ಡಿಸೆಂಬರ್–2023



**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್


ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ವಾರ್ಷಿಕ ಚಂದಾ : ರೂ. 100/–

ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಾ ಕಂಡ ಬೀಚಿ | ಉಲ್ಲಾಸ ರಾಯಸಮ್ | 3 |
| ಆರೋಕ್ಯಸಾಮಿಯ ಆಶಾಭಂಗ | ಶಿವು | 5 |
| ಕೈ ಕೊಟ್ಟ ಬೀಗದ ಕೈ | ಇಂದಿರಾ ವೆಂಕಟೇಶ್ | 10 |
| ಬೀಳ್ಕೊಗ್‌ಬೇಡಿ ನನ್ನ | ಸುಮಾವೀಣಾ | 13 |
| ಆಪರೇಷನ್ ವೀನಸ್ | ಸುಮಾ ರಮೇಶ್ | 17 |
| ಉಮಾಕಾಂತನ ವಿಮಾ ಯೋಜನೆ | ಪಾಲಹಳ್ಳಿ ವಿಶ್ವನಾಥ್ | 21 |
| ಲೇಖನವಾದ ಬೀಚಿ ಪುಸ್ತಕಗಳ ಪಟ್ಟಿ | ಬೇಲೂರು ರಾಮಮೂರ್ತಿ | 25 |
| ತುಂತುರು | ದಂನಆ | 27 |
| ಕರೆಂಟ ಕೈ ಕೊಟ್ಟಾಗ !!! | ಸುಚೇತ ರಾಘವೇಂದ್ರ | 28 |
| ಅಮೆರಿಕನ್ ಲೈಫು | ಆನಂದ | 29 |
| ನಮ್ ಕಂಪ್ಯೂಟರ್ಗೆ ತಲೆ..... | ಅಣಕು ರಾಮನಾಥ್ | 30 |
| ಯಡಿಯೂರು ಯಂಗ್ಪ | ಡಾ. ಎ ಭಾನು | 32 |
| ಖಂಡವಿದೆಕೋ.. ಮಾಂಸವಿದೆಕೋ.... | ಸುಮನಾ | 35 |
| ನೀರಜಳ ಕೋಪ | ಜಿ.ವಿ. ನಿರ್ಮಲ | 38 |


**ವ್ಯಂಗ್ಯ ಚಿತ್ರಗಳು :**

**ಹೊರಪುಟ : ಅಜಿತ್ ನೀನನ್**

**ಒಳಪುಟಗಳು : ಅಶೋಕ್ ಹೆಮ್ಮಿಗೆ, ಎ.ಐ. ಸೃಷ್ಟಿ**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ ಮಲ್ಲೇಶ್ವರಂ,*

*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304



ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488.email:belururamamurthy@gmail.com


**For Online payment of ubscription:** Name : KORAVANJI APARANJI TRUST

Current Account No.: 109804180000056, IFS Code : SVCB0000098

SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಶಾಸಕರ ವಲಸೆ ತಡೆಯಲು ವಿಜಯೇಂದ್ರ ಕಾರ್ಯತಂತ್ರ

ಪತ್ರಿಕೆ

ಇದಕ್ಕೇ ಪಿತ್ರಾರ್ಜಿತ ಅನುಭವ ಇರುತ್ತಲ್ಲ?!

* * *

ಹಲವಾರು ವಿಶ್ವವಿದ್ಯಾಲಯಗಳು ಆರಂಭವೇ ಆಗಿಲ್ಲ

ದಿನಪತ್ರಿಕೆ

"ನೆನೆಗುದಿಗೆ" ಎಂಬ ಭಾರಿ ಗುಡಾಣಕ್ಕೆ ಸೇರ್ಪಡೆ !!!

* * *

ಕೆ ಪಿ ಎಸ್ ಸಿ ನೇಮಕಾತಿ ಪರೀಕ್ಷೆ ಮುಂದೂಡಲು
ಆಯೋಗದ ಪ್ರಯತ್ನ

ಪತ್ರಿಕೆ

ಸಜ್ಜನರೆಲ್ಲ ತಲೆತಗ್ಗಿಸಬೇಕಾದ ಬೆಳೆವಣಿಗೆ

* * *

ಕೃತಕ ಬುದ್ಧಿ–ಮತ್ತೆ ಮತ್ತು ಡೀಪ್ ಫೇಕ್ ದುರ್ಬಳಕೆ

ದಿನ ಪತ್ರಿಕೆ

ಮುಂಬರುವ ಹಾದಿ ಕಠಿಣವಾಗುತ್ತೆ ಎಂಬುದರಲ್ಲಿ ಸಂಶಯವಿಲ್ಲ!!

* * *

ಡಯಾನಾ ಎಡ್ಯೂಲ್ಜಿ ಮತ್ತು ವಿರೇಂದರ್ ಸೆಹ್ವಾಗ್ ಅವರಿಗೆ
ಪ್ರಸಿದ್ಧರ ಹಾಲ್ ಪದವಿ ಶುಭಾಶಯಗಳು !!

* * *

ನೂತನ ಶಾಸಕರಿಗೆ ಗಂಡ–ಭೇರುಂಡ ಲಾಂಛನ ಪದಕಗಳು

ಮಾನ್ಯ ಮಂತ್ರಿಗಳು

ತೀರಾ, ಈ ತರಹ ಟೂ –ಫೇಸ್ ಎಂಬ ಅರ್ಥ ಬರುವ
ಪದಕ ಸಮಂಜಸವೇ ಎಂದು ಅಪರಂಜಿ ಮರುಗಿದಳಂತೆ !!

* * *

ನಮ್ಮನ್ನಾಳಿದ ಇಂಗ್ಲೆಂಡ್ ಹಾಗೂ ಕಿರುಕುಳ ಕೊಡುತ್ತಿರುವ
ದಾಯಾದಿಗಳಿಗೂ ಮರೆಯಲಾಗದ ಅನುಭವಗಳನ್ನೂ ನೀಡಿದ
ಭಾರತದ ತಂಡಕ್ಕೆ ನಮ್ಮ
ಅಭಿನಂದನೆಗಳು!!

■

## ನಾ ಕಂಡ ಬೀಚಿ

ಉಲ್ಲಾಸ ರಾಯಸಮ್



ನಾನು ಬೀಚಿಯವರನ್ನ ರಕ್ತ ಬರೋಹಾಗೆ ಹೊಡದೀನಿ, "ನನಗೆ ಆಗ ಸುಮಾರು ನಾಲ್ಕು ವರ್ಷ, ತಾತನ ತೊಡೆ ಮೇಲೆ ಕೂತು ಆಟ ಆಡಬೇಕಾದರೆ ಕೈಯಿಂದ ಜೋರಾಗಿ ಮೂಗಿಗೆ ಒಂದು ಪಂಚ್ ಕೊಟ್ಟಿದ್ದೆ. ಅವರು ಧರಸಿದ್ಧ ಬಿಳಿ ಜುಬ್ಬಾ ರಕ್ತದಿಂದ ಕೆಂಪು ಆಯಿತು."

ಅಂದು ಯುಗಾದಿಯ ದಿನ, ಮನೆಯಲ್ಲಿ ಹಬ್ಬ. ಇದನ್ನು ನೋಡಿ ಎಲ್ಲರಿಗೂ ಮನಸ್ಸಿಗೆ ಅಸಮಾಧಾನ. ನನ್ನ ತಂದೆ, ತಾಯಿ, ಅಜ್ಜಿ ಇದ್ದರು, ಅದಕ್ಕೆ ಬೀಚಿ, ನೋಡಿ ನನ್ನ ಹೊಡಿಯೋ ಧೈರ್ಯ ಯಾರಿಗಿದೆ, ಕೂಸು ಏನೂ ಕೈ ಜಾಡಿಸಿತು ಗ್ರಾಂಡ್‌ಪೇರೆಂಟ್ಸ್ ಅರ್ ಟ್ರೂ ಪೇರೆಂಟ್ಸ್.

ಬೀಚಿಯವರು ಯಾವಾಗಲು ಇಸ್ತ್ರಿ ಮಾಡಿದ್ದ ಜುಬ್ಬಾ ಪೈಜಾಮಗಳನ್ನೇ ಧರಿಸುತ್ತಿದ್ದರು. ಮನೆಯಲ್ಲಿ ಇದ್ದಾಗಲೂ–ಬಟ್ಟೆ ಇಸ್ತ್ರಿಯಾಗಿರಲೇ ಬೇಕು. ಅವರು ತಮ್ಮ ಬನಿಯನ್ನು ಮತ್ತು ಒಳ ಒಡುಪು ಇಸ್ತ್ರಿಯಾಗಿರಲೇ ಬೇಕು – ಇದಕ್ಕೆ ಕಾರಣ ಇವರ ಬಾಲ್ಯದ ಬಡತನ. ನನಗೆ ನನಪಿಗೆ ಬರುವ ಚಿತ್ರ, ಅವರು ತಮ್ಮ ಈಜಿ ಚೇರ್ನಲ್ಲಿ ಕುಳಿತು ಸದಾ ಓದುವುದು ಅಥವಾ ಬರಿಯುವುದು.

ನಾನು ಚಿಕ್ಕವನಿದ್ದಾಗ ನನ್ನ ಅಜ್ಜಿ ಸೀತಾ ಬಾಯಿ, ನನಗೆ ಪುರಾಣದ ಕಥೆಗಳನ್ನು ಹೇಳುತ್ತಿದ್ದರು. ಆಗ "ಏನು, ಏಕೆ, ಹೇಗೆ" ಎಂಬ ಪ್ರಶ್ನೆಗಳನ್ನು ಕೇಳ ಬೇಕು. ಸ್ಪಿರಿಟ್ ಆಫ್ ಇನ್‌ಕ್ವೈರಿ ಎಂಬುದು ಆರೋಗ್ಯಕರವಾದ ಮನೋಧರ್ಮ ಎಂದು ಹೇಳಿ ಆಗ ಬೀಚಿ ತಾತ ಬಂದು ತಮ್ಮ ಬಾಲ್ಯದ ಸ್ವಾರಸ್ಯದ ಘಟನೆಗಳು ಹೇಳಿದರು.

ನಾನು ಸಣ್ಣ ಹುಡುಗ ಇದ್ದಾಗ ರಿಂದತ್ತಿ ನನಗೆ ಹೀಗೆ ಕತೆಗಳು ಹೇಳುತ್ತಿದ್ದರು, ಒಂದು ರಾತ್ರಿ ಹರಿಶ್ಚಂದ್ರ ಹೆಂಡತಿಯನ್ನು ಮಾರಿದ ಕತೆಯನ್ನು ಕೇಳಿ – ಬೀಚಿ " ಹೆಂಡತಿಯನ್ನು ಮಾರಿದರೆ ಭಾಳ ದುಡ್ಡು ಬರ್ತದೇನು ರಿಂದತ್ತಿ? "ನಿನ್ನ ತಲಿ ಕುಟ್ಟ" ಅಂತ ಹೇಳಿ ಕತೆ ಮುಂದುವರಿಸಿದರು.

ರಿಂದತ್ತಿ ನಿತ್ಯವೂ ಸಂಜೆ ಮಠದಲ್ಲಿ ಜರುಗುತ್ತಿದ ಕತೆಯನ್ನು ಬೀಚಿಗೆ ಹೇಳ ಬೇಕು. ದುಷ್ಯಂತ ಬೇಟೆಗೆ ಹೋದಾಗ ಕಣ್ವ ಋಷಿ ಕುಟೀರದಲ್ಲಿ ಶಕುಂತಲೆಯನ್ನು ಸಂಧಿಸಿದ ಕತೆಯನ್ನು ಹೇಳುತ್ತಾ "ದುಷ್ಯಂತ ಶಕುಂತಲೆಯನ್ನು ಪ್ರೇಮಿಸಿದಾ" ಎಂದಳು ಬೀಚಿ ಥಟನೆ ರಿಂದತ್ತಿಯನ್ನು" ಪ್ರೇಮಿಸಿದ ಅಂದರೇನು ರಿಂದತ್ತಿ?" "ಹಾಗೆಲ್ಲ ಮಧ್ಯ ಮಧ್ಯ ಕೇಳಬಾರದು, ಸುಮ್ಮನೆ ಹೂ ಅನ್ನು" "ನಾ ಸುಮ್ನೆ ಹೂ ಅಂಬೋದಿಲ್ಲ ರಿಂದತ್ತಿ ! ಪ್ರೇಮಿಸಿದ ಅಂದ್ರೇನು ಹೇಳು ?" ಈ ಹಠಕ್ಕೆ ರಾಜಿ ಪಂಚಾಯಿತಿಗೆ ಬಂದರು ರಿಂದತ್ತಿ.

ಮಾತಿನಲ್ಲಿ ರಿಂದತ್ತಿ ಜಾಣೆ. ಅನೇಕ ಗಂಡಸರ ಬಾಯಿಯನ್ನು ಮುಚ್ಚಿಸುತ್ತಿದಳು, ತಲೆಯಂತೆ ಗಂಟಲೂ ದೊಡ್ಡದು. "ಹಾಗಲ್ಲೋ ! ನೀನಿನ್ನೂ ಸಣ್ಣಾತಪಾ, ದೊಡ್ಡತ ಆದ ಮ್ಯಾಲೆ ಪ್ರೇಮಿಸೋದು ಆಂದ್ರೇನು ನಿಂಗೆ ತಿಳೀತದೆ" "ಹಾಗಾದ್ರೆ ಈ ಕತಿ ನಂಗೀಗ ಯಾಕೆ ಹೇಳ್ತಿದಿ ! ದೊಡ್ಡತ ಆದ ಮ್ಯಾಲೆ ಹೇಳು."

ಬೀಚಿ ನನಗೆ ಹೇಳಿದರು ನೀನು ಸುಮ್ಮನೆ ಹೂ ಅನ್ನಬೇಡ – ಪ್ರಶ್ನೆ ಕೇಳು. ಬೀಚಿಯವರ ತಾಯಿ ಅವರು ಸಣ್ಣವರಿದ್ದಾಗೆ ನಿಧನರಾದರು, ಬೀಚಿ ಅವರ ತಾಯಿಯ ಹೆಸರು ಭಾರತಿ ಮತ್ತು ಅವರು ಸೊಸೆಯನ್ನು (ನನ್ನ ತಾಯಿ) ಅವರನ್ನು ಭಾರತಿ ಎಂದೇ ಕರೆಯುತ್ತಿದ್ದರು.

ನನ್ನ ಅಜ್ಜಿ ಸೀತಾ ಬಾಯಿ ಬಹಳ ಸಾಂಪ್ರದಾಯಿಕ ಪ್ರಸಿದ್ಧ ಆಚಾರ್ ವಂಶಸ್ಥರು ಮತ್ತು ಯಾವಾಗಲೂ ಪೂಜೆ ಮಾಡುತ್ತಿದ್ದರು. ಬೀಚಿ ಯಾವತ್ತೂ ಆಚರಣೆಗಳಲ್ಲಿ ಪಾಲಿಸುತ್ತಿರಲಿಲ್ಲ, ಆದರೆ ನನ್ನ ಅಜ್ಜಿಯ ವಿಧಿ ವಿಧಾನಗಳಲ್ಲಿ ಅವರು ಎಂದಿಗೂ ಅವರ ನಂಬಿಕೆಯನ್ನು ನನ್ನ ಅಜ್ಜಿಯ ಮೇಲೆ ಹೇರಲಿಲ್ಲ.

■

ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




ನಾನೇನೋ ಕೊಟ್ಟ ಅಳ್ತೇಗೆ ಹೊಲ್ದಿರೋದು ಸಾರ್.
ಅಳ್ತೆ ಕೊಟ್ಟಾಗ್ನಿಂದ ನೀವೇ ಬೆಳೆದ್ಬಿಟ್ಟಿದೀರಿ ಸ್ವಲ್ಪ...

# ಆರೋಕ್ಯಸಾಮಿಯ ಆಶಾಭಂಗ

ಶಿವು

ಕಾರವಾರದಲ್ಲಿನ ಹಂಟರ್ಸ್ ಡೆನ್‌ನಲ್ಲಿ ಸೊಗಸಾದ ಮೀನಿನ ಊಟ ಮುಗಿಸಿ ಚೌಡಿಯ ಕಡೆ ತನ್ನ ಪ್ರಯಾಣ ಮುಂದುವರಿಸಲು ಕಾರನ್ನು ಹತ್ತುತ್ತಿದ್ದ ಮಾರ್ಟಿನ್ ಮುಖದ ಮೇಲೆ ಮಂದಹಾಸವೊಂದು ಮೂಡಿತ್ತು. ಹಂಟರ್ಸ್ ಡೆನ್ ಅಂದರೆ ಬೇಟೆಗಾರರ ಗುಹೆ. ಒಂದು ರೀತಿಯಲ್ಲಿ ತನ್ನ ಈ ಪ್ರಯಾಣವೂ ಬೇಟೆಗಾಗಿಯೇ ಅಲ್ಲವೇ. ಹಾಗಾಗಿ ಇದು ಶುಭ ಶಕುನ ಆಗಿರಲೇಬೇಕು ಅಂತ ಮಾರ್ಟಿನ್ ಅಂದುಕೊಂಡ. ಅಲ್ಲದೇ ತನ್ನ ಪಾದ್ರಿ ವೇಷಭೂಷಣಗಳನ್ನು ನೋಡಿ ಆ ಡೆನ್‌ನ ಮಾಲಿಕ ಜೆರೋಮ್, "ನೀವು ದೇವರ ಸೇವಕರು. ಹಾಗಾಗಿ ನಿಮ್ಮಿಂದ ಹಣ ತೆಗೆದುಕೊಳ್ಳಲಾರೆ" ಅಂತ ಹೇಳಿದ್ದಂತೂ ಅವನಿಗೆ ತುಂಬಾ ಖುಷಿ ತಂದಿತ್ತು. ಸಧ್ಯ ಯೇಸುವಿನ ದಯೆಯಿಂದ ತನ್ನ "ಬೇಟೆ" ಯೂ ಇಷ್ಟೇ ಯಶಸ್ವಿಯಾದರೆ ಸಾಕು ಎಂಬ ಚಿಂತನೆ ಅವನ ಮನದಲ್ಲಿ ಹಾದುಹೋಯಿತು.

ಮಾರ್ಟಿನ್ ಆರೋಕ್ಯಸಾಮಿ ಮಂಗಳೂರಿನ ಒಂದು ಹಳೆಯ ಚರ್ಚಿನಲ್ಲಿ ಒಬ್ಬ ಪಾದ್ರಿ. ಚರಿತ್ರೆಯಲ್ಲಿ ಸ್ನಾತಕೋತ್ತರ ಪದವಿಗಳಿಸಿದ್ದ ಮಾರ್ಟಿನ್ ತನ್ನ ಸ್ನೇಹಪರ ನಡವಳಿಕೆಯಿಂದ ಬಹು ಜನಪ್ರಿಯತೆಯನ್ನುಗಳಿಸಿದ್ದ. ಪಾದ್ರಿ ಕೆಲಸದ ಜೊತೆಗೆ ಆ್ಯಂಟೀಕ್ ಫರ್ನಿಚರ್ ಗಳನ್ನು ಹುಡುಕಿ ತಂದು ಅವನ್ನು ಅತ್ಯಂತ ಹೆಚ್ಚುಬೆಲೆಗೆ ವಿಲೇವಾರಿ ಮಾಡುವುದು ಅವನ ಪ್ರಿಯವಾದ ಹವ್ಯಾಸವಾಗಿತ್ತು. ಗೋವೆಯಿಂದ ಗೋಕರ್ಣದ ವರೆಗೂ ಇರುವ ಕರಾವಳಿ ಪ್ರದೇಶದ ಕುಗ್ರಾಮಗಳಲ್ಲಿ ಪೋರ್ಚುಗೀಸರ ಕಾಲದಲ್ಲಿ ತಯಾರಾದ ಅನೇಕ ಬಹು ಸುಂದರ ತೇಗದ ಹಾಗೂ ಬೀಟೆ ಮರದ (ರೋಸ್ ವುಡ್) ಕುರ್ಚಿ ಮೇಜುಗಳು, ಅವುಗಳ ಮೌಲ್ಯದ ಅರಿವಿಲ್ಲದವರ ಜೋಪಡಿಗಳಲ್ಲಿ ಅನಾಥವಾಗಿ ಬಿದ್ದಿರುವುದು ಮಾರ್ಟಿನ್‌ನ ಗಮನಕ್ಕೆ ಬಂದಾಗಿನಿಂದ ಅವನಿಗೆ ಒಂದು ಘಳಿಗೆಯೂ ಬಿಡುವಿರಲಿಲ್ಲ. ಚಾಲೂಕಾದ ಮಾತಿನಿಂದ ಅಮಾಯಕರನ್ನು ಮರುಳು ಮಾಡಿ ಬಹು ಕಡಿಮೆ ಬೆಲೆಗೆ ಅವರ ಬಳಿ ಇರುವ ಆ್ಯಂಟೀಕ್ ಗಳನ್ನು ಖರೀದಿಸಿ, ಅವನ್ನು ಬೆಂಗಳೂರು, ಮುಂಬೈಗಳಲ್ಲಿನ ಗಿರಾಕಿಗಳಿಗೆ ಮಾರಿ ಮಾರ್ಟಿನ್ ಶ್ರೀಮಂತನಾಗಿದ್ದ.

ವಾಸ್ತವದಲ್ಲಿ ಅವನ ಇಂದಿನ ಯಾತ್ರೆಯೂ ಇಂತಹ ಆ್ಯಂಟೀಕ್ ಪರಿಕರಗಳ "ಬೇಟೆ" ಗಾಗಿಯೇ. ಈ ಬಾರಿ ಈ ಕಾರ್ಯಕ್ಕೆ ಅವನು ಆರಿಸಿಕೊಂಡ ಗ್ರಾಮ ಚೌಡಿ. ದಕ್ಷಿಣ ಗೋವೆಯ ಕ್ಯಾನಕೊನಾದ ಬಳಿ ಇರುವ ಕುಗ್ರಾಮ ಚೌಡಿ. ಆಳವಾದ ಸಂಶೋಧನೆ ಮಾಡಿ ಆರಿಸಿದ್ದ ಊರು ಇದು. ಇಲ್ಲಿ ಇರುವ ತೆರೇಸಾ ಚರ್ಚು ಹದಿನೇಳನೆಯ ಶತಮಾನದ್ದು. ಒಂದು ಕಾಲದಲ್ಲಿ ಈ ಊರು ಪೋರ್ಚುಗೀಸರ ಬೀಡಾಗಿತ್ತು. ಈಗಲೂ ಒಂದಷ್ಟು ಪುರಾತನ ಮನೆಗಳು ಇಲ್ಲಿವೆ ಎಂಬ ಅಂಶವನ್ನು ಮಾರ್ಟಿನ್ ಪತ್ತೆ ಹಚ್ಚಿದ್ದ. ಅವರುಗಳೊಂದಿಗೆ ಪರಿಚಯ ಗಳಿಸಲು ಚೌಡಿಯಲ್ಲಿನ ತೆರೇಸಾ ಚರ್ಚಿನ ಪಾದ್ರಿ ಫಾದರ್ ಕೊಯಿಲೋಗೆ ಫೋನ್ ಮಾಡಿ ಅವರೊಂದಿಗೆ ಈ ಭೇಟಿ ಏರ್ಪಡಿಸಿಕೊಂಡಿದ್ದ. ಫಾದರ್ ಕೊಯಿಲೋ ಬಹು ಸೌಜನ್ಯದಿಂದ ಇವನಿಗೆ ಭೇಟಿಯ ಅವಕಾಶ ನೀಡಿದ್ದರು.

ಕಾರವಾರದಿಂದ ಹೊರಟು ಸಮುದ್ರದ ಕಿನಾರೆಗೆ ಸಮಾನಾಂತರವಾಗಿ ಸಾಗುವ ಹೆದ್ದಾರಿಯಲ್ಲೇ ಪಯಣಿಸಿ, ಮಾರ್ಟಿನ್ ಚೌಡಿ ಗ್ರಾಮವನ್ನು ಸೇರಿದಾಗ ಸಂಜೆ

ನಾಲ್ಕು ಗಂಟೆ ಆಗಿತ್ತು. ತೆರೇಸಾ ಚರ್ಚ್ ಮುಖ್ಯದ್ವಾರವನ್ನು ಹಾದು ಭವ್ಯವಾದ ಪುರಾತನ ಚರ್ಚಿನ ಬಲಭಾಗದಿಂದ ಪಾದ್ರಿಗಳ ನಿವಾಸದ ಮುಂದೆ ಕಾರು ನಿಂತಿತು. ಫಾದರ್ ಕೊಯಿಲೋ ಆತ್ಮೀಯತೆಯಿಂದ ಮಾರ್ಟಿನ್‌ನನ್ನು ಮನೆಯೊಳಕ್ಕೆ ಸ್ವಾಗತಿಸಿದರು.

ಚಹಾ ಕುಡಿಯುತ್ತಾ ಮಾರ್ಟಿನ್ ತಾನು ಬಂದ ಕಾರಣವನ್ನು ವಿವರಿಸತೊಡಗಿದ.

"ನಿಮಗೇ ತಿಳಿದಿರುವಂತೆ ಮಂಗಳೂರಿನ ಚರ್ಚಿನಲ್ಲಿ ನಾನು ದೇವರ ಸೇವೆಯನ್ನು ಮಾಡುತ್ತಿರುವೆ. ಅಲ್ಲಿಗೆ ಬರುವ ಭಕ್ತಾದಿಗಳೆಲ್ಲಾ ಪಟ್ಟಣವಾಸಿಗಳು. ಸಾಕಷ್ಟು ಅನುಕೂಲಸ್ಥರೂ ಸಹಾ. ಹಾಗಾಗಿ ನನಗೆ ಜನ ಸಾಮಾನ್ಯರ ಸಂಪರ್ಕವೇ ತಪ್ಪಿಹೋಗಿದೆ. ನಮ್ಮ ಗ್ರಾಮೀಣ ಭಕ್ತಾದಿಗಳ ಸಮಸ್ಯೆಗಳೇನು? ಯಾವ ಬಗೆಯಲ್ಲಿ ಯೇಸುವಿನ ಸಂದೇಶವನ್ನು ಅವರಿಗೆ ಯಶಸ್ವಿಯಾಗಿ ತಲುಪಿಸಬಹುದು ಎಂಬುದನ್ನೆಲ್ಲಾ ತಿಳಿಯುವ ಉತ್ಸಾಹ ನನಗೆ. ಆದರೆ ಮಂಗಳೂರಿನಂತಹ ಪಟ್ಟಣದಲ್ಲಿ ಆ ಕಲಿಕೆಗೆ ಅವಕಾಶವೇ ಇಲ್ಲದಂತಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ನಿಮ್ಮ ಈ ಗ್ರಾಮಕ್ಕೆ ಬರಲು ನಿರ್ಧರಿಸಿದೆ. ಇಂದು ಈ ಗ್ರಾಮದಲ್ಲೇ ತಂಗಿದ್ದು ನಾಳೆ ನಿಮ್ಮ ಪ್ರವಚನದ ನಂತರ ಗ್ರಾಮದ ಹಲವು ನಾಗರಿಕರನ್ನು ನಿಮ್ಮ ಸಹಾಯದಿಂದ ಪರಿಚಯಿಸಿಕೊಂಡು ಅವರುಗಳೊಂದಿಗೆ ವಿಚಾರ ವಿನಿಮಯ ಮಾಡುವುದು ಸಾಧ್ಯವಾದರೆ ನಾನು ಬಂದ ಕೆಲಸ ಕೈಗೂಡಿದಂತೆ. ಅಪರಿಚಿತನೊಬ್ಬನಿಗೆ ಇಷ್ಟು ಕಾಲಾವಕಾಶ ನೀಡುವ ಕೃಪೆ ಮಾಡಿದರೆ ನಾನು ಆಭಾರಿ" ಎಂದು ಮಾರ್ಟಿನ್ ಸವಿನಯದಿಂದ ವಿನಂತಿಸಿದ.

"ದೇವರ ಸೇವಕರೆಲ್ಲರೂ ಆಪ್ತ ಬಂಧುಗಳೇ. ಹಾಗಾಗಿ ನೀವು ಅಪರಿಚಿತರಾಗಲು ಹೇಗೆ ಸಾಧ್ಯ? ಖಂಡಿತ ನಿಮಗೆ ಸಹಾಯ ಮಾಡುವುದು ನನ್ನ ಭಾಗ್ಯ ಎಂದು ತಿಳಿಯುವೆ. ಇನ್ನು ರಾತ್ರಿ ತಂಗುವ ವಿಷಯ. ನೀವು ನನ್ನ ಅತಿಥಿಯಾಗಿ ನಮ್ಮ ಮನೆಯಲ್ಲೇ ಉಳಿದುಕೊಳ್ಳಬೇಕು. ಇದು ನನ್ನ ಪ್ರೀತಿಪೂರ್ವಕ ಆಗ್ರಹ. ನಾಳೆ ಪ್ರವಚನದ ನಂತರ ಗ್ರಾಮದ ಹಲವು ಪ್ರಮುಖ ಸಾತ್ವಿಕರನ್ನು ನಿಮಗೆ ಪರಿಚಯಿಸುವೆ. ಬನ್ನಿ ಈಗ ನಿಮ್ಮ ಕೊಠಡಿಯನ್ನು ತೋರಿಸುವೆ. ಆರಾಮ ಮಾಡುವಿರಂತೆ. ಹೇಗೂ ಮಂಗಳೂರಿನಿಂದ ಕಾರು ಓಡಿಸಿ ದಣಿದಿರುವಿರಿ." ಎನ್ನುತ್ತಾ ಕೊಯಿಲೋ ಎದ್ದು ನಿಂತರು. ಮಾರ್ಟಿನ್ ತನ್ನ "ಬೇಟೆ" ಯ ಪ್ರಥಮ ಮಜಲು ಸಫಲವಾದದಕ್ಕೆ ಬೀಗುತ್ತಾ ಅವರ ಹಿಂದೆ ನಡೆದ.

ಮಾರನೆಯ ಬೆಳಗ್ಗೆ ಫಾದರ್ ಕೊಯಿಲೋ ಅವರು ನಡೆಸಿದ ಆರಾಧನೆ ಹಾಗೂ ಪ್ರವಚನ ಬಹು ಭಕ್ತಿ ಪುರಸ್ಸರವಾದ ಘಟನೆಯಾಗಿತ್ತು. ಎಲ್ಲ ಮುಗಿದ ನಂತರ ಫಾದರ್ ಕೊಯಿಲೋ ಮಾರ್ಟಿನ್‌ನನ್ನು ಕರೆದು ಗ್ರಾಮದ ಹಲವಾರು ಸಜ್ಜನರ ಪರಿಚಯವನ್ನು ಮಾಡಿಸಿದರು. ಕ್ರಾಸ್ಟ, ಫರ್ನಾಂಡೆಸ್, ಸೆಕ್ವೇರಾ ನರೋನಾ ಇವರೆಲ್ಲರನ್ನು ಕರೆದು, "ನಮ್ಮ ಆದರದ ಅತಿಥಿ ಮಾರ್ಟಿನ್ ಮಂಗಳೂರಿನಿಂದ ಬಂದಿದ್ದಾರೆ. ಅಲ್ಲಿನ ಚರ್ಚಿನಲ್ಲಿ ಅವರು ಸೇವಕರು. ನಿಮ್ಮನ್ನೆಲ್ಲಾ ನಿಮ್ಮ ಮನೆಗಳಲ್ಲೇ ಭೇಟಿಯಾಗಿ ನಮ್ಮ ಧರ್ಮದ ಬಗ್ಗೆ ನಿಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಸಂಗ್ರಹಿಸುವ ಉದ್ದೇಶದಿಂದ ಈ ಸಭೆಯ ನಂತರ ನಿಮ್ಮಲ್ಲಿಗೆ ಬರುವವರಿದ್ದಾರೆ. ಅವರೊಂದಿಗೆ ಎಲ್ಲರೂ ಸಹಕರಿಸಬೇಕಾಗಿ ವಿನಂತಿ." ಎಂದು ಹೇಳಿದರು.

ಸ್ವಲ್ಪ ಸಮಯದ ಬಳಿಕ ಮಾರ್ಟಿನ್, ಕೊಯಿಲೋರಿಂದ ಭಕ್ತರ ವಿಳಾಸಗಳನ್ನು

ಪಡೆದು ಪುಟ್ಟ ಗ್ರಾಮವಾದುದರಿಂದ ನಡೆದುಕೊಂಡೇ ತನ್ನ ಆ್ಯಂಟೀಕ್ "ಬೇಟೆ"ಗೆ ಹೊರಟ. ಊರಿನ ಮೀನಿನ ಮಾರುಕಟ್ಟೆ ದಾಟಿ, ಮೂರು ರಸ್ತೆ ದಾಟಿದ ನಂತರ ಮೊದಲು ಸಿಕ್ಕ ಮನೆ ನರೋನಾರದ್ದು. ಅವರು ಇವನನ್ನು ಆದರದಿಂದಲೇ ಸ್ವಾಗತಿಸಿದರು. ಮಾರ್ಟಿನ್ ಅವರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಮನೆಯೊಳಗೆಲ್ಲಾ ಕಣ್ಣಾಡಿಸಿದ. ಅಲ್ಲಿ ಇದ್ದದ್ದೆಲ್ಲಾ ಪ್ಲಾಸ್ಟಿಕ್ ಕುರ್ಚಿ ಮೇಜು. ಇವನಿಗೆ ಬೇಕಾದದ್ದು ಯಾವುದೂ ಕಾಣಿಸಲಿಲ್ಲ. ಅವರೊಂದಿಗೆ ಬಾಯಿತುಂಬಾ ಮಾತನಾಡಿ ಮಾರ್ಟಿನ್ ಅವರನ್ನು ಬೀಳ್ಕೊಂಡು ಮುಂದಿನ ಮನೆಗೆ ಹೊರಟ. ಮುಂದಿನ ಮನೆ ಕ್ರಾಸ್ಟರದ್ದು. ಅವರ ಪತ್ನಿ ವೊಲ್ಗಾ ಇವರನ್ನು ಬರಮಾಡಿಕೊಂಡು ಟೀ ತರಲು ಹೋದಳು. ಮಾರ್ಟಿನ್‌ಗೆ ಇಲ್ಲೂ ನಿರಾಶೆಯೇ ಕಾದಿತ್ತು. ಯಾವ ಹಳೆಯ ಕಾಲದ ಪರಿಕರಗಳೂ ಕಣ್ಣಿಗೆ ಬೀಳಲಿಲ್ಲ. ಅಷ್ಟುಹೊತ್ತಿಗೆ ವೊಲ್ಗಾ ಟೀ ತಂದು, ಮಾರ್ಟಿನ್ ಮುಂದಿಟ್ಟು, "ಯೇಸುವೇ ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾನೆ. ನಮ್ಮಮ್ಮ ಮೂರು ತಿಂಗಳಿಂದ ಹಾಸಿಗೆ ಹಿಡಿದಿದ್ದಾರೆ. ನೀವು ಒಳಗೆ ಬಂದು ಅವರನ್ನು ಮಾತನಾಡಿಸಿ ಏನಾದರೂ ಸಂದೇಶ ಹೇಳಿದರೆ ನಮಗೆಲ್ಲಾ ಸಮಾಧಾನ" ಅಂತ ವಿನಂತಿಸಿದಳು. ಮಾರ್ಟಿನ್ ಅವಳೊಂದಿಗೆ ಒಳಗೆ ಹೋದ. ಅವಳಮ್ಮ ಮಂಚದ ಮೇಲೆ ಮಲಗಿದ್ದರು. ಹಳೆಯ ಕಾಲದ ಮಂಚ. ಮಾರ್ಟಿನ್‌ನ ನಿಷ್ಣಾತ ಕಣ್ಣುಗಳಿಗೆ ಆ ಮಂಚ ಕನಿಷ್ಟಪಕ್ಷ ನೂರು ವರ್ಷಗಳಷ್ಟಾದರೂ ಹಳೆಯದೆಂದು ತೋರಿತು. ಆದರೆ ಅದರ ಖರೀದಿಯ ಪ್ರಸ್ತಾಪ ಹೇಗೆ? ಇರಲಿ ಮುಂದೆಂದಾದರೂ ನೋಡೋಣ ಎಂದುಕೊಳ್ಳುತ್ತಾ, ಮಾರ್ಟಿನ್, ರೋಗಿಗೆ ಸಾಂತ್ವನದ ಮಾತುಗಳನ್ನು ಹೇಳಿ ನಂತರ ವೊಲ್ಗಾಳನ್ನು ಪಕ್ಕಕ್ಕೆ ಕರೆದು "ನಿಮ್ಮ ತಾಯಿಯನ್ನು ನೋಡಿದ್ದು ನನ್ನ ಅದೃಷ್ಟ. ಅವರ ಮುಖದಲ್ಲಿ ದೈವೀ ಕಳೆಇದೆ. ಅವರ ಕೊನೆಯ ಗಳಿಗೆ ಬಂದಾಗ ಖಂಡಿತವಾಗಿ ನನಗೆ ತಿಳಿಸಬೇಕು. ನಾನೇ ಬಂದು ಅವರನ್ನು ತಂದೆಯ ಲೋಕಕ್ಕೆ ಕಳಿಸುವೆ. ಇಗೋ ನನ್ನ ವಿಳಾಸದ ಚೀಟಿ. ಅಂತ್ಯ ಬಂದಾಗ ನನ್ನನ್ನು ಕರೆಯುವುದನ್ನು ಮರೆಯ ಬೇಡಿ" ಎಂದು ಹೇಳಿ ಮಾರ್ಟಿನ್ ಹೊರಟ.

ಮಾರ್ಟಿನ್ ಪಟ್ಟಿಯಲ್ಲಿದ್ದ ಮೂರನೆಯ ಹೆಸರು ಸೆಕ್ವೇರಾ. ಅಲ್ಲಿ ಹೋದರೆ ಅದು ಮನೆಯಂತೆ ಕಾಣಲಿಲ್ಲ. ಒಂದು ಮರದ ದಿಮ್ಮಿಗಳನ್ನು ಪರಿಷ್ಕರಿಸುವ ಕಾರ್ಖಾನೆಯಾಗಿತ್ತು ಅದು. ಇವನು ಗೇಟಿನ ಬಳಿ ಅನುಮಾನಿಸುತ್ತಾ ನಿಂತದ್ದನ್ನು ನೋಡಿ ಸೆಕ್ವೇರಾನೇ ಇವರ ಬಳಿ ಬಂದು ಒಳಗೆ ಕರೆದುಕೊಂಡು ಹೋದ. ಕಾರ್ಖಾನೆಯ ಪಕ್ಕದಲ್ಲೇ ಒಂದು ಪುಟ್ಟ ವಸತಿ ಇತ್ತು. ಇಂತಹ ಪುಟ್ಟ ಬಿಲದಲ್ಲಿ ಯಾವ ಆ್ಯಂಟೀಕ್ ಇರುಕ್ಕೆ ಸಾಧ್ಯ ಎಂದುಕೊಂಡು ಮಾರ್ಟಿನ್, "ಕಾರ್ಖಾನೆ ನೋಡಬಹುದೇ? "ಅಂತ ಕೇಳಿದ. ಸೆಕ್ವೇರಾ" ಅಗತ್ಯವಾಗಿ, ಬನ್ನಿ ತೋರಿಸುವೆ" ಎಂದು ಹೇಳಿ ಅತಿಥಿಯನ್ನು ಕಾರ್ಖಾನೆಯ ಒಳಕ್ಕೆ ಕರೆದುಕೊಂಡು ಹೋದ. ಸೆಕ್ವೇರಾನ ಮಗ ಫಿಲಿಪ್ ಬಂದು ಅತಿಥಿಗೆ ನಮಸ್ಕರಿಸಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮರದ ದಿಮ್ಮಿಗಳನ್ನು ಬಳಸಿ ನಡೆದು ಅಲ್ಲಿದ್ದ ಯಂತ್ರಗಳನ್ನು ತೋರಿಸಲು ಮುಂದಾದ.

ಮಾರ್ಟಿನ್‌ಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಯಂತ್ರದ ಪಕ್ಕದಲ್ಲಿ ಒಂದು ಹಳೆಯ ಮೇಜು. ಅದರ ಮೇಲೆ ಉಳಿ ಸುತ್ತಿಗೆ ಮುಂತಾದ ಮರಗೆಲಸದ ಹತಾರಗಳನ್ನಿಟ್ಟಿತ್ತು. ಮೇಜು ಪುರಾತನವಾಗಿದ್ದು ಧೂಳು ತುಂಬಿದ್ದರೂ, ಅದು ಬೀಟೆ ಮರದ ( ರೋಸ್ ವುಡ್) ಮೇಜೆಂದು ಸುಲಭವಾಗಿ ಹೇಳಬಹುದಾಗಿತ್ತು. ಮೇಜಿನ ಮೇಲ್ಭಾಗದಲ್ಲಿ ದಂತದ ಇನ್‌ಲೇ ಕೆಲಸವನ್ನು ಬಹು ನಾಜೂಕಾಗಿ

ಮಾಡಿತ್ತು. ಇಂತಹ ಮೇಜುಗಳು ಹದಿನೇಳನೆಯ ಶತಮಾನದಲ್ಲಿ ಪೋರ್ಚುಗೀಸ್ ತಜ್ಞರು ದೇಸೀ ಕುಶಲ ಕರ್ಮಿಗಳೊಂದಿಗೆ ಕೈ ಜೋಡಿಸಿ ಮಾಡಿದ್ದ ಅಪೂರ್ವ ಕಲಾಕೃತಿಗಳು. ಇವಕ್ಕೆ ಇಂದಿನ ಮಾರುಕಟ್ಟೆಯ ಬೆಲೆ ಕನಿಷ್ಟ ಒಂದೂವರೆ ಲಕ್ಷ. ಫಿಲಿಪ್ ಹೇಳುತ್ತಿದ್ದ ವಿವರಣೆಗಳು ಯಾವುವೋ ಮಾರ್ಟಿನ್  ಕಿವಿಗೆ ಬೀಳಲಿಲ್ಲ. ಇದರ ಖರೀದಿಯ ಪ್ರಸ್ತಾಪ ಹೇಗೆ? ವ್ಯಾಪಾರ ಕುದುರಿಸುವ ವಿಧಾನ ಏನು? ಇದನ್ನೆಲ್ಲಾ ಅವನ ಮನಸ್ಸು  ನಾಗಾಲೋಟದಲ್ಲಿ ಚಿಂತಿಸುತ್ತಿತ್ತು.

ಕೊನೆಗೆ ಮಾರ್ಟಿನ್ ಮಾತನಾಡಲು ಪ್ರರಂಭಿಸಿದ.

"ನೀವು ನಿಜಕ್ಕೂ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಮಂಗಳೂರಿನ ನಮ್ಮ ಚರ್ಚಿಗೆ ಹಲವು ಪುಲ್‌ಪಿಟ್‌ಗಳು, ಆಲ್ಟರ್‌ಗಳು ಮತ್ತು ಇನ್ನಿತರ ವಸ್ತುಗಳ ಅಗತ್ಯ ಇದೆ. ನೀವು ನಮಗೆ ಸಹಾಯ ನೀಡಲು ಸಾಧ್ಯವೇ?" ಅಂತ ಬಹು ವಿನಯದಿಂದ ಕೇಳಿದ. ಕುಗ್ರಾಮದಲ್ಲಿ ಮರಗೆಲಸ ಮಾಡುತ್ತಿರುವ ಸೆಕ್ವೇರಾ ಮಂಗಳೂರಿನಿಂದ ಒಂದು ದೊಡ್ಡ ಆರ್ಡರ್ ಬಂದರೆ ಬೇಡ ಅನ್ನುತ್ತಾನೆಯೇ?" ಖಂಡಿತ ನಾವು ಏನು ಬೇಕಾದರೂ ಮಾಡಿಕೊಡುತ್ತೇವೆ. ಯಾವಾಗ ನಿಮ್ಮಲ್ಲಿಗೆ ಬರಬೇಕು ಹೇಳಿ" ಎಂದ.

"ನೀವು ಒಪ್ಪಿದ್ದು ತುಂಬಾ ಸಂತೋಷ. ನಾನು ಊರಿಗೆ ಹಿಂತಿರುಗಿದ ತಕ್ಷಣ ನಿಮ್ಮನ್ನು ಸಂಪರ್ಕಿಸುವೆ. ಅಂದ ಹಾಗೆ ಆ ಯಂತ್ರದ ಪಕ್ಕದಲ್ಲಿರುವ ಮೇಜು, ಅದನ್ನು ಎಲ್ಲಿಂದ ಕೊಂಡಿರಿ?" ಅಂತ ಅಮಾಯಕನಂತೆ ಕೇಳಿದ ಮಾರ್ಟಿನ್.

"ಅಯ್ಯೋ ಅದು ನಮ್ಮಲ್ಲಿ ತಲೆತಲಾಂತರದಿಂದಲೂ ಇದೆ. ನಮ್ಮ ತಾತ ಕೂಡ ಅದನ್ನು ಹತಾರಗಳನ್ನಿಡಲು ಬಳಸುತ್ತಿದ್ದರು. ಯಾಕೆ ಕೇಳಿದಿರಿ?"

"ಆ ಮೇಜು ನಿಮ್ಮ ತಾತನ ಕಾಲದ್ದೆಂದ ಮೇಲೆ ಅದರ ಮೇಲೆ ನಿಮ್ಮ ತಾತನ ಆಶೀರ್ವಾದವಿದೆಯೆಂದಾಯಿತು. ಅಂತಹ ಪವಿತ್ರ ವಸ್ತು ನಮ್ಮ ಚರ್ಚಿನಲ್ಲಿದ್ದು ಪವಿತ್ರ ಪರಿಕರಗಳನ್ನು ಅದರ ಮೇಲಿಡುವಂತಾದರೆ ನಿಮ್ಮ ತಾತ ಎಷ್ಟು ಆನಂದಿಸುವರೋ ಅಂತ ಯೋಚಿಸುತ್ತಿದ್ದೆ" ಎಂದ ಚಾಣಾಕ್ಷ ಮಾರ್ಟಿನ್.

ಸೆಕ್ವಾರಾ,"ನೋಡಿ ಪಾದ್ರಿಗಳೇ, ನಾವು ಬಡವರು. ಆ ಮೇಜನ್ನ ನಿಮ್ಮ ಚರ್ಚಿಗೆ ದಾನ ಮಾಡುವ ಶಕ್ತಿ ನಮ್ಮಲ್ಲಿಲ್ಲ. ಅದಕ್ಕೆ ಏನಾದರೂ ಬೆಲೆಯನ್ನು ಕೊಟ್ಟರೆ ಸಂತೋಷದಿಂದ ಅದನ್ನು ನಿಮ್ಮ ಚರ್ಚಿನ ಬಳಕೆಗೆ ಕೊಡಲು ನಮಗೆ ಯಾವ ಅಭ್ಯಂತರವೂ ಇಲ್ಲ." ಅಂತ ನಮ್ರತೆಯಿಂದ ಹೇಳಿದ.

ಮಾರ್ಟಿನ್, "ಛೇ, ಛೇ, ದಾನ ಮಾಡಿ ಅಂತ ಖಂಡಿತಾ ಹೇಳ್ತಾ ಇಲ್ಲ. ಇನ್ನೊಂದು ಹೊಸಾ ಮೇಜು ಖರೀದಿಸಬೇಕಾದರೆ ಏಳು ನೂರು ರೂಪಾಯಿ ಆಗಬಹುದು. ಅಷ್ಟು ಮೊತ್ತವನ್ನು ನಾನು ಚರ್ಚಿನಿಂದ ಕೊಡಿಸುವೆ"  ಎಂಬ ಅಶ್ವಾಸನೆ ನೀಡಿದ ಮೇಲೆ ವ್ಯಾಪಾರ ಕುದುರಿತು.

"ಕೊಯಿಲೋ ಪಾದ್ರಿಯವರು ಅವರ ಆತಿಥ್ಯ ಸ್ವೀಕರಿಸಿಯೇ ಮಂಗಳೂರಿಗೆ ಹಿಂತಿರುಗಬೇಕೆಂದು ತಾಕೀತು ಮಾಡಿದ್ದಾರೆ. ಹಾಗಾಗಿ ನಾನು ಒಂದು ಗಂಟೆ ಹೊತ್ತಿಗೆ ಇಲ್ಲಿಗೆ ಬರುವೆ. ಮೇಜನ್ನು ಸಿದ್ಧಪಡಿಸಿದ್ದರೆ ಅನುಕೂಲ" ಎಂದು ಹೇಳಿ ಮಾರ್ಟಿನ್ ಹೊರಟ.

ಆ ಕಡೆ ಮಾರ್ಟಿನ್ ಹೊರಟಮೇಲೆ ಸೆಕ್ವೇರಾ, "ನಮ್ಮ ಅದೃಷ್ಟಾನೇ ಅದೃಷ್ಟ.

ಆ ತಾತನ ಕಾಲದ ಮೇಜಿಗೆ ಏಳು ನೂರು ಸಿಕ್ಕಿತಲ್ಲಾ!" ಅಂತ ಉದ್ಗರಿಸಿದ. ಫಿಲಿಪ್," ಡ್ಯಾಡಿ, ನನಗೊಂದು ಸಂಶಯ. ಆ ಪಾದ್ರಿ, ಮಾರುತಿ ವ್ಯಾನಿನಲ್ಲಿ ಬಂದಿರೋದು. ಇವತ್ತು ಬೆಳಗ್ಗೆ ನೋಡಿದೆ. ಈ ಮೇಜು ಅದರಲ್ಲಿ ಹಿಡಿಸುತ್ತೋ ಇಲ್ಲವೋ ತಿಳೀದಲ್ಲಾ. ಒಂದು ವೇಳೆ ಹಿಡಿಸದೇ ಇದ್ದರೆ ವ್ಯಾಪಾರಾನೂ ಇಲ್ಲ. ಮುಂದೆ ಅವರ ಆರ್ಡರ್ ಕೂಡಾ ಸಿಗದಿರಬಹುದು. "ಅಂತ ಹೇಳಿದ. ಸೆಕ್ವೇರಾ." ಅದೇನು ಸಮಸ್ಯೆ ಅಲ್ಲ. ನಮ್ಮ ಸೈಮನ್ ಹತ್ತಿರ ಇರೋದೂ ಮಾರುತಿ ವ್ಯಾನೇ. ಅದನ್ನ ಇಲ್ಲಿ ತರ್ತೀನಿ. ಮೇಜನ್ನು ಇಟ್ಟು  ನೋಡೋಣ" ಅಂತ ಹೇಳಿ ಸೈಮನ್ ಮನೆಗೆ ಹೊರಟ.

#########

ಒಂದು ಗಂಟೆಗೆ ಸರಿಯಾಗಿ ಮಾರ್ಟಿನ್ ತನ್ನ ವ್ಯಾನಿನಲ್ಲಿ ಬಂದ. ತಂದೆ ಮಗ ಹಸನ್ಮುಖರಾಗಿ ಗೇಟಿನ ಬಳಿ ನಿಂತಿದ್ದರು.

"ಎಲ್ಲಾ ರೆಡೀ ತಾನೇ?" ಅಂತ ಮಾರ್ಟಿನ್ ಕೇಳಿದ.

ಸೆಕ್ವೇರಾ, "ಎಲ್ಲಾ ರೆಡಿ. ನನ್ನ ಮಗ ಫಿಲಿಪ್‌ಗೆ ಬಹು ಮುಂದಾಲೋಚನೆ. ನಿಮ್ಮ ಕಾರಿನಲ್ಲಿ ಮೇಜು ಹಿಡಿಯುತ್ತೋ ಇಲ್ಲವೋ ಟೆಸ್ಟ್ ಮಾಡಿದ. ಮೇಜಿನ ಉದ್ದ ಸರಿಯಾಗಿತ್ತು. ಅಗಲ ಒಂದಿಂಚು ಜಾಸ್ತಿ ಇತ್ತು. ಅಲ್ಲದೆ ಮೇಜಿನ ಮೇಲಿನ ಹಲಗೆ ಸ್ವಲ್ಪ ಬಿರುಕು ಬಿಟ್ಟಿತ್ತು. ಅದಕ್ಕೆ ಮೇಜಿನ ಮೇಲಿನ ಹಲಗೆಯನ್ನು ಕಿತ್ತು ಒಂದು ಹೊಸ ಹಲಗೆಯನ್ನ ಪಾಲಿಷಿ ಮಾಡಿ ಜೋಡಿಸಿದ್ದೇವೆ. ಈಗ ಸುಲಭವಾಗಿ ಅದನ್ನ ವ್ಯಾನಿನಲ್ಲಿ ಕೂರಿಸಬಹುದು. ವ್ಯಾನ್ ರಿವರ್ಸ್ ಮಾಡ್ತೀರಾ ಪಾದ್ರಿಗಳೇ" ಅಂತ ಬಹು ಸೌಜನ್ಯದಿಂದ ಕೇಳಿದ ಸೆಕ್ವಾರಾ.

■



# ಕೈ ಕೊಟ್ಟ ಬೀಗದ ಕೈ

**ಇಂದಿರಾ ವೆಂಕಟೇಶ್**

ಒಂದು ಶನಿವಾರ ನನ್ನ ಮಗಳು ಗಾಯತ್ರಿಯ ಬರವಿಗಾಗಿ ಕಾಯುತ್ತಿದ್ದೆ. 10 ಘಂಟೆಗೆ ಬರಬೇಕಾಗಿದ್ದವಳು 12 ಘಂಟೆಗೆ ಬಂದಳು. ಅವಳ ಮುಖವನ್ನು ನೋಡಿದಾಗ ಅರೋಗ್ಯ ಸರಿಯಿಲ್ಲವೇನೋ ಎನ್ನುವ ಆತಂಕವಾಯಿತು. ಆದರೆ ಅವಳು ಬಂದ ತಕ್ಷಣ ಬೀಗದ ಕೈ ರೂಮಿನಲ್ಲಿಟ್ಟು ಬಾಗಿಲು ಹಾಕಿಕೊಂಡು ಬಿಟ್ಟೆನಮ್ಮ, ಈಗೇನು ಮಾಡುವುದು? ಎಂದು ಹೇಳಿ ಹೊರಗಡೆ ಬಾಗಿಲಿನ ಈ ಬೀಗದ ಕೈ ನಿನ್ನ ಹತ್ತಿರ ಜೋಪಾನವಾಗಿಟ್ಟುಕೊ ಎಂದು ನನ್ನ ಹತ್ತಿರ ಕೊಟ್ಟಳು. ನಮ್ಮ ಅಳಿಯ ಊರಿನಲ್ಲಿ ಬೇರೆ ಇರಲಿಲ್ಲ. ಏನು ಮಾಡುವುದು ಎಂದು ಯೋಚನೆ ಆಯಿತು. ತಕ್ಷಣ ಒಂದು ಉಪಾಯ ಹೊಳೆಯಿತು, ನನ್ನ ಚಿಕ್ಕ ಮಗಳು ಚಂದ್ರಿಕ ಅಂದು ಬ್ಯಾಂಕಿನಿಂದ ಬೇಗನೆ ಬಂದು ರೆಸ್ಟ್ ತೆಗೆದುಕೊಳ್ಳುತ್ತೇನೆ, ಇಂದುಶೇಖರ್ (ನನ್ನ ಭಾವಿ ಅಳಿಯ) ಕರೆದುಕೊಂಡು ಬಂದು ಬಿಡುತ್ತಾರೆ ಎಂದು ಬ್ಯಾಂಕಿಗೆ ಹೋಗುವಾಗ ಹೇಳಿದ್ದಳು.

ನೀನು ಆಫೀಸಿಗೆ ಹೋಗು, ಚಂದ್ರಿಕಾ, ಇಂದುಶೇಖರ್ ಬಂದ ನಂತರ ಅವರಿಗೆ ಹೇಳುತ್ತೇನೆ. ಅವರೇನಾದರೂ ಬೀಗ ತೆಗೆಯಬಹುದು ಎಂದು ಅವಳಿಗೆ ಆಶ್ವಾಸನೆ ಕೊಟ್ಟೆ. ಅವಳಿಗೂ ಸ್ವಲ್ಪ ಸಮಾಧಾನವಾದಂತಾಯಿತು, ಆ ರೂಮಿಗೆ ಸಾಮಾನ್ಯ ವಾದ ಬೀಗ ಹಾಕಿದ್ದುದರಿಂದ ತೆಗೆಯಲು ಆಗಬಹುದೇನೋ ಎಂಬ ವಿಶ್ವಾಸ. ಆಗ ತಾನೇ ಗೃಹಪ್ರ ವೇಶವಾದ ಮನೆ. ಜನ ಕಡಿಮೆ. ಅಳಿಯ ಬೇರೆ ಊರಿನಲ್ಲಿಲ್ಲ . ಹೀಗಾಗಿದೆಯಲ್ಲ ಎಂದು ಯೋಚನೆ ಮಾಡುತ್ತ ಲೇ ಕಾಲ ಕಳೆಯುತ್ತಿದ್ದೆ. ಅಂತೂ 3 ಘಂಟೆಗೆ ನನ್ನ ಭಾವಿ ಅಳಿಯಂದಿರ ಜೊತೆ ಚಂದ್ರಿಕಾ ಬಂದಳು. ಅವರನ್ನು ಊಟಕ್ಕೆ ಎಬ್ಬಿಸಿ, ಊಟವಾದ ನಂತರ, ಈ ಬೀಗದ ಕೈ ವಿಷಯ ತಿಳಿಸಿ, ಹೊರಡಿಸುವ ತಯಾರಿಯಲ್ಲಿದ್ದೆ, ನಮ್ಮ ಅಣ್ಣ ಬೀಗವನ್ನು ಸಲೀಸಾಗಿ ಪಿನ್ನು, ಮೊಳೆ, ಸ್ಕ್ರೂ ಡ್ರೈವರ್ ಸಹಾಯದಿಂದ ತೆಗೆಯುತ್ತಾನೆ. ನೀವು ಪ್ರಯತ್ನಿಸಿ ಎಂದು ಹೇಳಿದಾಗ, ಅವರು ಆಗಲ್ಲ ಎಂದು ಹೇಳಲೂ ಕೂಡ ಅವಕಾಶ ಕೊಡದೆ ಎಲ್ಲ ಸಲಕರಣೆಗಳನ್ನು ಒದಗಿಸಿದೆ. ಅವರ್ಯಾಕೆ ಆಗುಲ್ಲಾ ಎಂದು ಹೇಳುತ್ತಾರೆ? ಅವರ ಭಾವಿ ಹೆಂಡತಿಯೊಡನೆ ಏಕಾಂತವಾಗಿ ಮಾತನಾಡಲು ಸಮಯ ಒದಗಿರುವಾಗ? ಅವರುಗಳು ಸಂತೋಷವಾಗಿಯೇ ಒಪ್ಪಿದಂತಿತ್ತು.

ನನ್ನ ಮಗಳು ರೆಸ್ಟ್ ತೆಗೆದುಕೊಳ್ಳಲು ಸಿದ್ಧಳಿರಲಿಲ್ಲ. ತಕ್ಷಣ ಅವರೊಡನೆ ಹೊರಟಳು. ಹೋಗುವಾಗ ಅವಳಿಗೆ ಹೊರಗಡೆ ಬಾಗಿಲಿನ ಕೀ ಕೊಟ್ಟು , ಜೋಪಾನ ಎಂದು ಹೇಳಿ, ಬೇಗ ಬನ್ನಿ ಎಂದು ಹೇಳಿದೆ. 10–15 ನಿಮಿಷದಲ್ಲಿ ಬರುತ್ತೇನೆ, ಆಗದೆ ಇದ್ದ ರೆ ಮನೆಗೆ ಬಂದು ಬಿಡುತ್ತೇನೆ ಎಂದು ಆಶ್ವಾಸನೆ ನೀಡಿ ಹೊರಟಳು. ಏನೋ ದೊಡ್ಡ ಕೆಲಸ ಸಾಧಿಸಿದಂತೆ ಒಳಗೆ ಬಂದೆ. ಹಿಂದೆಯೇ ನಮ್ಮ ಹಿರಿಯ ಮಿತ್ರರೊಬ್ಬರು ಬಂದರು. ನಿಮ್ಮ ಅಳಿಯ, ಮಗಳು ಸಿಕ್ಕಿದ್ದ ರು, ಶನಿವಾರವೂ ಈಗ ತಾನೇ ಬಂದು ಹೊರಟರಲ್ಲ ಅಂತ ಏನೋ ಅಸಮಾಧಾನ ಸೂಚಿಸಿದರು. ಆದರೆ ನಾನೆ ಕಳಿಸಿದ್ದೇನೆ ಎಂದು ಹೇಳುವ ಧೈರ್ಯ ಬರಲಿಲ್ಲ.

3:30 ಕ್ಕೆ ಯಜಮಾನರು ಬ್ಯಾಂಕಿನಿಂದ ಬಂದರು. ಚಂದ್ರಿಕಾ ಬಂದಳಾ? ಎಂದು ಕೇಳಿದರು. ಅವರಿಗೆ ನಡೆದ ವಿಷಯವೆಲ್ಲ ತಿಳಿಸಿ , ಹೋಗಿ ಅರ್ಧ ಘಂಟೆ ಆಯಿತು, ಇನ್ನೇನು ಬರಬಹುದು ಎಂದು ಹೇಳಿದೆ.

ಮದುವೇಗೆ ಮುಂಚೇನೇ ಅಳಿಯರಿಗೆ ಕೆಲಸ ಹಚ್ಚ ಕ್ಕೆ ಶುರು ಮಾಡಿದೆಯಲ್ಲಾ, ಅವರಿಗೂ ಅದೇ ಬೇಕಾಗಿತ್ತೇನೋ ಎಂದು ಸ್ವಲ್ಪ ಅಸಮಾಧಾನದ ಧ್ವ ನಿಯಲ್ಲೇ ಹೇಳಿ ಊಟ ಮಾಡಿ ಮಲಗಿದರು. ಅಲ್ಲಿಗೆ 4 ಘಂಟೆಯಾಗಿತ್ತು. ಈ (ಭಾವಿ) ನವ ದಂಪತಿಗಳು ಮಾತ್ರ ಪತ್ತೆಯಿಲ್ಲ. ನನಗೆ ಈಗ ಯೋಚನೆ ಆರಂಭವಾಯಿತು. 10, 15 ನಿಮಿಷದಲ್ಲಿ ಬರುತ್ತೀನಿ ಎಂದು ಚಂದ್ರಿಕಾ ಹೇಳಿದ್ದಳು. ಇದುವರೆಗೂ ಏಕೆ ಬಂದಿಲ್ಲ. 5:30 ಕ್ಕೆ, ಮದುವೆಯ ಕೆಲಸದಲ್ಲೆ ಅತಿ ಮುಖ್ಯ ವಾದ ಸೀರೆ ಪರ್ಚೆಸಿಂಗ್‌ಗೆ ಬೇರೆ ಹೋಗುವುದೆಂದು ಮೂರು ದಿನದ ಹಿಂದೆಯೇ ತೀರ್ಮಾನವಾಗಿತ್ತು. ಇವಳು ಬಂದು ರೆಸ್ಟ್ ಬೇರೆ ತೊಗೋಬೇಕು. ಏಕೆ ಬರಲಿಲ್ಲ? ಎಂದು ಆತಂಕ, ಬೇಸರ, ಕೋಪ, ಎಲ್ಲವೂ ಮಿಳಿತವಾಗಿತ್ತು. ಏನು, ಬೀಗ ತೆಗೆದು ಆರಾಮವಾಗಿ ಅಲ್ಲೇ ರೆಸ್ಟ್ ತೆಳೆದುಕೊಳ್ಳುತ್ತ ಇದ್ದಾರೇನೋ ಎಂದು ಚಡಪಡಿಸಿದೆ.

ಮದುವೆಗೆ ಮುಂಚೆ ಇವರಿಬ್ಬರನ್ನು ಕಳಿಸಿದ್ದು ನಂದೇ ತಪ್ಪು ಎಂದು ನನ್ನನ್ನೇ ಹೀಯಾಳಿಸಿಕೊಂಡೆ. ಇಂದುಶೇಖರ್‌ಗೆ ಗೊತ್ತಾಗದಿದ್ದರೂ ಈ ಚಂದ್ರಿಕಾಗಾದರೂ ಬುದ್ಧಿ ಬೇಡವೇ? ಎಂದು ಮನಸ್ಸೆಂದರೂ, ಅವಳು ಹಾಗೆ ಮಾಡುವವಳಲ್ಲ, ಬೇಗನೆ ಬಂದು ಬಿಡುತ್ತಿದ್ದಳು, ಏನಾಗಿರಬಹುದು? ಎಂದು ಮತ್ತೊಂದು ಯೋಚನೆ.

ಸ್ಕೂಟರ್ ಮೇಲೆ ಹೋಗುವಾಗ ಏನಾದರು ಆಕ್ಸಿಡೆಂಟ್ ಆಗಿರಬಹುದೇ? ನೆನೆಸಿಕೊಂಡು ಮೈ ಝುಮ್ ಎಂದಿತು. ಹಾಗೇನಾದರೂ ಚಂದ್ರಿಕನಿಗೆ ಏನಾದರು (ಹಿಂದೆ ಕುಳಿತವರಿಗೆ ಜಾಸ್ತಿ) ಆಗಿರಬಹುದೇ? ಹಾಗಿದ್ದರೆ, ಇಂದುಶೇಖರ್ ಬಂದು ಹೇಳುತ್ತಾ ಇದ್ದರು. ಅಥವಾ ಇಬ್ಬರಿಗೂ ಏನಾದರೂ ಆಗಿ, ಮೂರನೆಯವರು ಯಾರಾದರೂ ನಮ್ಮ ಮನೆ ಹುಡುಕಿಕೊಂಡು ಬರುವರೇ? ಇದೇನು ಗ್ರಹಚಾರವಪ್ಪ? ಮೊದಲೇ ನೊಂದಿರುವ ಮನಕ್ಕೆ ಇದೇನು ಮಾಡಿಕೊಂಡೆ? ಎಂಬ ದು:ಖ. ಎಲ್ಲಾ ದೇವರಿಗೂ ಹರಕೆ ಹೊತ್ತಾಯಿತು. ಯಜಮಾನರು ತೊಂದರೆಯೂ ಇಲ್ಲದೆ ಆರಾಮವಾಗಿ ಮಲಗಿದ್ದರು.

ಅವರು ಎದ್ದು ಎಲ್ಲಿ ಕೂಗಾಡುತ್ತಾರೋ ಎನ್ನುವ ಭಯ. ನನ್ನ ಆತಂಕ ಯಾರಲ್ಲಿ ಹೇಳಲಿ ಎಂದು ಒದ್ದಾಡುತ್ತಿದ್ದೆ. 4:30 ಘಂಟೆ ಆಯಿತು. ನನಗೆ ಗಾಬರಿ ಹೆಚ್ಚಾಯಿತು, ಏನೋ, ಒಂದು ರೀತಿ ಸಂಕಟವೇ ಹೆಚ್ಚಾಯಿತು. ನಿಜವಾಗಿಯೂ ಇವರಿಬ್ಬರು ಯಾವುದೊ ಅಪಾಯಕ್ಕೆ ಸಿಕ್ಕಿಕೊಂಡಿದ್ದರೆಂದು ಖಚಿತವಾಗಲು ತೊಡಗಿತು. ಏಕೆಂದರೆ, ಅಲ್ಲೇ, ನಮ್ಮ ಎದುರು ಮನೆಯಲ್ಲೇ, ಫೋನ್ ಇತ್ತು. ಫೋನ್ ಮಾಡಾದರೂ ಚಂದ್ರಿಕಾ ತಿಳಿಸುತ್ತಿದ್ದಳು. ಅಥವಾ ಅಲ್ಲಿಂದಲೇ ಸ್ಕೂಟರ್ನಲ್ಲಿ ಬಂದೆ ಹೇಳಬಹುದಿತ್ತು. ಇದ್ಯಾವುದು ಇಲ್ಲದೆ ಮೇಲೆ (ಮಗಳ ಮನೆ ವಿದ್ಯಾಪೀಠ, ನಮ್ಮ ಮನೆ ಬ್ಯಾಂಕ್ ಕಾಲೋನಿ), ನಾವು ಭೀಕರ ವರ್ತಮಾನ ಕೇಳಬೇಕಾಗಿದೆಯೇ? ಯಾರಿಗೆ ಏನು ತೊಂದರೆಯೇ? ಎಂದು ಅಳು ಬರುವ ಸ್ಥಿತಿಗೆ ಬಂದು ಬಿಟ್ಟಿದ್ದೆ. ನಾವೇ ಹೋಗಿ ನೋಡಿ ಬರೋಣವೆಂದರೆ ಯಜಮಾನರು ಆಯಾಸದಿಂದ ಮಲಗಿದ್ದರು. ಎಬ್ಬಿಸುವ ಮನಸ್ಸಾಗಲಿಲ್ಲ.

5 ಘಂಟೆಗೆ ನಾನೆ ರಿಕ್ಷಾ ಮಾಡಿ ಹೋಗೋಣವೆಂದು ತಯಾರಾಗುತ್ತಿದ್ದೆ. ಚಂದ್ರಿಕಾ, ಇಂದುಶೇಖರ್ ಬಂದರು. ಮೊದಲನೇ ದಿನ ಅಳಿಯನನ್ನು ಕಂಡಾಗ ಅದ ಸಂತೋಷಕ್ಕಿಂತ ಇಮ್ಮಡಿ ಸಂತೋಷವಾಗಿ ಮನ ಅರಳಿತು. ಅದುವರೆಗೂ ಇದ್ದ ಮನಸ್ಸಿನ ದುಗುಡವೆಲ್ಲ ಅಳಿದು ಸಂತೋಷವಾಯಿತು. ಆದರೆ ಚಂದ್ರಿಕಾ

ಸ್ಕೂಟರ್ ನಿಂದ ಇಳಿಯುವಾಗ, ನಂಗೆ ಹೆದರಿಕೆ, ನಾನು ಏನೂ ಹೇಳಲ್ಲ, ನೀವೇ ಎಲ್ಲ ಹೇಳಿ ಎಂದ ಮಾತು ಕಿವಿಗೆ ಬಿತ್ತು. ಏನಾಗಿರಬಹುದು ಎಂದು ಯೋಚಿಸುತ್ತಿರುವಾಗಲೇ, ಅಳಿಯಂದಿರು ಎಲ್ಲ ವಿಷಯ ತಿಳಿಸಿದರು. ಅವರು ಹೋಗುವಾಗಲೇ, ಚಂದ್ರಿಕಾ ಹೊರಗಡೆ ಬಾಗಿಲಿನ ಬೀಗದ ಕೈ ಎಲ್ಲೋ ಬೀಳಿಸಿಕೊಂಡಳಂತೆ. ಅಲ್ಲಿ ಹೋಗಿ ಕೇಳಿದಾಗ, ಎಲ್ಲೋ ಬಿದ್ದು ಹೋಗಿದೆ ಎಂದು ಗಾಬರಿಗೊಂಡಳಂತೆ. ಅದನ್ನು ದಾರಿ ಉದ್ದಕ್ಕೂ ಹುಡುಕಿದರಂತೆ. ಸಿಗದೇ ಇದ್ದಾಗ, ನಮ್ಮ ಅಳಿಯಂದರು ಗಾಂಧಿ ಬಜಾರ್‌ಗೆ ಹೋಗಿ, ಬೀಗದ ಕೈ ಮಾಡುವವರನ್ನು ಕರೆದುಕೊಂಡು ಬಂದು, ಹೊರಗಡೆ ಬಾಗಿಲಿನ ಕೀ ಮಾಡಿಸಿ, ಒಳಗಿನ ಬೀಗವನ್ನು ಅವನಿಂದಲೇ ತೆಗಿಸಿ, ಅವನನ್ನು (ಮುಂಚಿನ ಕರಾರಿನಂತೆ) ಮತ್ತೆ ಅಂಗಡಿಗೆ ಬಿಡಲು ಹೋಗುವಾಗ, ಸ್ಕೂಟರ್ ಪಂಕ್ಚರ್ ಆಯಿತಂತೆ. ಇನ್ನು, ಆ ಸ್ಕೂಟರ್ ಅನ್ನು ದಾರಿಯುದ್ದಕ್ಕೂ ತಳ್ಳಿಕೊಂಡು ಬಂದು ರಿಪೇರಿ ಮಾಡಿಸಿಕೊಂಡು ಮತ್ತೆ ಗಾಯತ್ರಿ ಮನೆ ಹತ್ತಿರ ಹೋಗುವ ವೇಳೆಗೆ, ಎಷ್ಟು ಹೊತ್ತಾಗಿರಬಹುದು? ನೀವೇ ಊಹಿಸಿ ಎಂದು ಒಂದೇ ಸಮನೆ ಹೇಳಿ ನಿಲ್ಲಿಸಿದಾಗ, ರೆಸ್ಟ್ ತೆಗೆದುಕೊಳ್ಳ ಬೇಕೆಂದಿದ್ದ ಚಂದ್ರಿಕಳಿಗೆ ರೆಸ್ಟ್ ಲೆಸ್ ಅದ ವಿಷಯ ತಿಳಿದು ಬೇಜಾರಾಯಿತು.

ಏನು ಮಾಡುವದು? ಸೀರೆ ಅಂಗಡಿಗೆ ಹೋಗಲು ತಯಾರಾಗು, ಗಾಯತ್ರಿ ಅಂಗಡಿ ಹತ್ತಿರ ಬಂದಿರುತ್ತಾಳೆ ಎಂದು ಹೇಳಿದಾಗ, ಅವಳ ಮುಖ ನೋಡಬೇಕಾಗಿತ್ತು. ಆ ಭಂಗಿಯಲ್ಲಿ, ಅಳಿಯಂದಿರಿಗೆ ಅವಳು ಮತ್ತಷ್ಟು ಚೆನ್ನಾಗಿ ಕಂಡಿರಬಹುದು ಎಂದು ಊಹಿಸಲೇ? ನವಜೀವನಕ್ಕೆ ಕಾಲಿಡುವ ಮೊದಲೇ ನಡೆದ ಈ ಘಟನೆ, ಅವರ ಜೀವನದಲ್ಲಿ ಎಂದೆಂದೂ ಹಚ್ಚ ಹಸಿರಾಗಿ ನಿಲ್ಲುವಂತದ್ದಲ್ಲವೇ?

[ಇಲ್ಲಿ ವಿವರಿಸಿರುವ ಘಟನೆ ನಿಜವಾಗಿಯೂ ಇಲ್ಲಿ ಬರೆದಿರುವಂತೆಯೇ ನಡೆದದ್ದು. ಪ್ರಾಯಶ: 1986 ಜೂನ್ ನಲ್ಲಿ. ಫೋ'ನ್ – ಮೊಬೈಲ್ ಇರಲಿ, ಲ್ಯಾಂಡ್ ಲೈನ್ ಕೂಡ  ಇಲ್ಲದ ದಿನಗಳವು. ಈ ಲೇಖನವನ್ನು ಬರೆದಿರುವವರು ನಮ್ಮ ತಾಯಿ ದಿವಂಗತ ಶ್ರೀಮತಿ ಇಂದಿರಾ ವೆಂಕಟೇಶ್ ಅವರು. ಪ್ರಖ್ಯಾತ ಮಹಿಳಾ ಗಮಕಿಯಾಗಿ ಕಲಾಶ್ರೀ ಪ್ರಶಸ್ತಿ ಭಾಜನರಾದವರು. ಹಾಗೆಯೇ, ಈ ಸೆಲ್ಫ್ ಲಾಕಿಂಗ್ ಬೀಗಗಳ ವಿಷಯವು ಕೆಲವಾದರೂ ಓದುಗರಿಗೆ ಪರಿಚಯವಿರಬಹುದು. ಆದದ್ದೇನೆಂದರೆ ಮುಂದಿನ ಬಾಗಿಲಿಗೆ ಈ ಸೆಲ್ಫ್ ಲಾಕ್ ಇತ್ತು. ನಾನು ಅದರ ಕೀ ಯನ್ನು ಒಳಗಿನ ರೂಮ್‌ನಲ್ಲಿ ಇಟ್ಟು, ಆರೂಮನ್ನು ಸಾಧಾರಣ ಬೀಗದಿಂದ ಲಾಕ್ ನಾಡಿ, ಮುಂದಿನ ಬಾಗಿನಲ್ಲೂ ಹಾಗೆ ಎಳೆದು ಬಿಟ್ಟಿದ್ದೆ. ಅದು ಲಾಕ್ ಆಗಿಹೋಯಿತು. ಆ ಲಾಕ್‌ನ ಮತ್ತೊಂದು ಕೀ ನಮ್ಮ ಅಮ್ಮನ ಮನೆಯಲ್ಲಿ ಇಟ್ಟಿದ್ದೆ. ಆಫೀಸ್‌ಗೆ ಹೋಗುವ ಮೊದಲು, ಅಮ್ಮನ ಮನೆಗೆ ಹೋಗಿ, ಅವರ ಜೊತೆ ಇದ್ದು ಆಮೇಲೆ ಆಫೀಸ್‌ಗೆ ಹೋಗುವುದು–ಇದು ನನ್ನ ದಿನಚರಿಯಾಗಿತ್ತು. ಮುಂದಿನದ್ದೆಲ್ಲವನ್ನು ನಮ್ಮ ಅಮ್ಮನೇ ಬರೆದಿದ್ದಾರೆ. – ಶ್ರೀಮತಿ ಗಾಯತ್ರಿ ಇಂದಾವರ.

(ಕೊನೆಯ ಒಳ ರಕ್ಷಾಪುಟವನ್ನು ನೋಡಿ) ■

**ನನ್ನ ಯಜಮಾನರು ರಾತ್ರಿಯಲ್ಲಿ ವಿಪರೀತ ಗೊರಕೆ ಹೊಡೆಯುತ್ತಾರೆ. ಇದರಿಂದಾಗಿ ನನ್ನ ನಿದ್ದೆ ಹಾಳು. ಇದಕ್ಕೆ ಏನಣ್ಣಾ ಉಪಾಯ**

ಈ ತೊಂದರೆ ಕೇವಲ ಕೆಲವೇ ದಿನಗಳು ತಂಗೆಮ್ಮಾ. ಅನಂತರ ಅಭ್ಯಾಸವಾಗಿ ಗೊರಕೆಯೇ ಜೋಗುಳವಾಗುತ್ತೆ **–ಉತ್ತರ ಭೂಪ**

# ಬೀಳ್ಹೋಗ್‌ಬೇಡಿ ನನ್ನ

ಸುಮಾವೀಣಾ

ಒಂದು ಕಾಲದಲ್ಲಿ ಪತಿರಾಯರ ಹೆಗಲ ಮೇಲೆ ಕೈ ಹಾಕಿ ಝುಂ ಅಂತ ಬೈಕ್ ಏರಿ ಸವಾರಿ ಹೊರಡುವ ಖುಷಿ ಬೆರೆಯೇ ಇತ್ತು. ರಾಯಲ್ ಎನ್ಫೀಲ್ಡ್, ಬುಲೆಟ್, ಡಿಯೋ ಎಲ್ಲ ಇತ್ತೀಚಿನವು. ನಮ್ ಕಾಲದ ಹೀರೋ ಅಂದರೆ ಹೀರೋ ಹೊಂಡಾ ಸ್ಪ್ಲೆಂಡರ್. ನಾವು ಹೊಸ ಸ್ಪ್ಲೆಂಡರ್ ತೆಗೆದುಕೊಂಡ ಖುಷಿಯಲ್ಲಿ ಹೊಳೆನರಸೀಪುರದಿಂದ ಚನ್ನರಾಯಪಟ್ಟಣಕ್ಕೆ ಹೊರೆಟೆವು. ಸ್ಯಾರಿ ಗಾರ್ಡ್ ಇನ್ನೂ ಹಾಕಿಸಿರಲಿಲ್ಲ. ಹೊಸ ಆಕಾಶ ಬಣ್ಣದ ನೀಲಿ ಸೀರೆ ಉಟ್ಟ ನಾನು ಹಾಲು ಬಿಳುಪಿನ ಶರ್ಟ್ ಧರಿಸಿದ ನಮ್ಮವರು. ತುಸು ವೇಗದಲ್ಲಿಯೇ ಪ್ರಾರಂಭಿಸಿದ ನಮ್ಮ ಸವಾರಿ ಬಹಳ ಚೆನ್ನಾಗಿತ್ತು. ಚನ್ನರಾಯಪಟ್ಟಣ ರೈಲ್ವೆ ಟ್ರ್ಯಾಕ್ ಧಾಟಿ ಮುಂದೆ ಹೋಗುವಾಗ ಸೀರೆ ಚಕ್ರಕ್ಕೆ ಸಿಕ್ಕುತ್ತಿತ್ತು ಅದನ್ನು ನೋಡಿದವರು ಸೀರೆ... ಸೀರೆ... ಎಂದು ಕೂಗುತ್ತಾ ಕೈಯಲ್ಲಿ ಸುತ್ತುತ್ತಿದೆ ಎನ್ನುವ ಸನ್ನೆ ಮಾಡಿದರು. ನನಗೋ ಗಾಬರಿ! ನಮ್ಮೆಜಮಾನರು" ಇಳಿ! ಇಳಿ! ಎಂದು ಸೂಚನೆ ಕೊಡುತ್ತಲೇ ಇದ್ದರು.. ನನಗೋ ಭಯ... ಎಲ್ಲಿ ಸೀರೆ ಬಿಚ್ಚಿ ಹೋಗಿದೆಯೋ ಎಂದು ಕೊಳ್ಳುತ್ತಲೇ ಬೇಗ ನೆರಿಗೆ ಸೆರಗು ಎಲ್ಲಾ ಕೈಯಲ್ಲಿ ಮುದುರಿಕೊಂಡೆ ಇಳಿದೆ...! ಸಧ್ಯ! ಸೀರೆ ಸೊಂಟದಲ್ಲೆ ಇತ್ತು ಬದುಕಿತು ಬಡ ಜೀವ ಎನ್ನುತ್ತ ಇರುವಾಗಲೆ ಎಡಕಾಲ ಬಳಿ ಸೀರೆ ಡ್ಯಾಮೇಜ್ ಆಗಿರುವ ಸೆನ್ಸ್ ಆಯಿತು ಹಾಗೆ ತಿರುಗಿ ಕಷ್ಟ ಪಟ್ಟು ನೋಡಿದೆ ಕಾಲ ಬಳಿ ಒಂದರ್ಧ ಅಡಿಯಷ್ಟು ಚಕ್ರಕ್ಕೆ ಸಿಕ್ಕಿ ನವೆದು ಹೋಗಿತ್ತು ಈಗ ಡ್ಯಾಮೇಜ್ ಕಂಟ್ರೋಲ್ ಹೇಗೆ ಅನ್ನುವ ಪ್ರಶ್ನೆ ಕಾಡುತ್ತಿತ್ತು. ಬೇರೆಲ್ಲೂ ಹೋಗಲು ಮನಸ್ಸಾಗದೆ ದೊಡ್ಡಮ್ಮನ ಮನೆಗೆ ಹೋದೆವು.. ನಮ್ಮನ್ನು ಕಾಣುತ್ತಲೆ ದೊಡ್ಡಮ್ಮ "ಅಳಿಯದೇವರು.. ಅಳಿದೇವರು.... "ಎಂದೋಡಿ ಬಂದು ಮಾತನಾಡಿಸಿದರು ನನ್ನನ್ನು ಕಂಡು "ಬಂದ್ಯಾ? ಬಾ..." ಅಂದರು ಮನೆಯಲ್ಲಿ ಯಾರೂ ಇಲ್ಲದೆ ಇದ್ದರೆ ಬೇಗ ಹೋಗಿ ಸೀರೆ ಸರಿ ಮಾಡಿಕೊಂಡು ಬಿಡುತ್ತಿದ್ದೆ. ಅದರೆ ಅಲ್ಲಿ ಅಣ್ಣ ಎದುರೇ ಇದ್ದ. ನೋಡಿದ ಕೂಡಲೆ "ಓ ತಂಗ್ಯಮ್ಮ ಬರಬೇಕು ಬಲಗಾಲಿಡ್ತ...." ಎಂದು ಕೈ ತೋರಿಸಿದ ಬಲಗಾಲಿಟ್ಟು ಒಳಗೆ ಹೋದರೂ ಎಡಗಾಲು ಇಟ್ಟು ಒಳಹೋದರೂ ಸೀರೆ ನವೆದು ಹೋಗಿರುವುದು ಕಾಣುವಂತಿತ್ತು....ಹಾಗೆ ಹಿಂದು ಮುಂದು ನೋಡುತ್ತಿದ್ದೆ ಅಷ್ಟು ಬೇಗ ದೊಡ್ಡಮ್ಮ ನಿಗೆ ಅಳಿಯದೇವರಿಂದ ವಿಷಯ ತಿಳಿದು "ಯಾಕೆ.... ಚಿಂತೆ? ಮ್ಯಾಚಿಂಗ್ ಸಿರೆ ಕೊಡ್ತೀನಿ ಬಾ ನಿಮ್ಮತ್ತಿಗೆವು ಬೇಜಾನ್ ಸೀರೆ ಇದ್ದಾವೆ. ಸರಿಯಾಗಿ ಕೂತ್ಕೊಂಡು ಬರಬೇಕು ತಾನೆ! ಎಂದು ಜೋರಾಗಿ ಹೇಳಿದರೆ ನಮ್ಮಣ್ಣ ದಢಕ್ಕನೆ ಎದ್ದು ನೋಡಿ "ವಾ ಏನ್ ಬೈಕ್ ಓಡ್ಸಕ್ ಬರಲ್ವಂತ....ಇಷ್ಟಾಗಿದ್ದಕ್ಕೆ ಪರವಾಗಿಲ್ಲ ಇನ್ನೂ...ರೆ....ನ್ ಮರ್ಯಾದೆ ಏನಾಗಿರದೂ ಅದೂ ಆ ಸರ್ಕಲ್ಲಲಿ ಅದು ಬಿ. ಎಂ. ರೋಡಲ್ಲಿ.... ಎನ್ನುತ್ತಾ ರಾಗ ಎಳಿತಿದ್ದ ನನಗೆ ಒಳಗೆ ಹೋಗಕ್ಕೆ ಬಿಟ್ಟರೆ ಸಾಕಲ್ಲ ಅನ್ನಿಸಿತ್ತು ಒಳಕ್ಕ್ ಹೋಗು ಅಂತ ಕೈ ತೋರಿಸಿದ....ನೆರಿಗೆ ಸೆರಗು ಒಟ್ಟಿಗೆ ಮುದುರಿಕೊಂಡು ಒಳಹೋಗಿ ಸೀರೆ ಉಲ್ಟ ಮಾಡಿ ಉಟ್ಟುಕೊಂಡು ಬಂದು ದೊಡ್ಡಪ್ಪನ ಫೋಟೊಗೆ ನಮಸ್ಕಾರ ಮಾಡಿದೆ ಬಚಾವಾದೆ ತಂದೆ ದೊಡ್ಡ ಗಂಡಾಂತರದಿಂದ ಗೆದ್ದು ಬಂದೆ ಅಂತ ಅಷ್ಟಕ್ಕೂ ಅದು ಗಾರ್ಡನ್ ಸೀರೆಯಾಗಿತ್ತು ಸೆರಗು ಬಾರ್ಡರ್ ಏನೂ ಇರಲಿಲ್ಲ.....ಇನ್ಯಾರಿಗೂ ಸ್ಯಾರಿ ಹೀಗಾಗಿದೆ ಅಂತ ಗೊತ್ತಾಗುವ ಹಾಗಿರಲಿಲ್ಲ. ಡ್ಯಾಮೇಜ್ ಕಂಟ್ರೋಲ್ ಆಗಿತ್ತು.

ಅಲ್ಲಿಂದ ಹೊಳೆನರಸೀಪುರಕ್ಕೆ ಬರುವಾಗಲೆ ಸ್ಯಾರಿ ಗಾರ್ಡ್ ಹಾಕಿಸಿಕೊಂಡು ಬಂದೆವು. ಮನೆಗೆ ಬಂದು ಮತ್ತೆ ಸೀರೆ ಎಲ್ಲಿ ಡ್ಯಾಮೇಜ್ ಆಗಿದೆ ಎಂದು ನೋಡಿದರೆ ಆಕಾಶದ ನೀಲಿ ಸೀರೆಯಲ್ಲಿ ನವೆದು ಜಾಳಾಗಿದ್ದ ಜಾಗದಲ್ಲಿ ಚಂದ್ರ ಇಣುಕುತ್ತಿರಲಿಲ್ಲ ನಕ್ಷತ್ರಗಳು ಇಣುಕುತ್ತಿದ್ದವು. ಇದಾಗಿದ್ದು 2002ರಲ್ಲಿ ಸುದ್ದಿ ಆಚೆ ಹೋಗದಂತೆ ಕಾಪಾಡಿಕೊಂಡೆ.

ಏನೇ ಆದರೂ ಬೈಕಲ್ಲಿ ಹೋಗೋ ಮಜಾವೇ ಬೇರೆ ಆಗ ಎಂಥ ಹಮ್ಪ್ ಹಾರಿಸಿದರೂ ಭಯವಾಗುತ್ತಿರಲಿಲ್ಲ ಆವಾಗ ಅದೊಂಥರಾ ಥ್ರಿಲ್ ಇರುತ್ತಿತ್ತು. ಮಡಿಕೇರಿ ನಂತರ ನಾನು ಬಂದಿಳಿದಿದ್ದೆ ಅರಕಲಗೂಡಿಗೆ... ಅಲ್ಲೂ ಬೇಗನೆ ಆಪ್ತವಲಯ ಸೆಟ್ ಆಯಿತು. ಒಂದು ದಿನ ಅವರನ್ನೆಲ್ಲಾ ನೋಡಬೇಕೆಂದು ಹೊರಟೆವು ಹೊಳೆನರಸೀಪುರ ಅಂದರೆ ಸೌತೆಕಾಯಿ ಫೇಮಸ್ ಏಳೆವನ್ನು ಆರಿಸಿ ತೆಗೆದುಕೊಂಡು ಆಪ್ತರಾದ ನೀರಿನವರ ಮನೆಗೆ ಹೋಗಬೇಕಿತ್ತು. ನೀರಿನವರ ಮನೆ ನೀರೊಳಗೆ ಇತ್ತ ಎನ್ನುವ ಪ್ರಶ್ನೆ ಬರಬಹುದು. ಹಾಗಲ್ಲ ಬೋರ್ವೆಲ್ ನೀರು ಗಡಸು ಹೆಚ್ಚೂ ಅಂತ ಹೇಮಾವತಿ ನೀರನ್ನು ಬಿಂದಿಗೆಯಲ್ಲಿ ಹಿಡಿದಿಟ್ಟು ಕೊಡುತ್ತಿದ್ದರು ಅದಕ್ಕೆ ಆ ಮನೆಯವರಿಗೆ ನೀರಿನ ಮನೆಯವರೂ ಅನ್ನೋ ನಮ್ ಹೆಸರು ಇಂದಿಗೂ ಚಾಲ್ತಿಯಲ್ಲಿದೆ. ಆ ದಿನ ಹೊರಟು ನಾಗಲಾಪುರ ಗೇಟ್ ಹತ್ತಿರ ಸೇತುವೆ ಮೇಲೆ ಹೋಗುತ್ತಿರಬೇಕಾದರೆ ಎದುರಿನಿಂದ ಕಾರಿನಲ್ಲಿ ಬಂದ ದಂಪತಿಗಳು ನಮ್ಮನ್ನು ವಿಚಿತ್ರ ಅನ್ನಿಸುವಂತೆ ನೋಡ ನೋಡುತ್ತಲೆ ಮುಂದೆ ಸರಿದರು. ನನಗೆ ನಾವು ಬೈಕಲ್ಲಿದ್ದೇವೆ ಅವರು ಕಾರಲ್ಲಿದ್ರಲ್ಲ ಅದಕ್ಕಿರಬೇಕ? ಅನ್ನಿಸಿತು ಕಡೆಗೆ ಬೈಕಲ್ಲಿ ಹೋಗುವ ಮಜಾ ಅವರಿಗೇನು ಗೊತ್ತು? ಎನ್ನುತ್ತಾ ಮುಂದೆ ಹೊರಟೆವು. ಹೊಳೆನರಸೀಪುರಕ್ಕೂ ಅರಕಲಗೂಡಿಗೆ 22 ಕಿಲೋಮೀಟರ್ ಅಷ್ಟೆ ನಡುವೆ ದೇವರಹಳ್ಳಿ ಎನ್ನುವ ಊರು. ಈಗ್ಗೆ 19 –20 ವರ್ಷದ ಹಿಂದೆ ರಸ್ತೆಗಳು ಅಷ್ಟು ಸುಧಾರಣೆ ಕಂಡಿದ್ದಿಲ್ಲ ನಾವು ಬೈಕಲ್ಲಿ ಹೋಗುತ್ತಿದ್ದರೆ ಅದೇ ರಸ್ತೆಯಲ್ಲಿ ಸೈಕಲ್ಲಿ ಹೋಗುವ ದಂತಿಗಳನ್ನು ಕಂಡೆವು ಅವರೂ ನಮ್ಮನ್ನು ನೋಡುತ್ತಲೆ ಇದ್ರು ನಾವು ವೇಗವಾಗಿ ಬಂದೆವು. ಓ ನಾವ್ ಸೈಕಲ್ಲಲ್ಲಿ ಇದ್ದೀವಿ ಅವರು ಬೈಕಲ್ಲಿ ಇದ್ದಾರೆ ಎಂದು ಭಾವಿಸಿದ ಹಾಗೆ ಆ ದಂಪತಿಗಳಿದ್ದರು. ಸೈಕಲ್ಲೋ? ಬೈಕೋ? ಕಾರೋ ಇಲ್ಲ ಐಷಾರಾಮಿ ಕಾರೋ ಅದು ಮುಖ್ಯವಲ್ಲ ಅನ್ಯೋನ್ಯತೆ ಮುಖ್ಯ ಅಲ್ವೆ!

ದೇವರಳ್ಳಿಯ ರಸ್ತೆ ಆಗ ಬಹಳ ಕಿರಿದು. ಒಂದು ಕಡೆ ಕೆರೆ ಇನ್ನೊಂದು ಬದಿಯಲ್ಲಿ ಆಳದ ಗದ್ದೆಗಳು ಆ ಕಿರು ಜಾಗದಲ್ಲಿ ತಿಂಡಿ ತಿಂದು ದನಗಳೆಲ್ಲ ಹೊರಟಿದ್ದವು.. ಕ್ಷಮಿಸಿ! ಎಮ್ಮೆ, ಹಸುಕರುಗಳ ಮಾಲಿಕರು ತಿಂಡಿ ತಿಂದು ದನಗಳನ್ನು ಮೇಯಿಸಲು ಹೋಗುತ್ತಿದ್ದರು ಎದುರಿಂದ ಬಸ್ ಬಂದಿದ್ದಕ್ಕೂ ಎಮ್ಮೆಗಳು ಒಟ್ಟಿಗೆ ಬಂದಿದ್ದಕ್ಕೂ ಒಂದೇ ಆಯಿತು! ನಡುವೆ ಗುಂಡಿ ಬೇರೆ ಜಾಗವೇ ಇಲ್ಲದೆ ಒದ್ದಾಡುವಾಗಲೆ ಮಹಿಷವೊಂದಕ್ಕೆ ಏನು ಮೋಹವಾಯಿತೋ ಏನೋ ನನ್ನನ್ನೆ ಕೊಂಬುಗಳಲ್ಲಿ ಮಾತನಾಡಿಸಲು ಬಂದ ಹಾಗಿತ್ತು. “ಗಟ್ಟಿಯಾಗಿ ಕುತ್ಕೋಬೇಕು ಗುಂಡಿ ಹಾರಿಸ್ತೀನಿ..... ಗುಂಡಿ ಹಾರಿಸ್ತೀನಿ” ಅಂತ ನಮ್ಮವರು ಪ್ರಯತ್ನಪಟ್ಟರೂ ಸಾಧ್ಯವಾಗದೆ ನಾನೆ ಹಾರಿ ಗುಂಡಿಯೊಳಗೆ ಕೂರೋಹಾಗಾಯಿತು. ತುಂಬಾ ನೋವಾಗುತ್ತಿತ್ತು ತರಚು ಗಾಯಳಿಂದ ರಕ್ತ ಒಸರುತ್ತಿದ್ದುದು ತಿಳಿಯುತ್ತಿತ್ತು ಅಷ್ಟರಲ್ಲಿ ನಾಲ್ಕೈದು ಜನ “ಏನಾಯ್ತು? ಏನಾಯ್ತು? ಎದ್ದೇಳಿ! ಎದ್ದೇಳಿ! ಕಾಲು ಉಳುಕ್ತಾ? ಗಾಯ ಆಯ್ತ? ಮೊದ್ಲು ಆಸ್ಪತ್ರೆಗೆ ಕರ್ಕಂಡು ಹೋಗಿ ಮೂಳೆ ಗೀಳೆ ಮುರಿದಿದ್ರೆ...

ಬಿರ್ ಬಿರ್ನೆ ಹೋಗಿ ಆ ಮೇಲೆ ಒಂದು ಹೋಗಿ ಒಂದು ಅಯ್ತದೆ" ಎನ್ನುತ್ತಿದ್ದರು. ಆದರೆ ನನ್ನ ಮನಸ್ಸಿಗೆ ಖಂಡಿತಾ ಅನ್ನಿಸುತ್ತಿತ್ತು ಅಷ್ಟೇನು ಪೆಟ್ಟಾಗಿಲ್ಲ ಎಂದು. ಇಲ್ಲಿರೋರ್ಗೆ ಯಾವ ಮುಖ ತೋರಿಸೋದು ಅನ್ನೋ ಚಿಂತೆಯಿಂದ ತಲೆ ಕೆಳಗೆ ಮಾಡಿ ಯೋಚಿಸುತ್ತಿದ್ದೆ. ಅಷ್ಟರಲ್ಲಿ ಪತಿರಾಯರು ನನ್ನನ್ನು ಎತ್ತಲು ಬಂದರು ನಾನು ಬೇಡ ಎಂದು ಕೈ ಸನ್ನೆಯಲ್ಲಿ ತಿರುಳು ಹೊರಬರದಂತೆ ಜಜ್ಜಿ ಹೋಗಿದ್ದ ಸೌತೆಕಾಯಿಗಳನ್ನು ತೋರಿಸಿದೆ.

"ಅಯ್ಯೋ! ಸೌತೆಕಾಯಿ ಹೋದ್ರೆ ಹೋದ್ವು! ನಿನಗೇನಾಯ್ತು?" ಎನ್ನುತ್ತಿದ್ದಂತೆ ನಾನು ಮತ್ತೆ ಸೌತೆ ಕಾಯಿ ತೋರಿಸಿದೆ ನಮ್ಮನೆಯವರಿಗೆ ಅರ್ಥವಾಗಲಿಲ್ಲ. "ಅಷ್ಟೂ ಅರ್ಥ ಆಗಲ್ವ ನನಗೂ ಹಾಗೆ ಆಗಿದೆ ಕಾಲಲ್ಲಿ ತರಚಿದ ಗಾಯ ಬಿಟ್ಟರೆ ಒಳಪೆಟ್ಟಾಗಿದೆ" ಅಂದೆ. "ಅಷ್ಟೇನಾ ಒಂದು ಡೈಕ್ಲೋ ಒಂದು ಪ್ಯಾರಸಿಟಮಾಲ್ ತಗೊಂಡ್ರೆ ಸರಿಗೋಗುತ್ತೆ ಅನ್ನಬೇಕೆ? ಪತಿರಾಯರು....

ಅರ್ಥಕ್ಕೆ ಬಂದಾಗಿದೆ ಇನ್ನು ನೀರಿನವರ ಮನೆಗೆ ಹೋಗಬೇಕು ಎನ್ನುತ್ತಾ ಬೇಗ ಹೋದೆವು . ಅವರೋ ಬಹಳ ಸೂಕ್ಷ್ಮ ಮತಿಗಳು ನಮ್ಮ ಮುಖ ನೋಡುತ್ತಲೆ "ಏಕೋ ಏನೋ ಆಗಿರೋಹಾಗಿದೆ" ಎಂದು ಬೈಕ್ ಇಳಿಯುತ್ತಲೆ ಹೇಳಿದರು "ಇವೆಲ್ಲಾ ಕಾಮನ್ ಇಷ್ಟೇ ತಾನೆ.... ದೈರ್ಯ ಹೇಳಿ .ಸರಿ ತಟ್ಟೆ ಹಾಕ್ತೀನಿ" ಎಂದು ಬೆಂಡೆಕಾಯಿ ಪಲ್ಯ ಅನ್ನ ತಿಳಿಸಾರು ಬಡಿಸಿ ನಂತರ ಬಿಸಿ ಬಿಸಿ ಗಸಗಸೆ ಪಾಯಸ ತಂದು ಕೊಟ್ಟು ಮಾತಿಗಿಳಿಯುತ್ತಾ "ಏನೋ ಗೊತ್ತಿಲ್ಲ? ಸಿಕ್ತ್ ಸೆನ್ಸ್ ಶ್ಯಾವಿಗೆ ಪಾಯಸ ಬೇಡ ಗಸಗಸೆ ಪಾಯಸ ಮಾಡು.... ಅಂತ ಸೂಚನೆ ಕೊಟ್ಟಿತು. ಎಷ್ಟು ಒಳ್ಳೆಯದಾಯ್ತು ನೋಡಿ ಮೈಕೈ ನೋವೆಲ್ಲಾ ಮಾಯವಾಗುತ್ತೆ ಈಗ" ಎಂದರು. ನೋವಿಗೆ ಪಾಯಸ ಪರಿಹಾರವೇ? ಅನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿತ್ತು.

ನಯವಾಗಿ ಕುಳಿತರೂ ಎದ್ದರೂ ಹಾ.... ಅಮ್ಮಾ ಎನ್ನುವಂತಾಗುತ್ತಿದ್ದ ನೋವು ನನ್ನಲ್ಲಿ ಮಾತ್ರ ಇನ್ನೊಮ್ಮೆ ಸವಾರಿ ಬೇಕ? ಎಂದು ಸಂಭಾಷಿಸುತ್ತಿತ್ತು. ಇನ್ನೇನ್ ಮಾಡಕ್ಕಾಗುತ್ತೆ ಅನುಭವಿಸಬೇಕು ಎನ್ನುತ್ತಾ ಹೊರಟು ಬಂದು ವಾರಗಳಾದರೂ ನೋವು ಮತ್ತೆ ಮತ್ತೆ ಮಹಿಷ ಗುಂಡಿಯನ್ನು ನೆನಪಿಸುತ್ತಿತ್ತು. ಹೋಂಡಾ ಬೈಕಲ್ಲಿ ಹೊಂಡದಲ್ಲಿ ಬಿದ್ದ ವಿಷಯ ಈಗಲೇ ರಿವೀಲ್ ಮಾಡಿರೋದು.

2018 ರಲ್ಲಿ ಮಹಾ ಮಸ್ತಕಾಭಿಷೇಕ ನಡೆದ ಸಂದರ್ಭ. ಅಲ್ಲೊಂದು ಕಾರ್ಯಕ್ರಮ ನಮ್ಮ ಲೇಖಕಿಯರ ಬಳಗದಿಂದ ಇತ್ತು. ರಿಹರ್ಸಲ್ ಮುಗಿಸಿ ಮುಡಿಯೋಕೆ ಮಲ್ಲಿಗೆ ದಂಡೆ ಎಲ್ಲಾ ತಗೊಂಡು ಖುಷಿಲಿ ಬರ್ತಾ ಇದ್ದೆ. ಬೈಕಲ್ಲಿ ಬರುವಾಗ ಬಿಗ್ ಬಜಾರ್ ಬಳಿ ಬಿ.ಎಮ್. ರೋಡಿನ ಸಿಲ್ವರ್ ಜ್ಯೂಬಿಲ್ ಪಾರ್ಕ್ ರಸ್ತೆ ಮಧ್ಯೆ ಬಲವಾಗಿ ಗಾಡಿ ಶೇಕ್ ಆದ ಹಾಗಾಯ್ತು ನಾನು ದೊಪ್ಪನೆ ಬಿದ್ದು ಉರುಳಲು ಶುರು ಮಾಡಿದೆ... ಹಾಗಾಗುತ್ತಲೂ ಮುಖ ಮಾತ್ರ ನೆಲಕ್ಕೆ ಬೀಳದಂತೆ ಎಚ್ಚರ ವಹಿಸಿದೆ ಅಂತೂ ಮೂರು ರಸ್ತೆಉರುಳು ಸೇವೆ ಕ್ಷಣಗಳಲ್ಲಿ ಮುಗಿತು. ಅಲ್ಲಿದ್ದವರೆಲ್ಲಾ ಬೇಗ ಬೇಗ ಬಂದು ಏನಾಯ್ತು? ಏನಾಯ್ತು? ಎಂದು ಕೇಳಿದರೆ "ಏನೂ ಇಲ್ಲ! ಏನೂ ಇಲ್ಲ! ಎನ್ನುತ್ತಾ ಧೈರ್ಯವಾಗಿ ನಾನೆ ಎದ್ದು ನಿಂತೆ! ಯಾಕೆ ಗೊತ್ತ? ಕತ್ತಲಾಗಿತ್ತು ನನ್ನ ಮುಖ ಯಾರಿಗೂ ಕಾಣಿಸ್ತಾ ಇರಲಿಲ್ಲ. ಬಿದ್ದ ನಾಚಿಕೆಯನ್ನು ಕತ್ತಲು ಮರೆ ಮಾಡಿಸಿತು. ಆಗಷ್ಟೆ ತೆಗೆದುಕೊಂಡಿದ್ದ ಹೊಸ ವಾಚನ್ನು ನೋಡಿದೆ ಸದ್ಯ ಒಂದೂ ಸ್ಕ್ರ್ಯಾಚ್ ಆಗಿರಲಿಲ್ಲ.. ಮೊಬೈಲಿಗೂ ದೊಡ್ಡದೇನೂ

ಪೆಟ್ಟಾಗಿರಲಿಲ್ಲ ಮಲ್ಲಿಗೆ ಮಾತ್ರ ಅಪ್ಪಚ್ಚಿಯಾಗಿತ್ತು. ಪತಿರಾಯರು "ಸಧ್ಯ ಹಿಂದಿಂದ ಒಂದೂ ವೆಹಿಕಲ್ ಬರಲಿಲ್ಲ.... ಇಲ್ಲ ಅಂದಿದ್ರೆ.... ಸರಿ ಹೋಗಣ!" ಆಂದರೆ ನಾನು "ಹೂ" ಅಂತ ಸ್ವಲ್ಪ ಏರು ಧ್ವನಿಯಲ್ಲಿ ಹೇಳಿದೆ. ರೈಲ್ವೇ ಸ್ಟೇಷನ್ ಬಿಟ್ಟ ಮೇಲೆ "ಇಲ್ಲಿ ನಿಲ್ಸಿ ನಿಲ್ಸಿ" ಅಂದೆ "ಏಕೆ?" ಎಂದರು "ಸುಮ್ನೆ ನಿಲ್ಲಿ ಸ್ಬೇಕು" ಅಂದೆ ನಿಲ್ಲಿಸಿದರು! ಮೊಬೈಲ್ ಟಾರ್ಚ್ ಬೆಳಕಲ್ಲಿ ಮೊಣಕೈ ಮಂಡಿಗಳನ್ನು ನೋಡಿಕೊಂಡರೆ ಗಾಯಗಳಾಗಿದ್ದವು.....ರಕ್ತ ಬರುತ್ತಿತ್ತು. ಆಸ್ಪತ್ರೆಗೆ ಹೋಗ್ಬೇಕಾ ಅನ್ನೋ ಪ್ರಶ್ನೆ ಬಂತು.... ನನಗೆ ಮೊದಲು ಮನೆಗೆ ಹೋಗ್ಬೇಕು ಅನ್ನಿಸುತ್ತಿತ್ತು.....ಆದರೂ ಸುಧೀರ್ ಢಾಕ್ಟರ್ ಹತ್ತಿರ ಹೋದರೆ ಹೇಗೆ ಎನ್ನುತ್ತಾ ಅವರಲ್ಲಿ ಹೋದೆವು. ಅವರಿಗೆ ಗಾಯಗಳನ್ನು ತೋರಿಸುವುದು ಹೇಗೆ ಎಂದು ನಾನು ಮೀನಾ ಮೇಷ ಎಣಿಸುವಾಗ "ಪರಿಚಯದವರು ಡಾಕ್ಟರ್ ಅಂತ ಸಂಕೋಚ ಬೇಡ" ಎಂದು ಗಾಯಗಳನ್ನು ನೋಡಿ" ಓ ತುಂಬಾ ಪೆಟ್ಟಾಗಿರೋ ಹಾಗಿದೆ" ಎಂದು ನಮ್ಮನೆಯವರಿಗೆ "ಸ್ವಾಮಿಗಳೆ ನೋವಿಗೆ ಮಾತ್ರ ಮಾತ್ರೆ ಹಾಕಿರ್ತೀನಿ ನೀವು ಮೂಳೆ ಡಾಕ್ಟರ ಹತ್ರ ತೋರಿಸ್ಬೇಕು ಒಳಪೆಟ್ಟಾಗಿರುತ್ತೆ "ಅಂದ್ರು ಯಾವನೋ ಕುಡಿದಿದ್ದ ಅನ್ಸುತ್ತೆ ಓಲಾಡ್ಕೊಂಡೆ ಬಂದ ಯಾವ ಕಡೆಗೆ ಬೈಕ್ ಹೊರಳಿಸೋದು ತಿಳಿಲಿಲ್ಲ ಬ್ಯಾಲೆನ್ಸ್ ತಪ್ಪಿತು" ಎಂದು ನಮ್ಮನೆಯವರು ಪ್ರಾರಂಭಿಸಿದ ಹತ್ತು ಹದಿನೈದು ನಿಮಿಷದ ಸಂಭಾಷಣೆ "ಪರವಾಗಿಲ್ಲ ಮೇಡಮ್ ಮುಖಕ್ಕೆ ಏನೂ ಆಗಿಲ್ಲ ನೋಡಿ ನಿಮ್ಮ ಅದೃಷ್ಟ" ಎಂಬ ಸುಧೀರ್ ಡಾಕ್ಟರ್ ಉದ್ಗಾರದೊಂದಿಗೆ ಮುಕ್ತಾಯವಾಯಿತು.

ಯಾರಿಗೆ ಹೇಳಣ ನನ್ನ ಆ ನೋವನ್ನ.... ಇಂದಿಗೂ ಕಾಡುತ್ತಿರುವ ನೋವನ್ನ..... ಆ ದಿವಸದಿಂದ ನಾನು ಪದ್ಮಾಸನವಿಹೀನೆ....! ನೆಲದ ಮೇಲೆ ವಿರಾಜಿಸಲೊಲ್ಲೆ !!! . ಇಷ್ಟಾದರು ಹತ್ತಿರದ ಸ್ಥಳಗಳಿಗೆ ಬೈಕಲ್ಲಿ ಸವಾರಿ ಹೋಗೋದನ್ನು ಮಾತ್ರ ಬಿಟ್ಟಿಲ್ಲ! ಆದರೆ ಈಗ ಭಯ ಹೆಚ್ಚು! ಮೊನ್ನೆ ಮೊನ್ನೆವರೆಗೂ ಬೇರೆಯವರು ಹೇಳುವವರೆಗೆ ಸೈಡ್ ಸ್ಟ್ಯಾಂಡ್ ತೆಗೆಯದೆ ಸವಾರಿ ಮಾಡಿದ್ದೆ ಹೆಚ್ಚು. ಚಿಕ್ಕ ಗುಂಡಿ ಏರುಗಳು ಬಂದರು ಉತ್ಕಂಠಿತವಾಗಿ ಅಲ್ಲದೆ ಇದ್ದರೂ ಮನಸ್ಸಿನಲ್ಲೇ ಹೇಳುವೆ ಬೀಳಿಸ್ಬೇಡಿ ನನ್ನಾ...... ಬೀಳ್ಸ್ ಹೋಗ್ಬೇಡಿ ನನ್ನಾ.....!

ಬಿಟ್ಟು ಹೋಗ್ಬೇಡಿ ನನ್ನಾ....ಎನ್ನುತ್ತಾ ಹೆಗಲ ಮೇಲೆ ಕೈ ಹಾಕಿ ಸವಾರಿ ಮಾಡುತ್ತಿದ್ದ ದಿನಗಳು ಬೀಳ್ಸ್ ಹೋಗಬೇಡಿ ನನ್ನಾ.... ಎಂದು ಬೈಕನ್ನೇ ಗಟ್ಟಿಯಾಗಿ ಹಿಡಿದು ಕೂರುವ ದಿನಗಳಾಗಿ ಬದಲಾಗಿವೆ.

■



# ಆಪರೇಷನ್ ವೀನಸ್

**ಸುಮಾ ರಮೇಶ್, ಹಾಸನ.**

ಇತ್ತೀಚೆಗೆ ನಮ್ಮ ಸಾಕು ನಾಯಿ ವೀನಸ್ ಕೆಳಗೆ ಕೂರುವಾಗ ಪೈಲ್ಸ್ ಪೇಶಂಟಿನಂತೆ ಮುಲುಕುವುದನ್ನು ಕಂಡು ಅನುಮಾನವಾಗಿ ಪರೀಕ್ಷಿಸಿದಾಗ ಟೆಸ್ಟಿಸ್ ಗಳು ದಪ್ಪಗಾದಂತೆನಿಸಿತು. ಅವನು ಆರು ತಿಂಗಳ ಕೂಸಿದ್ದಾಗಲೇ ಒಮ್ಮೆ ವ್ಯಾಕ್ಸಿನೇಷನ್ ಗೆಂದು ಕರೆದೊಯ್ದಾಗ ಅದನ್ನು ತೆಗೆಸಿಬಿಡಿ ಎಂದು ಪಶುವೈದ್ಯರು ಹೇಳಿದ್ದರು. ನಾನು ಗಾಬರಿಗೊಂಡಿದ್ದೆ. ನಮ್ಮ ಮುದ್ದು ಶ್ವಾನದ ಪೌರುಷ ಸೂಚಕ ಅಂಗವನ್ನು ತೆಗೆಸಲು ಮನಸ್ಸೇಕೋ ಒಪ್ಪಿರಲಿಲ್ಲ. ನಂತರವೂ ಬ್ರೀಡಿಂಗ್ ಗಾಗಲಿ, ಮೇಟಿಂಗ್ ಗಾಗಲಿ ಅವನನ್ನು ಕರೆದೊಯ್ಯದೆ ಅವನು ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿಯುವಂತೆ ಮಾಡಿದ ಬಗ್ಗೆ ಈಗಲೂ ನನ್ನಲ್ಲಿ ಗಿಲ್ಟ್ ಉಳಿದಿರುವುದು ಸುಳ್ಳಲ್ಲ. ಅವನ ಇಂದಿನ ಸಮಸ್ಯೆಗೆ ತುರ್ತಾಗಿ ಹೊಸ ಪಶು ವೈದ್ಯರನ್ನು ಹುಡುಕಬೇಕಿತ್ತು. ನಮ್ಮ ಮಾಮೂಲು ಪಶು ವೈದ್ಯರು ವರ್ಗವಾಗಿ ಪರ ಊರಿಗೆ ಹೋಗಿ ದೊಡ್ಡ ಸಮಸ್ಯೆಯಾಗಿತ್ತು. ವಿಷಯ ತಿಳಿದ ನಮ್ಮ ಕೆಲಸದ ನಿಂಗಿ.

"ಏ.... ಸುಮ್ನೆ ದನಿನಾಸ್ಪಟ್ಲು ಐತಲಾ ಗೋರ್ಮೆಂಟ್ದು ಅಲ್ಲಿಗೇ ಕರ್ಕ ಓಗಿ ಅಕ್ಕಾ, ಬಿಲ್ದಿಂಗೆಲ್ಲಾ ಸಖತ್ತಾಗದೆ. ಒಳ್ಳೇ ಡಾಕ್ಟ್ರುಗಳೂ ಅವ್ರಂತೆ " ಎಂದಾಗ ಇತ್ತೀಚೆಗಷ್ಟೇ ಆರಂಭವಾಗಿದ್ದ ವೆಟರ್ನರಿ ಕಾಲೇಜಿನ ಹಾಸ್ಪಿಟಲ್ಲಿಗೇ ಹೋಗುವುದೆಂದು ತೀರ್ಮಾನಿಸಿದೆ.

ಅವನಿಗೆಂದೇ ಹೊಲೆಸಿದ್ದ ಹೊಸ ಅಂಗಿ ಧರಿಸಿದ ವೀನಸ್ ಆನಂದದಿಂದ ರೆಡಿಯಾದ. ನಿಂಗಿಯೂ ನಮಗೆ ಜೊತೆಯಾದಳು.

ಎಲ್ಲೋ ಔಟಿಂಗ್ ಎಂದು ಖುಷಿಯಿಂದ ಹೊರಟಿದ್ದವ ಆಸ್ಪತ್ರೆಯ ಹೊಸ ವಾತಾವರಣವನ್ನು ಕಂಡು ಗಲಿಬಿಲಿಗೊಂಡ. ಇತ್ತೀಚೆಗೆ ಕಣ್ಣೂ ಸರಿಯಾಗಿ ಕಾಣುತ್ತಿರಲಿಲ್ಲ. ಅಲ್ಲಲ್ಲೇ ಆಸ್ಪತ್ರೆಯ ಗೋಡೆಗೆ ಅವನು ಗುದ್ದಿಕೊಳ್ಳುವುದನ್ನು ನೋಡಲಾಗದೆ ಮೇಲೆತ್ತಿಕೊಂಡೆ. ಒಳಗೆ ಹೋದಾಗ ರೋಗಿಯನ್ನು ಎಕ್ಸಾಮಿನ್ ಮಾಡುವ ಟೇಬಲ್ ಮೇಲೂ ಆತಂಕದಿಂದ ನನಗೊರಗಿಯೇ ಕುಳಿತ.

ಪರೀಕ್ಷಿಸಲು ಒಳಬಂದ ವೈದ್ಯರು

"ಇದನ್ನೆಲ್ಲಾ ಯಾಕೆ ಹಾಕ್ತೀರಾ ಮೇಡಂ....?" ಅಸಹನೆಯಿಂದ ವೀನಸ್ ಧರಿಸಿದ್ದ ಅಂಗಿ ಕಳಚಿದರು. ನಂತರ ನನ್ನೆಡೆಗೆ ತಿರುಗಿ,

"ಹೆಸ್ರೇನು....?" ಎಂದರು

"ವೀನಸ್" ಎಂದೆ

"ನಾಯಿದಲ್ಲ, ನಿಮ್ದು..."

"....ಮಾಲಿನಿ "

"ವಯಸ್ಸು...?"

"ಮೂವತ್ತೆರಡು..."

"ನಿಮ್ದಲ್ಲ , ನಾಯೀದು..."

"ಹನ್ನೆರಡು...."

"ಸರಿಯಾಗಿ ಲೆಕ್ಕ ಇಟ್ಟಿದ್ದೀರಾ ...?" ತಲೆಯೆತ್ತಿ ವೀನಸ್ ಕಡೆಗೊಮ್ಮೆ ನನ್ನೆಡೆಗೊಮ್ಮೆ ನೋಡಿದರು ಪಶುವೈದ್ಯರು.

"ಸೆಪ್ಟೆಂಬರ್ ಸೆವೆಂತ್ ಅವ್ನು ಹುಟ್ಟಿದ್ದು. ಪ್ರತಿ ವರ್ಷ ಕೇಕ್ ಕಟ್ ಮಾಡಿ ಸೆಲಿಬ್ರೇಟ್ ಮಾಡ್ತೀವಿ ಡಾಕ್ಟ್ರೇ... ವ್ಯಾಕ್ಸಿನೇಷನ್ ಕಾರ್ಡ್ ಇದೆ ಬೇಕಾದ್ರೆ ತಂದು ತೋರುಸ್ತೀನಿ. ಬರ್ತ್ ಸರ್ಟಿಫಿಕೇಟ್ ಒಂದು ಮಾಡ್ಸಿಲ್ಲ ನೋಡಿ" ಎಂದೆ

"ಹಾಗಲ್ಲಾ ಮೇಡಂ.... ಪಗ್ ತಳಿಯ ನಾಯಿಗಳ ಲೈಫ್ ಸ್ಪ್ಯಾನ್ ಹತ್ತರಿಂದ ಹನ್ನೆರಡು ವರ್ಷ ಅಷ್ಟೇ, ಅದಕ್ಕೇ ಕೇಳ್ದೆ, ನೀವು ಚೆನ್ನಾಗಿ ಸಾಕಿದೀರಾ ಬಿಡಿ, ಗುಡ್...." ಎಂದಾಗ ಹೆಮ್ಮೆ ಎನಿಸಿತು.

"ಏ...ಅದುನ್ಯಾಕ್ ಕೇಳ್ತೀರಾ ಡಾಕ್ಟ್ರೇ .... ಒಳ್ಳೇ, ಮಗ....ಮಗ...ಸಾಕ್ದಂಗೆ ಸಾಕವ್ರೆ. ನಾನು ಇವ್ರ್ ಮನೀಗೆ ಕೆಲ್ಸುಕ್ ಬಂದೇ ಅನ್ನೆಲ್ಡ್ ವರ್ಸ. ಇವ್ನು ನಂಕಿಂತ ಪಷ್ಟೆ ಬಂದಿದ್ದ. ನಾನೇ ಬೈದಿದ್ದೆ, ಇದೆಂತದಿದು ಮೂಗು ಅಪ್ಪಚ್ಚಿ ಆಗಿರ ನಾಯಿ ಇಟ್ಕಂಡಿದೀರಾ ಅಂತ. ಅದುಕ್ಕೆ ಅಕ್ಕ ಸಿಟ್ಗಬುಟಿತ್ತು......" ನಿಂಗಿ ಕೈಯಾಡಿಸುತ್ತಾ ನುಡಿದಳು.

ವೈದ್ಯರು ನಗುತ್ತಾ ಅಲ್ಲೇ ಇದ್ದ ಸಹಾಯಕನಿಗೆ ವೀನಸ್ ಬ್ಲಡ್ ಸ್ಯಾಂಪಲ್ ತೆಗೆದುಕೊಳ್ಳಲು ಹೇಳಿ ನೋಟಿಸ್ ಬೋರ್ಡ್ ಮೇಲೆ ಏನೋ ಗೀಚತೊಡಗಿದರು.

"ಸರಿ..... ನಾಳೆ ಬೆಳಿಗ್ಗೆ ಸರಿಯಾಗಿ ಹತ್ತು ಗಂಟೆಯಷ್ಟರಲ್ಲಿ ಕರ್ಕೊರ್ಂಕಡ್ಬನ್ನಿ. ಎಮ್ ಟಿ ಸ್ಟಮಕ್ನಲ್ಲಿರ್ಬೇಕು ನೀರು ಕೂಡಾ ಕುಡ್ಸಿರ್ಬಾರ್ದು..." ವೈದ್ಯರು ನುಡಿದಾಗ ಸಮ್ಮತಿ ಸೂಚಿಸಿದೆ. ಹೊರ ಬರುವಾಗ ನೋಟಿಸ್ ಬೋರ್ಡ್ ಮೇಲಿದ್ದ ಮಾಹಿತಿಯ ಮೇಲೆ ಕಣ್ಣಾಡಿಸಿದೆ. ಆಪರೇಷನ್ ಸಮಯ ಬೆಳಗ್ಗೆ ಹತ್ತು ಗಂಟೆ. ಹೆಸರು ಮಾಲಿನಿ, ವಯಸ್ಸು 12, ಚಿಕಿತ್ಸೆ ಕ್ಯಾಸ್ಟ್ರೇಶನ್...

ಓದಿದವಳೇ ಒಮ್ಮೆಲೇ ಬೆಚ್ಚಿ ಬಿದ್ದೆ. ಸಾವರಿಸಿಕೊಂಡು ಮತ್ತೊಮ್ಮೆ ಅವಲೋಕಿಸಿದೆ. ನನ್ನ ಹೆಸರಿನ ಮೇಲೆ 'ಓನರ್ಸ್ ನೇಮ್' ಎಂದಿದ್ದದ್ದು ಕಂಡು ಸಮಾಧಾನವಾಯಿತು.

ಮರುದಿನ ಆಪರೇಷನ್ನಿನ ಅರಿವಿಲ್ಲದ ವೀನಸ್ ಎಂದಿನಂತೆ ವಾಕು, ಸುಸ್ಸುಗಳ ಮುಗಿಸಿ ಬ್ರೇಕ್ ಫಾಸ್ಟಿಗಾಗಿ ಕಾದು ಕುಳಿತ. ನಮ್ಮಿಂದ ಯಾವುದೇ ಪ್ರತಿಕ್ರಿಯೆ ಬಾರದಾಗ ಬೇಸತ್ತು ಫುಡ್ ಬೌಲ್ ಬಡಿದು ಬೌ ಬೌ ಬಜಾಯಿಸಿದ. ಮೊದಲ ಬಾರಿಗೆ ಆಹಾರ ಡಿಲೇ ಆಗುತ್ತಿರುವ ಬಗ್ಗೆ ಅವನಿಗೆ ಅಚ್ಚರಿಯಾಗಿತ್ತು. ಒಂದು ಗಂಟೆ ಕಾಲ ಕಿರುಚಿ ಸುಸ್ತಾಗಿ ಅಸಹನೆಯಿಂದ ಮುನಿದು ಮಲಗಿದ.

ಹತ್ತು ಗಂಟೆಗೆ ನಾನೂ ರೆಡಿಯಾದೆ. ನಿಂಗಿಯೊಂದಿಗೆ ಈ ಬಾರಿ ಅಂಗಿ ಧರಿಸದ ವೀನಸ್ಸಿನ ಸವಾರಿ ಸರ್ಜರಿಗೆಂದು ಸಿದ್ಧವಾಯಿತು. ನಿಂಗಿ ಸೂಚಿಸಿದ್ದ ಅದೇ ದನಿನಾಸ್ಪತ್ಲು ತಲುಪಿದಾಗ ವೈದ್ಯರಿನ್ನೂ ಬಂದಂತೆ ಕಾಣಲಿಲ್ಲ. ಓ ಪಿ ಡಿ ಎದುರು ಕಾಯುತ್ತಾ ಕುಳಿತೆವು. ಅಲ್ಲೇ ಟೋಕನ್ ಹಿಡಿದು ಕುಳಿತಿದ್ದ ಪಗ್ ತಳಿಯದ್ದೇ ಹೆಣ್ಣು ಶ್ವಾನವೊಂದು ಆಗಷ್ಟೇ ಬಂದು ಕುಳಿತ ವೀನಸ್ ನೆಡೆಗೆ ಆಸಕ್ತಿ ತೋರತೊಡಗಿತು.

" ಅಕ್ಕಾ...., ನಮ್ ನಾಯಿಯಂಗೇ ಮೂತಿ ಅಪ್ಪಚ್ಚಿ ಆಗಿರೋ ಇನ್ನೊಂದ್ ನಾಯಿ ಬಂದೈತೆ ನೋಡಿ...." ನಿಂಗಿ ಅದರೆಡೆಗೆ ಕೈ ತೋರಿದಳು.

"ಜಾನು..... ಬಾ ಈ ಕಡೆ...." ಮೆಲ್ಲನೆ ಕೆಳಗಿಳಿದು ವಯ್ಯಾರದಿಂದ ವೀನಸ್ ನೆಡೆಗೆ ಬರುತ್ತಿದ್ದ ಅದನ್ನು ಮಾಲೀಕ ಗದರಿದ. ನಿರಾಸೆಯಿಂದ ಹಿಂದೆ ಸರಿದ ಜಾನು ಅಲ್ಲಿಂದಲೇ ನುಲಿಯುತ್ತಾ ಸಂದೇಶ ಕಳಿಸತೊಡಗಿದಳು.

ಕ್ಯಾಸ್ಟ್ರೇಶನ್ ಸರ್ಜರಿಗೆಂದು ಬಂದಿದ್ದ ಆಜನ್ಮ ಬ್ರಹ್ಮಚಾರಿ ವೀನಸ್ ಯಾವುದೇ ಪ್ರತಿಕ್ರಿಯೆ ನೀಡದೆ ಋಷಿ ಮುನಿಯಂತೆ ಕುಳಿತಿದ್ದ.

"ಮಾಲಿನಿ ಅನ್ನೋವ್ರು ನಿಮ್ಮ ಪೇಶೆಂಟ್ನ ಕರ್ಕೊಂಡ್ಬನ್ನಿ...." ಕಾಂಪೌಂಡರ್ ಹೊರಬಂದು ನುಡಿದಾಗ ಮೆಲ್ಲನೆದ್ದು ವೀನಸ್ ನೊಂದಿಗೆ ಓಟಿ ಗೆ ಹೋದೆ. ಅವನನ್ನು ಟೇಬಲ್ ಮೇಲೆ ಕೂರಿಸಿ ಹಿಂದೆ ಸರಿದೆ. ಆತಂಕದಿಂದ ನನ್ನ ಎದೆಬಡಿತ ನನಗೇ ಕೇಳುವಂತಾಗಿತ್ತು.

ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ ಲೇಡಿ ಡಾಕ್ಟರ್ ಅವನ ಟೆಂಪರೇಚರ್ ರೆಕಾರ್ಡ್ ಮಾಡಲು ಮರಿ ವೈದ್ಯರಿಗೆ ಹೇಳಿದರು. ಮರಿವೈದ್ಯರು ಹೆದರುತ್ತಲೇ ಥರ್ಮಾಮೀಟರ್ ಹಿಡಿದು ಬಂದು

'ಕಚ್ಚುತ್ತಾ....?' ಎಂದು ಅನುಮಾನಿಸಿದಾಗ

"ಏ....ಅದ್ರು ಮಖ ನೋಡಿದ್ರೆ ಕಚ್ಚ ನಾಯಂಗ್ ಕಾಣ್ತದಾ... ಒಳ್ಳೆ ಕೂಸಿದ್ದಂಗದೆ...." ನಿಂಗಿ ಕೈ ತಿರುವಿದಳು.

ಥರ್ಮಾಮೀಟರ್ ಏನಸ್ ಬಳಿ ತಂದ ಕೂಡಲೇ ವೀನಸ್ ಕೊಸರಾಡಿದ. ಸಹಾಯಕ್ಕೆಂದು ನನ್ನನ್ನು ಕರೆಯಲಾಯಿತು. ನಾನು ಅವನ ತಲೆಯನ್ನು ಪ್ರೀತಿಯಿಂದ ನೇವರಿಸಿದೆ. ನಂತರ ನಿಧಾನವಾಗಿ ತಾಪಮಾನವನ್ನು ರೆಕಾರ್ಡ್ ಮಾಡಲು ಅನುವು ಮಾಡಿಕೊಟ್ಟ. ಅವನ ಮುಲುಕಾಟ ಕಂಡು ನನ್ನ ಕಣ್ಣಂಚು ಒದ್ದೆಯಾಯಿತು.

ಕೆಲವೊಂದು ಪತ್ರಗಳನ್ನು ನನ್ನ ಮುಂದೆ ಹಿಡಿದ ಮರಿವೈದ್ಯರು

"ಮೇಡಂ, ಹನ್ನೆರಡು ವರ್ಷ ಆಗಿರೋದ್ರಿಂದ ಹೈ ರಿಸ್ಕ್ ಇದೆ. ಎನಿ ಥಿಂಗ್ ಕ್ಯಾನ್ ಹ್ಯಾಪನ್, ಸಹಿ ಮಾಡಿ...." ಎಂದಾಗ ಗುಂಡಿಗೆ ಅದುರಿತು.

"ಸರ್, ಇಷ್ಟು ವರ್ಷದಿಂದ ಮಗುವಿನಂತೆ ಸಾಕಿದೀವಿ. ಹುಷಾರು... "ಎನ್ನುವಾಗ ಗಂಟಲುಬ್ಬಿ ಬಂತು.

"ಮೇಡಂ, ಯಾವುದೇ ಸರ್ಜರಿ ಅಂದ್ರೂ ರಿಸ್ಕ್ ಇದ್ದೇ ಇರುತ್ತೆ. ನಾವು ಮೂರು ಜನ ಡಾಕ್ಟರ್ಸ್ ಇರ್ತೀವಿ ಓಟಿ ನಲ್ಲಿ... ಧೈರ್ಯವಾಗಿರಿ...." ಎಂದ.

ನಡುಗುವ ಕೈಯಿಂದ ನಾನು ಸಹಿ ಹಾಕುತ್ತಿದ್ದರೆ ನಿಂಗಿ

"ಯವ್ವೀ...ಯವ್ವೀ.... ಈ ರಾಜ್ಕುಮಾರುಂಗೆ ಆಪ್ರೇಸನ್ ಮಾಡಕೆ ಮೂರ್ ಜನ ಡಾಕ್ಟ್ರ....!? " ಎಂದಳು ಬೆರಗಿನಿಂದ. ಮುಂದಾಗುವ ಕಾರ್ಯದ ಅರಿವಿಲ್ಲದೆ ವೀನಸ್ ನನಗೊರಗಿ ನೆಮ್ಮದಿಯಾಗಿ ಕುಳಿತಿದ್ದ.

"ಮೇಡಂ, ಪಕ್ಕದ ರೂಮಿನಲ್ಲಿರೋ ಸೀನಿಯರ್ ಡಾಕ್ಟ್ರು ಕರೀತಿದಾರೆ...." ಒಳಬಂದ ಕಾಂಪೌಂಡರ್ ನುಡಿದಾಗ ಹುಬ್ಬೇರಿಸಿದೆ

"ಫಿಟ್ ನೆಸ್ ಸರ್ಟಿಫಿಕೇಟ್ ಇನ್ನೂ ಸಿಕ್ಕಿಲ್ಲ. ಅದ್ರು ಬಗ್ಗೆ ಮಾತಾಡ್ತಾರೆ ಅನ್ಸುತ್ತೆ ಹೋಗಿ...." ಎಂದಾಗ ವೀನಸ್‌ನ ಎತ್ತಿಕೊಂಡೇ ಹೊರಬಂದೆ. ಬಾಗಿಲು

ಬಳಿಯೇ ಸುಳಿದಾಡುತ್ತಿದ್ದ ಜಾನು ನಮ್ಮನ್ನು ಕಂಡು ಸಂತಸದಿಂದ ಕುಂಯ್ ಗುಟ್ಟಳು.


ಲ್ಯಾಪ್ ಟಾಪ್ ಮುಂದೆ ಕುಳಿತಿದ್ದ ಸೀನಿಯರ್ ವೈದ್ಯರ ಮುಖ ಗಂಭೀರವಾಗಿತ್ತು. "ಮೇಡಂ, ನಿಮ್ಮ ನಾಯಿಯ ಏಜ್ ಹಾಗು ಬ್ಲಡ್ ರಿಪೋರ್ಟ್..... ಸರ್ಜರಿಗೆ ಫೇವರೆಬಲ್ ಇಲ್ಲ. ಕ್ರಿಯಾಟಿನ್ ಲೆವೆಲ್ ಹೈ ಇದೆ. ಲಿವರ್ ಫಂಕ್ಷನ್ ಕೂಡಾ ಅಷ್ಟೊಂದು ನಾರ್ಮಲ್ ಇಲ್ಲ. ಸರ್ಜರಿ ಮಾಡ್ದೇ ಇರೋದೇ ಬೆಟರ್...." ಎಂದರು. ನನಗೆ ಒಂದು ರೀತಿಯ ನಿರಾಳ ಭಾವ ಮೂಡಿತು.

"ಓಕೆ ಸರ್... ಆದ್ರೆ ಅಲ್ಲಿ ಊದ್ಕೊಂಡಿದಿಯಲ್ಲಾ.... ಕೂರೋದಿಕ್ಕೂ ಕಷ್ಟ ಪಡ್ತಾನೆ...." ಎಂದೆ

"ಅದುಕ್ಕೆ ಆಂಟಿಬಯಾಟಿಕ್ಸ್ ಬರ್ಕೊಡ್ತೀನಿ. ಹಿ ಈಸ್ ಟ್ವೆಲ್ವ್ ಅಲ್ವಾ.... ಅಂದ್ರೆ ನಮ್ಮ ಹ್ಯೂಮನ್ಸ್ ಲೆಕ್ಕದಲ್ಲಿ ಎಪ್ಪತ್ತೈದರಿಂದ ಎಂಬತ್ತು ವರ್ಷ ಇದ್ದಾಗೆ. ಅನಸ್ತೇಶಿಯಾ ಕೊಟ್ರೆ ಕೊಲ್ಯಾಪ್ಸ್ ಆಗೋ ಚಾನ್ಸೇ ಹೆಚ್ಚು. ಇರುವಷ್ಟು ದಿನ ಇರ್ಲಿ. ಎಮರ್ಜೆನ್ಸಿ ಆದ್ರೆ ಸರ್ಜರಿ ಮಾಡೋಣ.....?" ಎಂದಾಗ ಸಂತೋಷದಿಂದ ಸಮ್ಮತಿಸಿ ಅವರಿಗೆ ವಂದಿಸಿ ಹೊರಬಂದೆ. ದೊಡ್ಡ ಗಂಡಾಂತರ ತಪ್ಪಿದಂತೆ ಮನಸ್ಸು ಹಗುರಾಗಿತ್ತು. ಅಲ್ಲೇ ಕುಳಿತು ಬಿಸ್ಕೆಟ್ ತಿನ್ನುತ್ತಿದ್ದ ಜಾನು ನಮ್ಮನ್ನು ಕಂಡು ಕುಣಿಯುತ್ತಲೇ ಬಂದಳು. ಬಿಸ್ಕೆಟ್ಟಿನ ಜಾಡು ಹಿಡಿದ ವೀನಸ್‌ನ ಹಸಿವು ಜಾಗೃತಗೊಂಡಿತು. ನನ್ನ ಕೈಯಿಂದ ತಪಕ್ಕನೆ ಕೆಳಗೆ ನೆಗೆದು ಜಾನುವಿನ ಬಳಿಗೆ ಓಡಿದ.

"ಅಕ್ಕಾ ಸೊಸೆ ಮಾಡ್ಕಬೋದು ನೋಡಿ, ಚೆನ್ನಾಗಿದೆ ಈಡು ಜೋಡಿ, ಎರ್ಡುಕ್ಕೂ ಮೂಗಿಲ್ಲ...." ನಿಂಗಿ ಕೈ ತೋರಿ ನುಡಿದಾಗ ಓಪಿಡಿಯಲ್ಲಿ ಕುಳಿತಿದ್ದ ಎಲ್ಲರ ಮೊಗದಲ್ಲೂ ನಗು ಇಣುಕಿತು.

■




## ಪಥ್ಯಾಪಥ್ಯ ವಿಶೇಷಾಂಕ

ಪ್ರಿಯ ಓದುಗರೆ

ಫೆಬ್ರುವರಿ ೨೦೨೪ ರ ಸಂಚಿಕೆಯನ್ನು ಪಥ್ಯಾಪಥ್ಯ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ಪಥ್ಯದ ಸನ್ನಿಧಿಯಲ್ಲಿ ಉದ್ಭವಿಸುವ ಅನೇಕ ವೈವಿಧ್ಯಮಯ ಸಂಗತಿ, ಸಂದರ್ಭಗಳನ್ನು ನಿಮ್ಮ ಊಹಾ ಸಾಮ್ರಾಜ್ಯದಲ್ಲಿ ಒರೆಹಚ್ಚಿ ನಮಗೆ ಬರೆದು ಕಳಿಸಿರಿ. ವಿಳಾಸ : belururamamurthy@gmail.com

ಲೇಖನಗಳು ಅಪರಂಜಿಯ ಅಳತೆಯ ಮೂರು ಪುಟಗಳನ್ನು ಮೀರದಿರಲಿ. ಕಳಿಸಲು ಗಡುವು ಜನವರಿ ಹದಿನೈದು.

ಸಂಪಾದಕ

# ಉಮಾಕಾಂತನ ವಿಮಾ ಯೋಜನೆ

ಪಾಲಹಳ್ಳಿ ವಿಶ್ವನಾಥ್

ನಾನು ಮತ್ತು ಉಮಾಕಾಂತ ಪೋಲಿಸ್ಸ್ಟೇಷನ್ನಿನ ಲಾಕಪ್ಪನಲ್ಲಿ ನಿಂತಿದ್ದೆವು. ಪುಟ್ಟಕೋಣೆ, ಆಗಲೆ ಐದು–ಆರು ಜನ ಕುಳಿತಿದ್ದರು. ಸ್ವಲ್ಪಕಾದ ಮೇಲೆ ಪೋಲಿಸ್ ಇನ್‌ಸ್ಪೆಕ್ಟರಿಂದ ಬುಲಾವು ಬಂದಿತು. ಅವರ ಕೋಣೆಯ ಒಳಗೆ ಹೋದ ತಕ್ಷಣವೆ "ಏನ್ರಿ! ನಿಮಗೆ ಮಾನಮರ್ಯಾದೆ ಏನೂ ಇಲ್ಲವೇ? ಗಣ್ಯವ್ಯಕ್ತಿಗಳ ಮೇಲೆ ಟೊಮೇಟೋ ಎಸೆಯೋದಾ? ಅದೂ ಈ ಭಾಷೆಯ ಕಣ್ಮಣಿ ಮಹಾನಟ ದೇವೇಂದ್ರರ ಮೆಲೆ! ಕ್ಷಮಾಪಣೆ ಬರೆದುಕೊಡಿ ಅಥವಾ 50000 ರೂಪಾಯಿಗಳ ಜುಲ್ಮಾನೆಯನ್ನು ಕೊಟ್ಟು ಹೋಗಿ!" ಎಂದರು. ಅದಕ್ಕೆ ಉಮಾಕಾಂತ 'ಸ್ವಲ್ಪಕೇಳಿಸ್ಕೊಳ್ಳಿ, ಇದು ಹೀಗೆ ಸಾರ್" ಎಂದು ಶುರು ಮಾಡಿದ್ದಕ್ಕೆ ಅವರು "ಕ್ಷಮಾಪಣೆ ಬರೆದುಕೊಡ್ತೀರೊ ಅಥವಾ.," ಎಂದ ಮೇಲೆ ಬರೆದು ಕೊಟ್ಟುಬಿಟ್ಟು ಬಂದೆವು.

ನಮ್ಮಕಥೇನ ಇನ್ಸ್ಪೆಕ್ಟರು ಕೇಳಿಸಿಕೊಳ್ಳಲಿಲ್ಲ. ನೀವಾದರೂ ಕೇಳಿಸಿಕೊಳ್ಳಿ. ಇದು ಉಮಾಕಾಂತನ ಸಾಹಸಗಳಲ್ಲೊಂದು. ನಾವೆಲ್ಲಾ ಒಂದೇ ಬಡಾವಣೆಯ ಹುಡುಗರು. ಒಂದೇ ಶಾಲೆಗೆ ಹೋದೆವು. ಒಂದೇಕಾ ಲೇಜಿಗೆಹೋದೆವು. ಒಟ್ಟಿಗೇ ಫೇಲೂ ಆದೆವು. ಕಾಲೇಜಿನಲ್ಲಿ ಬಹಳ ವರ್ಷಗಳು ಇರಲು ಯಾವ ತರಹ ಆಸ್ಪದವೂ ಇಲ್ಲದಿದ್ದರಿಂದ ನಾವೆಲ್ಲಾ ಒಂದಲ್ಲ ಒಂದು ದಿನ ಕಾಲೇಜು ಬಿಡಲೇಬೇಕಾಗಿ ಬಂದಿತು. ನಮ್ಮಲ್ಲಿ ಯಾರಿಗೂ ಸರಿಯಾದ ಕೆಲಸಗಳು ಸಿಗಲಿಲ್ಲ. ಅದಕ್ಕೆ ಸರಿಯಾದ ಯೋಗ್ಯತೆಯೂ ಇರಲಿಲ್ಲ ಎನ್ನುವುದು ಒಂದು ಕಾರಣ. ಜೀವನೋಪಾಯಕ್ಕೆ ಹಣಬೇಕಲ್ಲವೇ? ಈ ವಿಷಯದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ನಮ್ಮ ಉಮಾಕಾಂತನ ತಲೆ ಓಡುತ್ತಲೇ ಇತ್ತು. ಏನೇನೋ ಯೋಜನೆಗಳು ! ಪೋಲಿಸ್ಸ್ಟೇಷನಿಗೆ ಹೋಗಬೇಕಾಗಿ ಬಂದದ್ದು ಅಂತಹ ಒಂದು ಯೋಜನೆಯಿಂದ.

ಸುಮಾರು ಒಂದು ವರ್ಷದ ಹಿಂದೆ ಒಂದು ದಿನನಾವೆಲ್ಲಾ ಸಂಜೆ ಕೂತು ಮಾತಾಡುತ್ತಿದ್ದಾಗ ಬಹಳ ದಿನಗಳಿಂದ ಮೋಹನ ಪತ್ತೆ ಇಲ್ಲವಲ್ಲಾ ಎಂದು ಕೊಳ್ಳುತ್ತಿದ್ದೆವು. ಅದೇ ಸಮಯಕ್ಕೆ ಸರಿಯಾಗಿ ಅವನೂಬಂದ. ಹಣೆಯ ಮೇಲೆ ಏನೋ ಟೇಪು ಹಾಕಿತ್ತು. 'ಏನೋ ನಿನ್ನ ಅವತಾರ'ಎಂದು ಉಮಾಕಾಂತ ಕೇಳಿದ. ಅದಕ್ಕೆ ಮೋಹನ "ಎರಡು ವಾರದ ಹಿಂದೆ ಮಾರ್ಕೆಟ್ಹತ್ತಿರ ನನ್ನ ಸ್ಕೂಟರ್ಗೆ ಯಾವನೋ ಢಿಕ್ಕಿಹೊಡೆದ. ಬಿದ್ದೆ, ಕೈಕಾಲು ಮುರುಕೊಂಡೆ. ಆ ಅಪಘಾತ ವಿಮಾ ತೊಗೊಂಡಿದ್ದೆನಲ್ಲ? ಕೈಗೆ ಸುಮಾರು ಹಣಸಿಗ್ತು. ಅದರಲ್ಲೇ ಸ್ವಲ್ಪ ಆಸ್ಪತ್ರೆಗೆ ಖರ್ಚು ಮಾಡಿದೆ" ಎಂದ'. ಹಣ ಎಂದ ತಕ್ಷಣ "ಏನು ಹಣ? ಏನು ವಿಮೆ? ಸರಿಯಾಗಿ ಹೇಳೊ ಮೋಹನ' ಎಂದು ಉಮಾಕಾಂತ ಕೇಳಿದಾಗ. "ಬ್ಯಾಂಕುಗಳು ಹೊಸದಾಗಿ ಶುರುವಾದಾಗ ಜನರನ್ನು ಆಕರ್ಷಿಸಲು ಏನೇನೋ ಯೋಜನೆಗಳು ಇರುತ್ತವೆ. ನಾನು ಅಂಥ ಒಂದು ಬ್ಯಾಂಕಿನಲ್ಲಿ 1000 ರೂಪಾಯಿ ಇಟ್ಟು ಖಾತೆ ತೆಗೆದೆ. ಹೊಸ ಖಾತೆಯವರಿಗೆಲ್ಲ ಬ್ಯಾಂಕಿನವರು ಅಪಘಾತ ವಿಮೆ ಅಂತ ಅವರ ಹೆಸರಿನಲ್ಲಿ ವಿಮೆ ಮಾಡಿಸ್ತಾರೆ. ಅದರಲ್ಲಿ ಮುಂದಿನ ಒಂದು ವರ್ಷದಲ್ಲಿ ಏನಾದರೂ ಅಪಘಾತವಾದಲ್ಲಿ ಸುಮಾರು 50000 ರೂಪಾಯಿ ಬೇರೆ ಕೊಡುತ್ತಾರೆ." ಎಂದ.

"ಅಂದರೆ 1000 ರೂಪಾಯಿ ಇಟ್ಟರೆ 50000 ರೂಪಾಯಿ !" ಎಂದು ಉಮಾಕಾಂತ ಜೋರಾಗಿ ಹೇಳಿದಾಗ ಅವನ ಹೊಸ ಯೋಜನೆ ರೂಪುಗೊಂಡಿತು.

ಅವನದ್ದೇ ಮಾತುಗಳಲ್ಲಿ ಅವನ ಯೋಜನೆಯನ್ನು ಕೇಳೋಣ: ಈಗ ನಮ್ಮ ಹತ್ತು ಜನರಲ್ಲಿ ಪ್ರತಿಯೊಬ್ಬರೂ ಅಂಥ ಬ್ಯಾಂಕುಗಳಲ್ಲಿ ಖಾತೆ ತೆಗೆದು ಒಂದು ಸಣ್ಣಪುಟ್ಟ ಅಪಘಾತ ಮಾಡಿಕೊಂಡರೆ 50000 ರೂಪಾಯಿ ಸಂಪಾದಿಸಬಹುದು. ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ಅಪಘಾತ ಮಾಡಿಕೊಳ್ಳುವುದರ ಸಂಭವ ಕಡಿಮೆ. ಪ್ರತಿಯೊಬ್ಬರೂ ಕೈಕಾಲು ಮುರಿದುಕೊಳ್ಳುವುದರಲ್ಲಿ ಅರ್ಥವೂ ಇಲ್ಲ. ಅದರ ಬದಲು ಯಾರದಾದರೂ ಒಬ್ಬನ ಹೆಸರಿನಲ್ಲಿ ಬೇರೆ ಬೇರೆ ಬ್ಯಾಂಕುಗಳಲ್ಲಿ ಖಾತೆ ತೆಗೆದರೆ ಅವನಿಗೆ ಅಪಘಾತವಾಗಿ ದುಡ್ಡು ಬಂದಾಗ ಎಲ್ಲರೂ ಹಂಚಿಕೊಳ್ಳಬಹುದು ಉಮಾಕಾಂತನ ಈಯೋಜನೆಗೆ ಎಲ್ಲರೂ ಭೇಷ್ ಎನ್ನುತ್ತಾ ಒಪ್ಪಿದೆವು.

ಪ್ರತಿಯೊಬ್ಬರೂ ಹೇಗಾದರೂ ಮಾಡಿ (ಹೇಗೆ ಎನ್ನುವುದನ್ನು ಅವರವರಿಗೇ ಬಿಟ್ಟಿದ್ದೆವು; ಒಳ್ಳೆಯ ದಾರಿಯೋ, ಒಳ್ಳೆಯದಲ್ಲದ ದಾರಿಯೋ ಅವುಗಳ ವಿವರ ನಮಗೆ ಯಾರಿಗೂ ಬೇಡ ಎಂದೂ ತೀರ್ಮಾನಮಾಡಿಕೊಂಡೆವು) ಸಾವಿರರೂ ಪಾಯಿಗಳನ್ನು ಬೇರೆ ಬೇರೆ ಬ್ಯಾಂಕುಗಳಿಗೆ ಹೋಗಿ ಖಾತೆ ತೆಗೆಯುವುದು. ಯಾರ ಹೆಸರಿನಲ್ಲಿ ಮಾಡುವುದು? ಸರಿ, ಹತ್ತೂ ಜನರ ಹೆಸರನ್ನು ಚೂರು ಕಾಗದಗಳ ಮೇಲೆ ಬರೆದು ಒಂದು ಮಗುವಿನ ಕೈನಲ್ಲಿ ಚೀಟಿಎತ್ತಿಸಿದೆವು. ದೇವೇಂದ್ರನ ಹೆಸರು ಬಂದಿತು. ಸರಿ, ಸಾಲವೋ ಸೋಲವೋ ಎಲ್ಲರೂ ದೇವೇಂದ್ರನ ಹೆಸರಿನಲ್ಲಿ ವಿಮೆ ಮಾಡಿದೆವು. ಉಮಾಕಾಂತ ಇನ್ನೂ ಹಣ ಕೊಟ್ಟಿರಲಿಲ. " ಈ ಯೋಜನೆ ನನಗೇ ಅಲ್ಲವೇ ಹೊಳೆದಿದ್ದು ! ನಾನು ಕೇಳದೆಯೇ ನೀವೆಲ್ಲಾ ನನ್ನ ಭಾಗಕೊಡುತ್ತೀರೆಂದು ತಿಳಿದುಕೊಂಡಿದ್ದೆ.." 'ಸರಿ, ಉಮಾಕಾಂತನಿಗೆ ಹೇಗೋ ನಿನ್ನದನ್ನೂ ಕೊಡುತ್ತೇವೆ ಎಂದೆವು. ಅಂತೂ ದೇವೇಂದ್ರನ ಹೆಸರಿನಲ್ಲಿ ಹತ್ತು ಬ್ಯಾಂಕುಗಳಲ್ಲಿ ಅಪಘಾತ ವಿಮೆ ಮಾಡಿಸಿದ್ದಾಯಿತು.

ನಮ್ಮ ದೇವೇಂದ್ರ ಬಹಳ ಸ್ಫುರದ್ರೂಪಿ ಯುವಕ. ಅದಕ್ಕೆ ತಕ್ಕಹಾಗೆ ಸಿನೆಮಾಗಳಲ್ಲಿ ಹೆಸರು ಮಾಡಬೇಕು ಎನ್ನುವ ಆಕಾಂಕ್ಷೆ. ಬಡಾವಣೆಯ ಚಿಕ್ಕಪುಟ್ಟ ನಾಟಕಗಳಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನೂ ಮಾಡುತ್ತಿದ್ದ. ಪ್ರತಿಭೆ ಇತ್ತೋ ಏನೋ. ಆದರೆ ಅವನ ಮುಖ್ಯ ಕೊರಗು ತನ್ನ ಬಳಿ ಹಣವಿಲ್ಲ. ಸಿನೆಮಾ ಸ್ಟುಡಿಯೊ ಹತ್ತಿರ ಸುಳಿಯೋಕೂ ಸರಿಯಾದ ಬಟ್ಟೆ ಇಲ್ಲ, ಇನ್ನು ಸ್ಕ್ರೀನ್ ಟೆಸ್ಟ್ ಎಲ್ಲಿಂದ ಬರಬೇಕು 'ಎಲ್ಲರೆದುರಿಗೂ ಗೋಳಾಡಿಕೊಳ್ಳುತ್ತಿದ್ದ.

ಪತ್ರಿಕೆಗಳಲ್ಲಂತೂ ದಿನಾ ಅಪಘಾತಗಳ ಸುದ್ದಿಯ ಮೇಲೆ ಸುದ್ದಿ. ಮೊದಲೆಲ್ಲ ಬಹಳ ಜಾಗರೂಕತೆಯಿಂದ ಸುದ್ದಿಗಳನ್ನು ಓದಿ ದೇವೇಂದ್ರ ಎನ್ನುವ ಪದಕ್ಕೆ ಹುಡುಕುತ್ತಿದ್ದೆವು. ಯಾವು ಯಾವೋ ಹೆಸರುಗಳು ಇದ್ದವು; ಆದರೆ ದೇವೆಂದ್ರ ಮಾತ್ರಇರಲಿಲ್ಲ. ನಿಧಾನವಾಗಿ ಜಿಗುಪ್ಸೆ ಬಂದು ಪತ್ರಿಕೆ ನೋಡೋದೆ ಬಿಟ್ಟುಬಿಟ್ಟವು. ಒಂದು ದಿನ ನಮ್ಮ ವೆಂಕಟೇಶ ಸ್ಕೂಟರಿನಿಂದ ಬಿದ್ದು ಮುಖವೆಲ್ಲ ಪೆಟ್ಟಾಯಿತು. ಎಲ್ಲ ಪಾಪ ಎಂದೆವು. ಆದರೆ ಉಮಾಕಾಂತ' ಹೌದು ಪಾಪ ! ಆದರೆ ವೆಂಕಟೇಶನಿಗೆ ಪೆಟ್ಟು ಬಿದ್ದು ಏನು ಪ್ರಯೋಜನ? ಬೀಳಬೇಕಾಗಿದ್ದು ದೇವೇಂದ್ರನಿಗೆ' ಎಂದು ಬೇಜಾರು ಮಾಡಿಕೊಂಡ, ಉಮಾಕಾಂತ ದೇವೇಂದ್ರನಿಗೆ ಹೆದರಿಸಿದ, ಬೆದರಿಸಿದ, ಬೇಡುಕೊಂಡ. ದೇವೇಂದ್ರ 'ನಾನು ಏನೋ ಮಾಡಲಿ' ಎಂದು ಕೈಚೆಲ್ಲಿ ಬಿಡುತ್ತಿದ್ದ.

"ಯಾವುದಾದರೂ ಕಾರೋ ಆಟೋನೋ ಮುಂದೆ ಬಿದ್ದು ಪೆಟ್ಟು ಮಾಡಿಕೊಳ್ಳಬಹುದಲ್ಲಾ?' "ಹಾಗೇ ಹೇಗೆ ಬೀಳಲಿ" ಎಂದ ದೇವೇಂದ್ರನಿಗೆ "ಏನಿಲ್ಲ.

ಯಾವುದೋ ಪುಟ್ಟ ಹುಡುಗಿ ರಸ್ತೆ ದಾಟುತ್ತಿದೆ. ಇದ್ದಕ್ಕಿದ್ದ ಹಾಗೆ ಒಂದು ಕಾರು ಬಂತು. ಆಗ ನೀನು ಓಡಿ ಹೋಗಿ ಅದನ್ನು ರಕ್ಷಿಸುತ್ತೀಯ. ನಿನಗೆ ಸ್ವಲ್ಪ ಪೆಟ್ಟುಬೀಳುತ್ತೆ' ಎಂದು ಅವನು ಉಪಾಯ ಹೇಳಿದಾಗ 'ಅಷ್ಟೆಲ್ಲಾ ನನಗೆ ಊಹಿಸ್ಕೊಳ್ಳೋಕೆ ಆಗೊಲ್ಲ' ಎಂದುಬಿಟ್ಟ. ಉಮಾಕಾಂತ 'ಹೀಗೆ ದೇವರಿಗೇ ಬಿಟ್ಟರೆ ಏನೂ ಆಗುವುದಿಲ್ಲ, ನಾವೇ ಪ್ರಯತ್ನಪಡಬೇಕು' ಎಂದ. ದೇವೇಂದ್ರನ ಸ್ಕೂಟರಿನ ಬ್ರೇಕ್ಸಡಿಲ ಮಾಡಿದೆವು. ಅವನು ಓಡಾಡುವ ಕಡೆ ಬಾಳೇ ಹಣ್ಣಿನ ಸಿಪ್ಪೆ ಹಾಕಿದೆವು. ಏನೂ ಪ್ರಯೋಜನವಾಗಲಿಲ್ಲ. ನಾವೆಲ್ಲಾ ಬೇಸತ್ತು ಹೋದೆವು ಕಡೆಗೂ ಒಂದು ಪವಾಡ ನಡೆದೇ ಹೋಯಿತು. ಬೆಂಗಳೂರಿನ ರಾಗಿ ಗುಡ್ಡದ ಬಳಿ ಯಾವುದೋ ಸಿನೆಮಾ ತೆಗೆಯುತ್ತಿದ್ದರಂತೆ. ಅದರಲ್ಲಿ ಯಾವು ದೋಸ್ಟಂಟು ಮಾಡಬೇಕಿತ್ತಂತೆ. ಗುಡ್ಡದ ಮೇಲಿಂದ ಬೀಳುವ ದೃಶ್ಯ. ಹೀರೊ ಪಾತ್ರಧಾರಿ ಒಂದು 5 ಅಡಿ ಕೆಳಗೆ ಬೀಳಲು ತಯಾರಿದ್ದನಂತೆ. ಆದರೆ ನಿರ್ದೇಶಕರಿಗೆ ಬೇಕಿದ್ದು10ಅಡಿ. ಹೀರೊ ಆಗುವುದಿಲ್ಲ ಅಂದನಂತೆ. ಆಗ ಅಲ್ಲಿ ಯಾರಿಗೋ ದೇವೇಂದ್ರನ ನೆನಪು ಬಂತಂತೆ. 'ಒಬ್ಬ ಹುಡುಗ ಇದಾನೆ, ಸಿನೆಮಾಲಿ ಆಕ್ಟಮಾಡಬೇಕು, ಆಕ್ಟಮಾಡಬೇಕು' ಅಂತ ತೊಂದರೆ ಕೊಡ್ತಾ ಇರ್ತಾನೆ' ಎಂದರು. ನಿರ್ದೇಶಕರು 'ಸರಿ, ಅವನನ್ನು ಕರೀರಿ' ಎಂದಾಗ ದೇವೇಂದ್ರನಿಗೆ ಫೋನ್ಹೋಗಿ ಅವನು ಖುಷಿಯಾಗಿ ಒಪ್ಪಿದನಂತೆ. ಹೊಸಬ ಅಂತ 10 ಅಡಿಬದಲು 15 ಅಡಿಕೆಳಗೆ ಬೀಳಿಸಿದರಂತೆ. ಕೈಕಾಲು ಮುರಿದುಕೊಂಡು ದೇವೇಂದ್ರ ಆಸ್ಪತ್ರೆ ಸೇರಿದ. ಅದನ್ನು ಕೇಳಿ ನಮಗೆಲ್ಲಾ ಒಂದು ರೀತಿಯ ಬಿಡುಗಡೆಯ ಅನುಭವ ಆಯಿತು. ಇನ್ನು ಏನು ದುಡ್ಡು ಬಂತು ಎನ್ನುವ ರೀತಿಯಲ್ಲೇ ಒಂದು ಪಾರ್ಟಿಯನ್ನೂ ಮಾಡಿದೆವು, ಆಸ್ಪತ್ರೆಗೆ ಹೋದಾಗ ದೇವೇಂದ್ರ ಮಲಗಿದ್ದ. ನಾವು ಒಳ ಹೋದಾಗ ನಮ್ಮನ್ನು ನೋಡಿದ ನಮ್ಮನ್ನು ಗುರುತಿಸಲಿಲ್ಲ. ಪಕ್ಕದ ನರ್ಸನ್ನು 'ಇವರು ಯಾರು' ಎನ್ನುವ ರೀತಿಯಲ್ಲಿ ತಲೆಯಾಡಿಸಿ 'ಬನ್ನಿ, ತಾವು ಕುಳಿತುಕೊಳ್ಳಿ' ಎಂದ. ನಮಗೆ ಆಶ್ಚರ್ಯವಾಯಿತು. ನಾವೆಲ್ಲಾ ಚೆಡ್ಡಿದೋಸ್ತಗಳು, ತಾವು ಎನ್ನುವ ಪದವನ್ನು ಬೇರೆಯವರಿಗೂ ಬಳಸದಂತಹವರು ನಾವು. ಈ ಘನತೆ ಗಾಂಭೀರ್ಯ ಎಲ್ಲಾ ಯಾವಾಗ ಬಂತು ಇವನಿಗೆ? "ದೇವು, ನಾವು ಕಣೋ !" ಎಂದು ಹೇಳಿದೆವು. ಉಮಾಕಾಂತ ಕೇಳಿದ "ನಮ್ಮ ಜ್ಞಾಪಕ ಇದೆ ಅಲ್ವಾ ದೇವೂ" "ಓ! ಇವರು ಪಿಜಿ ಅಲ್ವಾ? ನೀವು?" "ಏನೋದೇವು! ನಾನು ಉಮಾಕಾಂತ ಅಲ್ವಾ? ಈ ತಾವು ನೀವು ಎಲ್ಲಾ ಬೇಡ. ನೀನು ಅಂತ ಹಿಂದೆ ಇದ್ದ ಹಾಗೆ ಕರಿ. ಹೇಗಿದ್ದೀಯ?"

ಪರವಾಯಿಲ್ಲ. ..ಡಾಕ್ಟರು ಹೇಳಿದ್ದಾರೆ ಅಪಘಾತದಿಂದ ನಿಮಗೆ ಒಂದು ತರಹ ವಿಚಿತ್ರ ಪರಿಣಾಮ ಆಗಿರುವ ಹಾಗಿದೆ. ಸ್ವಲ್ಪ ಮೆಮೊರಿ ಹೋಗಿರುವ ಹಾಗಿದೆ. ಅಂದರೆ ನಿಮಗೆ ಪೂರ್ತಿ ನೆನಪು ಬಂದಿಲ್ಲ. ಅದು ಕ್ರಮೇಣ ಬರಬಹುದು, ಬರದಿರಬಹದು. ನೋಡಿ, ಅದಕ್ಕೇ ಅಂತ ಕಾಣುತ್ತೆ ನನಗೆ ಪಿಜಿ ಗೊತ್ತಾಯ್ತು, ಆದರೆ ಉಮಾಕಾಂತ ತಿಳಿಲೇ ಇಲ್ಲ. ನಾನು ಅಪಘಾತ ವಿಮೆ ಮಾಡಿಸಿದ್ದು ಒಳ್ಳೇದೇ ಆಯಿತು. ಅದೂ ನಮ್ಮ ಸೋದರ ಮಾವ ಹೇಳಿದ ಹಾಗೆ ಹತ್ತು ಹೊಸ ಬ್ಯಾಂಕುಗಳಲ್ಲಿ! ಪ್ರತಿಯೊಂದು ಬ್ಯಾಂಕಿನಲ್ಲೂ ಖಾತೆ ತೆಗೆದೆ ನೋಡು. ಅಪಘಾತ ವಿಮಾ ಅಂತಕೊಟ್ಟರು. ಅದು ಈಗ ಉಪಯೋಗಕ್ಕೆ ಬರುತ್ತಿದೆ.

ನಿಮ್ಮ ಸೋದರ ಮಾವ ಹೇಳಿದರಾ?" ಉಮಾಕಾಂತ ಕೋಪ ಮಿಶ್ರಿತ ಆಶ್ಚರ್ಯದಿಂದ ಕೇಳಿದ. "ಹೌದು, ಒಂದಲ್ಲ, ಹತ್ತು ಕಡೆ ಮಾಡು ಅಂತಾಲೂ ಹೇಳಿದರು" ದೇವೇಂದ್ರನ ಮಾತುಗಳಿಂದ ಉಮಾಕಾಂತನ ಕೋಪ ಏರುತ್ತಿತ್ತು.

"ಅಲ್ವೊ ದೇವೇಂದ್ರ ! ನಾವೆಲ್ಲಾ ಸೇರಿ ನಿನ್ನ ಹೆಸರಿನಲ್ಲಿ ಮಾಡಿದ್ದಲ್ವೇನೋ ಇದು ! ಆಗ ನಾವೆಲ್ಲ ಒಪ್ಪಿ ಹಂಚಿಕೊಳ್ಳೂದು ಅಂತ ಆಗಿತ್ತಲ್ವಾ? ನೀನೂ ಹೂ ಅಂದಿದ್ದೆಯಲ್ಲವೋ?" ಅಂತ ಉಮಾಕಾಂತ ಜೋರಾಗಿಯೇ ಹೇಳಿದ. "ನನಗೆ ಅದೆಲ್ಲಾ ಜ್ಞಾಪಕವೇ ಇಲ್ಲವಲ್ಲ? ನಾನು ಅಂತ ಬೋಗಸ್ ಒಪ್ಪಂದಗಳಿಗೆಲ್ಲಾ ತಲೆ ತೂಗುವನಲ್ಲ. .. ಸರಿ, ಇದಕ್ಕೆ ನಿಮ್ಮ ಹತ್ತಿರ ಏನಾದರೂ ಸಾಕ್ಷಿ ಇದೆಯೆ?.... ಕಾಗದ ಪತ್ರ?' ನಾನು ಮತ್ತು ಉಮಾಕಾಂತ ಮುಖಮುಖ ನೋಡಿಕೊಂಡೆವು. "ನರ್ಸ್ ! ನನಗೆ ಸ್ವಲ್ಪಸುಸ್ತಾಗ್ತಾ ಇದೆ. ಹಣ್ಣು ತಂದು ಕೊಟ್ಟಿದ್ದಕ್ಕೆ ಬಹಳ ಧನ್ಯವಾದಗಳು" ಎಂದು ನಮ್ಮನ್ನು ಹೊರಗೆ ಕಳಿಸಿದ.

ಅಂತೂ ವಿಮೆಯ ಎಲ್ಲ ಹಣವನ್ನೂ ಸೇರಿಸಿ ದೇವೇಂದ್ರ ಒಳ್ಳೆಯ ಬಟ್ಟೆಗಳನ್ನೂ ಹಾಕಿಕೊಳ್ಳಲು ಪ್ರಾರಂಭಿಸಿದ. ಕಿರುತೆರೆಯ ಧಾರಾವಾಹಿಗಳಲ್ಲಿ ಪಾತ್ರಗಳು ಸಿಕ್ಕವು. ಮೊದಲು ಚಿಲ್ಲರೆ ಪಾತ್ರಗಳಿದ್ದು ನಿಧಾನವಾಗಿ ಹೀರೋ ಪಾತ್ರಗಳೂ ಸಿಕ್ಕವು. ಪುಟ್ಟ ಕಾರೂ ತೆಗೆದುಕೊಂಡ. ಕಡೆಗೆ ಚಲನಚಿತ್ರಗಳಲ್ಲೂ ಹೀರೋ ಕೂಡ ಆದ. ಮತ್ತೆ ಒಂದು ವರ್ಷಕಳೀತು. ನಮಗೆ ದೇವೇಂದ್ರನ ಬಗ್ಗೆ ಸ್ವಲ್ಪ ಹೆಮ್ಮೆಯೇನೋ ಇತ್ತು. ಆದರೆ ಅವನು ಮಾಡಿದ ಮೋಸ ಮರೆಯಲೂ ಆಗಲಿಲ್ಲ. ಉಮಾಕಾಂತನಂತೂ ಅವನ ಹೆಸರು ಕೇಳಿದರೇ ಸಿಡಿಸಿಡಿ ಎನ್ನುತ್ತಿದ್ದ. ಯಾವ ಯಾವ ರೀತಿಯಲ್ಲೋ ಕಾಡಿಬೇಡಿ ನಾವೆಲ್ಲಾ ಆ ಹಣವನ್ನು ಸಂಗ್ರಹಿಸಿದ್ದೆವು. ಹಣದ ಮಾತಿರಲಿ, ಗೆಳೆಯರಿಗೇ ಮೋಸ ಮಾಡಿದನಲ್ಲ ಎಂದು ವ್ಯಥೆಯೂ ಇತ್ತು, ಕೋಪವೂ ಇತ್ತು ಹೀಗಿರುವಾಗ ಒಂದು ದಿನ ಜಯನಗರ 4ನೆಯ ಬ್ಲಾಕ್ ಅಂಗಡಿಗಳಿಗೆ ನಾನು ಮತ್ತು ಉಮಾಕಾಂತ ಹೋಗಿದ್ದೆವು. ದೂರದಲ್ಲಿ ಯಾವುದೋ ದೊಡ್ಡ ಕಾರೊಂದರಿಂದ ಯಾರೋ ಸೂಟು ಬೂಟು ಧರಿಸಿದ ವ್ಯಕ್ತಿ ಇಳಿದರು. ಅವನನ್ನು ನೋಡುತ್ತಲೇ ಉಮಾಕಾಂತ 'ಓ ! ಮಹಾ ನಟ ದೇವೇಂದ್ರ' ಎಂದು ಕೋಪದಿಂದ ಹೇಳಿದ. ಹಾಗೇ ಈ ಕಡೆ ಆ ಕಡೆ ನೋಡಿದ. ಅಲ್ಲೇ ಒಂದು ತರಕಾರಿ ಅಂಗಡಿ ಕಾಣಿಸಿತು. ಉಮಾಕಾಂತ ಅಲ್ಲಿಗೆ ಹೋಗಿ ಎರಡು ಟೊಮೆಟೊಗಳನ್ನು ಖರೀದಿ ಮಾಡಿಕೊಂಡು ಬಂದು ಖ್ಯಾತನಟ ದೇವೇಂದ್ರನ ಮೇಲೆ ಎಸೆದ. (ಪಿ.ಜಿ. ವುಡ್ಹೌಸರ ಉಕ್ರಿಜ್ ಕಥೆಯೊಂದರ ರೂಪಾಂತರ) ■



# ಲೇಖನವಾದ ಬೀಚಿ ಪುಸ್ತಕಗಳ ಪಟ್ಟಿ

**ಬೇಲೂರು ರಾಮಮೂರ್ತಿ**

ಸೋಮು ಮತ್ತು ರಾಮು ಇಬ್ಬರೂ ಮನೆಯಿಂದ ಹೊರಟು ಅಂದನಾ ತಿಂಮ ಪುಸ್ತಕ ಕೈಲಿ ಹಿಡಿದು **ರೇಡಿಯೋ ನಾಟಕ**ಗಳನ್ನು ಕೇಳಿಕೊಂಡು **ದಾಸಕೂಟ**ದ ರಾಮಪ್ಪ, ಚಂದ್ರಣ್ಣ, ಭೀಮಯ್ಯ ಇವರೊಂದಿಗೆ **ಸೀತೂ ಮದುವೆ**ಗೆ ಹೊರಟು ಬಸ್ ಸ್ಟಾಂಡ್ ತಲುಪಿದರು. ಹೇಗಾದರಾಗಲಿ ಅಂತ ಅವರ ಸಂಗಡ ತಲೆನೋವಿನ **ಮಾತ್ರೆಗಳು** ಇದ್ದವು. **ಬೆಂಗಳೂರು ಬಸ್ಸು** ಕಾಯುತ್ತಾ ತಮ್ಮ ಜೊತೆ ಸುನಂದಮ್ಮ ಮದುವೆಗೆ ಬರದಿದ್ದಾಗ **ಸುನಂದೂಗೆ ಏನಂತೆ** ಅಂತ ರಾಮಪ್ಪ ಕೇಳಿದರು. ಬಸ್ಸಿಗೆ ಕಾದೂ ಕಾದೂ ಗಂಟಲೊಣಗಿತೆಂದು ಕಾಫಿಗೆ ಆರ್ಡರ್ ಮಾಡಿದಾಗ ಅಂಗಡಿಯವನು ಕೊಟ್ಟಿದ್ದು **ಆರಿದ ಚಹಾ**ನೇ ಆದರೂ ಎಲ್ಲರೂ ಅದನ್ನೇ ಕುಡಿದರು. ಮದುವೆಯ ವಿಚಾರ ಬಂದಾಗ ಹೆಣ್ಣು ಅಂದ್ರೆ **ಸಾಹುಕಾರ ಸುಬ್ಬಮ್ಮ** ನಂತೆ ಅಲ್ಲದಿದ್ದರೂ  **ಕತ್ತಲಲ್ಲಿ ಬಂದವಳು** ಎನಿಸಿಕೊಳ್ಳದೇ **ಅಮ್ಮಾವ್ರ ಕಾಲ್ಗುಣ** ಚನ್ನಾಗಿದೆ ಅಂತ ನಾಲ್ಕು ಜನರ ಬಾಯಲ್ಲಿ ಅನಿಸಿಕೊಂಡು **ಮನೆತನದ ಗೌರವ** ಕಾಪಾಡುವಂಥಾ ಗುಣ ಹೆಣ್ಣಿನಲ್ಲಿರಬೇಕು ಅಂದರು ಚಂದ್ರಣ್ಣ.

ಬಸ್ ಸ್ಟಾಂಡಿನಲ್ಲಿ **ಆಟೋ** ದಿಂದ **ಲೇವಡಿ ಟೈಪಿಸ್ಟ್** ಇಳಿದಾಗ ಇವಳು ನಮ್ಮೂರಿನ **ಸುಬ್ಬಿ**ಯ ಹಾಗಿದಾಳಲ್ಲಾ ಅಂತ ಭೀಮಯ್ಯ ಅಂದಾಗ **ಮುರಿದ ಬೊಂಬೆ**ಯ ದೇಹದಂತಿದ್ದು ಕೈಗೆ **ಏರದ ಬಳೆ** ಇಳಿದಾಡಿಸಿಕೊಂಡು ಬಂದವಳನ್ನು ಬಸ್ ಸ್ಟಾಂಡಿನಲ್ಲಿದ್ದ ಕೆಲವರು **ದೇವನ ಹೆಂಡ** ಕುಡಿದು **ಹನ್ನೊಂದನೇ ಅವತಾರ** ತಾಳಿದವರಂತೆ ಕಾಮಂಣ ಭಾವನೆಯಿಂದ **ಕಾಮಲೋಕ**ದ ಪ್ರೇಮಿಗಳ ಹಾಗೆ **ಹುಲಿಯ ಬೆನ್ನು ಮೇಲಿಂದ** ಬಿದ್ದವರಂತೆ ನೋಡಿದವರ ಮನದಲ್ಲೇ **ಪ್ರೇಮಯುದ್ಧ** ಪ್ರಾರಂಭವಾಗಿತ್ತು.

ಮದುವೆಗೆ ಮುಂಚೆ ಜಾತಕ ತೋರಿಸಿದಾಗ ರಾಶಿಕೂಟದಲ್ಲಿ **6–7 ಸ್ತ್ರೀ ಸೌಖ್ಯ** ಅಂತ ಇದೆಯೆಂದು ಜ್ಯೋತಿಷಿಗಳು ಹೇಳಿದ್ದಂತೆ ಮದುವೆಯನ್ನು 6ನೇ ತಾರೀಖಿಗೇ ಗೊತ್ತುಮಾಡಿದ್ದಾರೆ. ಮದುವೆಗೆ ಮುಂಚೆ ಭಾವೀ ಪತ್ನಿ **ಕಮಲೆಯ ಓಲೆ** ಹಾಗಿದ್ದ ಪ್ರೇಮ ಪತ್ರಗಳನ್ನೆಲ್ಲಾ **ಬೆಳ್ಳಿ ಪತ್ರಗಳು** ಎನ್ನುವಂತೆ ಜೋಪಾನ ಮಾಡಿಕೊಂಡು ಮುಂದೊಂದು ದಿನ ಇದೇ **ನನ್ನ ಭಯಾಗ್ರಫಿ** ಎಂದು ಹೆಂಡತಿಗೆ ತೋರಿಸುವ ಬಯಕೆ ಇದೆ  ಶ್ರೀಕಾಂತನಿಗೆ ಇದೆ ಅಂದರು ರಾಮಪ್ಪ.

ಹಸಿವಾಯಿತು ಎಂದು ಎಲ್ಲರೂ ಒಂದೊಂದು ಬಾಳೆ ಹಣ್ಣು ತಿನ್ನುತ್ತಿದ್ದಾಗ **ಎಲ್ಲಿರುವೆ ತಂದೆ ಬಾರೋ** ಎಂದು **ನರಪ್ರಾಣಿ** ಕೂಗಿದಂತೆ **ದೇವರಿಲ್ಲದ ಗುಡಿಯಲ್ಲಿ ಮಾತಾಡುವ ದೇವರು** ಗಳನ್ನು ಹುಡುಕುವವರಂತೆ ಕೆಲವರು ಬಸ್ ಸ್ಟಾಂಡಿನ ಹತ್ತಿರವಿದ್ದ ಅಮ್ಮನವರ ಗುಡಿಗೆ ಬಂದು **ಲಕ್ಷ್ಮೀಪೂಜೆ** ಮಾಡಿ ನಾವು **ಅಮ್ಮನವರ ಇಚ್ಛಾ** ಪೂರೈಸಿದೆವು ಅಂದುಕೊಂಡಾಗ ದೇವರ ವಿಗ್ರಹದ ಬಲಭಾಗದಿಂದ ಹೂ ಬಿದ್ದಾಗ ನಮ್ಮ ಮನದಾಸೆಯನ್ನು **ಕಲ್ಲು ಹೇಳಿತು** ಅಂದರು. "ಜೀವನದಲ್ಲಿ ಒಳ್ಳೆಯ ಹೆಂಡತಿ ಸಿಗದಿದ್ದರೆ **ಬಿತ್ತಿದ್ದೇ ಬೇವು** ಅಂದುಕೊಂಡು ಸಿಕ್ಕಿದ್ದನ್ನೇ **ದೇವರು ಕೊಟ್ಟಿದ್ದು** ಅಂದುಕೊಂಡು ಇನ್ನೆಲ್ಲೋ **ಮೂರು ಹೆಣ್ಣು ಐದು ಜಡೆ** ಎದುರಾದಾಗ ಅವಳನ್ನೇ

ನೆಟ್ಟಗೆ ನೋಡುತ್ತಾ **ಹೆಣ್ಣು ಕಾಣದ ಗಂಡು** ಎನಿಸಿಕೊಳ್ಳಬಾರದು. ಸಮಾಜದಲ್ಲಿ **ಎಲ್ಲರೂ ಸಂಪನ್ನರೇ** ಆದರೂ ಕೆಲವರು **ಬಂಗಾರದ ಕತ್ತೆ** ಅನಿಸಿಕೊಂಡು ಚಿನ್ನದ ಕಸ ಆದರೆ ಕಣ್ಣಿಗೆ ಬಿದ್ದರೂ ಪರವಾಗಿಲ್ಲ ಎಂದುಕೊಳ್ಳುತ್ತಾರೆ" ಅಂದರು ಚಂದ್ರಣ್ಣ.

ಎಷ್ಟೊತ್ತಾದರೂ ಬಸ್ಸು ಬರಲಿಲ್ಲ ಅಂತ ಭೀಮಪ್ಪ ಅತ್ತಿತ್ತ ನೋಡುತ್ತಿರುವಾಗ ಬಸ್ಸಿಗೆ **ಸಕ್ಕರೆ ಮೂಟೆ** ಹೊತ್ತು ತರುತ್ತಿದ್ದವನ **ಖಾದೀ ಸೀರೆ** ಉಟ್ಟು ಹೊರಟ ಹೆಣ್ಣನ್ನು ಓರೆಗಣ್ಣಿಂದ ನೋಡಿದ್ದನ್ನು ಕಂಡು ಇದನ್ನೇ **ಹುಚ್ಚು ಹುರುಳು** ಎನ್ನೋದು ಅಂದರು. ಶ್ರೀಕಾಂತ **ಕನ್ನಡ ಎಮ್ಮೆ** ಓದಿ ಬ್ರಹ್ಮಚಾರಿಯ ಮಗ ಅಂತ ಜನ ತಮಾಷೆ ಮಾಡ್ತಿದ್ದಾಗ ಕಾಣದ ಸುಂದರಿಯಂಥಾ **ಮೇಡಮ್ಮನ ಗಂಡ** ಎನಿಸಿಕೊಳ್ಳಲು ಹೊರಟಿರುವ ಮದುವೆ ಹುಡುಗನ ಬದುಕು ಮಾತ್ರ **ದೇವರಿಗೇ ಪ್ರೀತಿ** ಎನ್ನೋ ಹಾಗಾಗಿ ಸಂಸಾರ **ಮುರಿದ ಬೊಂಬೆ**ಯಂತಾಗಬಾರದು ಅನಿಸಿತು. ಶ್ರೀಕಾಂತನ ತಾಯಿ **ಕಮಲಮ್ಮನ ಕುಂಕುಮನ ಬಲ**ದಿಂದ ಒಳ್ಳೆಯ ಹುಡುಗಿಯೇ ಸಿಕ್ಕಿದ್ದು ತನ್ನ ಮಾತಿನಿಂದಲೇ ಜನರನ್ನು ಮರುಳು ಮಾಡಿದರೂ **ಬೆಳ್ಳಿ ತಿಮ್ಮ ನೂರೆಂಟು ಹೇಳಿದ** ಎನಿಸಿಕೊಳ್ಳದೇ ಶ್ರೀಕಾಂತ **ಉತ್ತರ ಭೂಪ** ಎನಿಸಿಕೊಳ್ಳುತ್ತಾನೆ ಎಂಬ ನಂಬಿಕೆ ನನಗಿದೆ ಎಂದರು ರಾಮಪ್ಪ. ಅದಕ್ಕೆ ಚಂದ್ರಣ್ಣ ಹೌದೌದು, ಬದುಕಿನಲ್ಲಿ ಒಳ್ಳೆಯವನು ಎನಿಸಿಕೊಂಡರೆ ಇವನನ್ನು ಕಂಡ ಜನ ನಮ್ಮ ಬಳಿ **ಸಂಪನ್ನರಿದ್ದಾರೆ ಎಚ್ಚರಿಕೆ** ಎನ್ನಬಹುದು. ಶ್ರೀಕಾಂತ ಪರೀಕ್ಷೆಯಲ್ಲಿ ಕಡೆದ **ನಂಬರ್ ಐವತ್ತೈದು** ಅಂಕವನ್ನೇ ಪ್ರಧಾನವಾಗಿಟ್ಟುಕೊಂಡು ಒಂದು ಕೆಲಸ ಗಿಟ್ಟಿಸಿಕೊಂಡು ಜೀವನ ಮಾಡ್ತಿದಾನೆ. **ಆಗಿಷ್ಟು ಈಗಿಷ್ಟು** ಮನರಂಜನೆಗೆ ಎದುರಿನ **ಟೆಂಟ್ ಸಿನಿಮಾ** ದಲ್ಲಿ ಪೋಸ್ಟರ್ ಹಾಕಿರುವ **ಸತೀ ಸೂಳೆ** ಮತ್ತು **ಸರಸ್ವತೀ ಸಂಹಾರ**ದಂಥಾ ಸಿನಿಮಾಗಳನ್ನು ನೋಡಿಕೊಂಡು ಸಂಸಾರದಲ್ಲಿ **ಹೆಂಡತಿ ನಕ್ಕಾಗ** ನಾನೂ ನಕ್ಕು ನಮ್ಮ ಸಂಸಾರ **ಗರತಿಯ ಹುಟ್ಟು** ಎನ್ನುವ ಹಾಗಾಗಬೇಕು ಅಂದುಕೊಂಡಿದ್ದಾನೆ ಶ್ರೀಕಾಂತ. ಬಸ್ಸಿಗೆ ಕಾದೂ ಕಾದೂ ತಮ್ಮ ತಲೆಯನ್ನು ಕೆಟ್ಟು ಗೊಬ್ಬರ ಹಿಡಿದ **ತಿಂಮನ ತಲೆ** ಮಾಡಿಕೊಂಡಿದ್ದ ಜನರಿಗೆ ಬಸ್ಸು ಬಂದೊಡನೆ **ತಿಂಮ ರಸಾಯನ** ಸವಿದಷ್ಟೇ ಖುಷಿ ಲ್ಲರೂ ಬಸ್ಸು ಹತ್ತಿ ಸಿಕ್ಕ ಜಾಗಗಳಲ್ಲಿ ಕೂತರು. ■

**ಪ್ರಶ್ನೆ : ಉನ್ನತ ಗುರಿ ಹೊಂದಿದ ನಾನು ಅಸಮರ್ಥನಾಗಿ ಚಿಕ್ಕದೊಂದು ಕೆಲಸಕ್ಕಾಗಿ ತರಬೇತಿ ಪಡೆಯುತ್ತಿದ್ದೇನೆ. ನನ್ನ ದೌರ್ಬಲ್ಯದಿಂದಾಗಿ ನನಗೆ ಮನಶ್ಯಾಂತಿ ಇಲ್ಲ. ದಯವಿಟ್ಟು ಯೋಗ್ಯ ಮಾರ್ಗದರ್ಶನ ನೀಡಿ !**

ಗುರಿಯನ್ನು ಸಾಧಿಸುವುದೇ ಮುಖ್ಯವಲ್ಲ. ಗುರಿಯ ಸಾಧನೆ ಮುಖ್ಯ. ಗುರಿ ಮಹಾಪಾಪ. ನಾನು ಯಾವ ಕೆಲಸವನ್ನು ಮಾಡುತ್ತಿದ್ದೇನೆ ಎಂಬ ಪ್ರಶ್ನೆ ಬೇಡ. ಮಾಡುತ್ತಿರುವ ಕೆಲಸವನ್ನು ಹೇಗೆ ಮಾಡುತ್ತಿದ್ದೇನೆ ಎಂಬುದು ಮುಖ್ಯ. ಕಸ ಗುಡಿಸಿದರೆ ತಪ್ಪಲ್ಲ. ಆದರೆ ಸರಿಯಾಗಿ ಕಸ ಗುಡಿಸದಿದ್ದರೆ ದೊಡ್ಡ ತಪ್ಪು.

**–ಉತ್ತರ ಭೂಪ**

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂಡನಳ

- ✓ ಮಕ್ಕಳ ಮೊಬೈಲ್ ಚಟ ಬಿಡಿಸಬೇಕಾದರೆ ಮೊದಲು ಅಪ್ಪ ಅಮ್ಮ ಆ ಚಟ ಬಿಡಬೇಕು.
- ✓ 'ಪಾನ್ ರುಚಿಯಾಗಿದಯೆ?' ಎಂದು ಕೇಳಿದರೆ 'ಓ! ಪಾನ್‌ಟಾಸ್ಟಿಕ್' ಎನ್ನುವುದೆ?
- ✓ ವೈ ರೀಡ್ ದಿ ಗೀತಾ ಇಫ್ ಯು ಕೆನ್ ಡು ಯೋಗ, ಈಟ್ ಇಂಡಿಯನ್ ಫುಡ್, ಮ್ಯಾರಿ ಅನ್ ಇಂಡಿಯನ್ ಇಮಿಗ್ರಂಟ್, ಟಾಟೂ 'ಓಂ' ಆನ್ ಯುವರ್ ಬಾಡಿ?
- ✓ ಸೋರುವ ಮನೆ ರಿಪೇರಿ, ಮರುದಿನ ಕಟ್ಟಬೇಕಾಗಿರುವ ಶಾಲಾ ಫೀಸ್ ಇಂತಹವುಗಳ ಬಗ್ಗೆ ಚಿಂತೆ ಮಾಡಬೇಕಾಗಿಲ್ಲದಿರುವವರು ಮಾತ್ರ ಊಟದ ರುಚಿಯ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಾಧ್ಯ.
- ✓ ನನ್ನದು ಅಹಂ ಪ್ರಶ್ನೆ ಅಲ್ಲ. ನನ್ನದು ಗೌರವದ ಪ್ರಶ್ನೆ. ಅಗೌರವದ ಸೂಚನೆ ಕಂಡು ಬಂದಾಗ ನೀವು ಯಾರೇ ಆಗಿರಲಿ ನಾನು ಬಿಟ್ಟು ಹೋಗುತ್ತೇನೆ.
- ✓ ಹಂಗ್ರಿ + ಆ್ಯಂಗ್ರಿ = ಹ್ಯಾಂಗ್ರಿ.
- ✓ ಯು ನೆವರ್ ನೊ ವಾಟ್ ಮೈಟ್ ಹ್ಯಾವ್ ಹ್ಯಾಪೆನ್ಡ್ ಇನ್ ದಿ ಲೈಫ್ ಯು ಡಿಡ್ನಂಟ್ ಚೂಸ್.
- ✓ ನೆನಪಿರಲಿ ನಾವು ಸೋಲುವುದು ಬಿದ್ದಾಗಲಲ್ಲ, ಬಿದ್ದಾಗ ಮೇಲೆದ್ದು ಸವರಿಸಿಕೊಂಡು ಮುನ್ನಡೆಯದಿದ್ದಾಗ.
- ✓ ಎ ರೀಡರ್ ಲಿವ್ಸ್ ಎ ಥೌಸಂಡ್ ಲೈವ್ಸ್ ಬಿಫೋರ್ ಹಿ ಡೈಸ್. ದಿ ಮ್ಯಾನ್ ಹು ನೆವರ್ ರೀಡ್ಸ್ ಲಿವ್ಸ್ ಓನ್ಲಿ ಒನ್.
- ✓ ನಮ್ಮ ಜೀವನದ ಹಲವಾರು ಅತಿ ಮಧುರ ಕ್ಷಣಗಳನ್ನು ನಾವು ಯೋಜಿಸಿರುವುದೇ ಇಲ್ಲ.
- ✓ ಧನಾತ್ಮಕವಾಗಿ ಯೋಚಿಸುವವನನ್ನು ಯಾವ ವಿಷವೂ ಸಾಯಿಸುವುದಿಲ್ಲ, ಋಣಾತ್ಮಕವಾಗಿ ಯೋಚಿಸುವವನನ್ನು ಯಾವ ಔಷಧಿಯೂ ಬದುಕಿಸುವುದಿಲ್ಲ.
- ✓ ಜರ್ನಿ ಈಸ್ ಎ ರಿವಾರ್ಡ್, ಡೆಸ್ಟಿನೇಷನ್ ಈಸ್ ಎ ಬೋನಸ್.
- ✓ ಲಿವ್ ಅಂಡ್ ಲೆಟ್ ಲಿವ್ ಅಲ್ಲ ಲಿವ್ ಅಂಡ್ ಲೆಟ್ ಲಿವ್‌ಇನ್.. ಈಗ.
- ✓ ಮ್ಯೂಸಿಕ್ ಈಸ್ ದಿ ಮೋಸ್ಟ್ ಡಿಸ್ಟಿಲ್ಡ್ ಫಾರ್ಮ್ ಆಫ್ ನಾಯ್ಸ್.
- ✓ ಬೇರೆಯವರಿಗೆ ಕೊಟ್ಟಿದ್ದನ್ನು ಒಂದು ಬಾರಿ ಉಸಿರಾಡುವ ಮುನ್ನವೇ ಮರೆತುಬಿಡು. ಬೇರೆಯವರಿಂದ ಪಡೆದಿದ್ದನ್ನು ಕೊನೆ ಉಸಿರು ಇರುವವರೆಗೂ ನೆನಪಿನಲ್ಲಿಡು.
- ✓ ಹಳೆಯ ಅಧ್ಯಾಯವನ್ನು ಮತ್ತೆ ಮತ್ತೆ ಓದುತ್ತಿದ್ದರೆ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಆಗುವುದೇ ಇಲ್ಲ. ■

# ಕರೆಂಟ ಕೈ ಕೊಟ್ಟಾಗ !!!

ಸುಚೇತ ರಾಘವೇಂದ್ರ

(ಕನಕದಾಸರ ಕ್ಷಮೆ ಕೋರಿ)

ಬಾಗಿಲನು ತೆರೆದು ಬೆಳಕ ಮಾಡಿಕೊಳ್ಳಿರೋ
ಕೂಗಿದರು ದನಿ ಕೇಳದು ಬೆಸ್ಕಾಮಿಗೆ ॥

ಕಡುಕೋಪದಿಂ ಜನರು ಫೋನಾಯಿಸಿದರೋ
ಹಲೋ ಹಲೋ ಎಂದು ಕೂಗಿ ಸೊರಗಿದರೋ ॥

ಬಿಟ್ಟ ಕೆಲಸವ ಮಾಡಿ, ಸುಸ್ತಾಗಿ ಬಸವಳಿದು
ಹಿಡಿ-ಹಿಡಿ, ಹಿಡಿ ಶಾಪವನಿತ್ತರೋ, ನರಹರಿಯೇ ॥

ಅರೆ ಅರೆದ ಚಟ್ನಿಯನ್ನು ತೆಗೆದು ಮಿಕ್ಸಿಯಿಂ
ದೋಸೆಯೊಂದಿಗೆ ಸವಿದು, ಆಹಾ ಏನು ರುಚಿ ಎಂದರೋ ॥

ಅರೆ ಬೆಂದ ಆಲೂವನು ಮೈಕ್ರೋದೇವಿಂದೆಗೆದು
ಇರಲಿ ಫಿಡ್ಜಿನಲಿ ಎಂದಿಟ್ಟರೋ ನರಹರಿಯೇ ॥

ತಣ್ಣೀರಿನಲ್ಲಿ ಸ್ನಾನವ ಮಾಡಿ ನಡುಗುತ್ತ
ನಾಳೆಯೇ ಸೋಲಾರ ಹಾಕುವವೆಂದಾಗ ಇಟ್ಟು ॥

ಅರೆ ಒಗೆದ ಬಟ್ಟೆಗಳ ತೆಗೆದು ಮಷಿನಿನಿಂದ
ಉಸ್ಸೆಂದು ಉಸುಗರಿದು ಹಿಂಡಿ ಹಾಕಿದರಿ ನರಹರಿಯೇ ॥

ತಡವಾಯಿತೆಂದು ಬೇಗನೇ ರೆಡಿಯಾಗಿ
ಓಡಿದರು ಕೆಲಸಗಳಿಗೆ ಬಾಗಿಲವ ಜಡಿದರೂss ॥

ಅರಚುತ್ತ ರೇಡಿಯೋ, ಟಿವಿಗಳು ಸ್ವಾಗತಿಸಿದವು ಸಂಜೆಗೆ
ಮನೆ ಎಲ್ಲ ದೀಪಗಳಿಂದ ಜಗಜಗಿಸಿದ್ದವೋ ನರಹರಿಯೇ ॥

ಆವ ಕ್ಷಣದಿಂ ಪೋಗಿ, ಅವ ಕಣ ಪ್ರತ್ಯಕ್ಷವಾಗುವುದೋ,
ಸಮಯಾಸಮಯವುಂಟೇ ಬೆಸ್ಕಾಂ ನೀಡುವ ಶಾಕಿಗೆ ॥

ಎದುರಿಸಿರಿ ನೀವು ಧೈರ್ಯದಿಂದ ಬೆಂಗಳೂರಿಗರೇ
ಕರೆಂಟ 'ಕಟ್' ಶಾಕಿನಿಂದ ರಕ್ಷಿಸೋ ನರಹರಿಯೇ ॥



## ಅಮೆರಿಕನ್ ಲೈಫು

✍ಆನಂದ

'ಇದೇನ್ರಿ, ಅಮೆರಿಕದಲ್ಲಿ ಒಂದೂವರೆ ತಿಂಗಳು ಇದ್ದವಲ್ಲಾ ಒಂದಾದರೂ ಜಿರಳೆ ಕಣ್ಣಿಗೆ ಬೀಳಲಿಲ್ಲ' ಎಂದಳು ಮಡದಿ ಅಲ್ಲಿಂದ ವಾಪಸಾದ ಮೇಲೆ. 'ಅಡಿಗೆ ಮನೆ ಬೇಡ ಹೋಗಲಿ ಸ್ಟೋರ್ ರೂಂನಲ್ಲಾದರೂ ಕಾಣಿಸಬೇಡವೆ?' ಎಂದು ನಾನು ಮಾತು ಸೇರಿಸಿದೆ.

'ಬೆಲ್ಲ ನೆಲದ ಮೇಲೆ ಬಿದ್ದರೆ ದೊಡ್ಡ ಗೊದ್ದ ಕೂಡ ಬಂದು ಮೂಸ ನೋಡೊಲ್ಲ ಯಾಕೆ?' ಎಂದವಳ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ. ಸೊಳ್ಳೆಗಳೂ ಸಹ ಗುಂಯ್ ಎಂದು ಹಾಡುತ್ತಾ ಕಾಡುತ್ತಿರಲಿಲ್ಲ.

'ರಸ್ತೆಗಳು ನೋಡ್ರೀ ಒಂದು ಗುಂಡಿನೂ ಇಲ್ಲದೆ ಎಲ್ಲಾ ಪಳ ಪಳ ಹೊಳಿತಾ ಆಗತಾನೆ ನಿರ್ಮಿಸಿದ ಹಾಗೆ ಕಾಣುತ್ತಿದ್ದವು ನಾವಿದ್ದ ಕಡೆ' ಎಂದು ಆಶ್ಚರ್ಯಪಟ್ಟಳು.

'ಅಲ್ಲಿ 40 ಪರ್ಸೆಂಟ್ ಕಮೀಷನ್ ಇಲ್ಲ ಅಂತ ಕಾಣುತ್ತೆ' ಎಂದೆ.

'ಯಾರೂ ರೋಡ್ ಕಟ್ಟಿಂಗ್ ಮಾಡೇ ಇರಲಿಲ್ಲ. ಚರಂಡಿ ನೀರೂ ಚರಂಡೀಲೇ ಹರೀತಾ ಇತ್ತು, ಚರಂಡಿನೂ ಕಣ್ಣಿಗೇ ಬೀಳಲಿಲ್ಲವಲ್ರೀ..'

'ರಸ್ತೆಗಳೂ ಅದೆಷ್ಟು ಕ್ಲೀನಾಗಿದ್ದವು? ಒಂದು ಸಿಗರೇಟ್ ಪ್ಯಾಕ್ ಸಹ ಯಾರೂ ಎಸೆದಿರಲಿಲ್ಲ.'

'ಇನ್ನೊಂದು ಗಮನಿಸಿದ್ರಾ? ಯಾವ ಮನೇಗೂ ಕಾಂಪೌಂಡೇ ಇರಲಿಲ್ಲ. ಆದ್ರೂ ಯಾರೂ ಒತ್ತುವರಿ ಮಾಡಿಕೊಳ್ಳೊಲ್ಲಾ ಅಂತ ಕಾಣುತ್ತೆ.'

'ಕಾಂಪೌಂಡ್ ಇಲ್ಲದಿದ್ರೂ ಸಹ ಎಲ್ರೂ ಅದೆಷ್ಟು ಹೂ ಬೆಳೆಸಿದ್ರೂ ನೋಡಿದ್ಯಾ?'

'ಅದೆಷ್ಟು ತರಹ ಗುಲಾಬಿ? ಒಂದೊಂದೂ ಅದೆಷ್ಟು ದೊಡ್ಡದು. ಬೆಳೆದು ದೊಡ್ಡದಾಗಿ ಗಿಡದಲ್ಲೇ ಬಾಡುತ್ತಿತ್ತೇ ಹೊರತು ಯಾರೂ ಕೀಳ್ತಿರಲಿಲ್ಲ.'

'ಅಲ್ಲೊಂದು ದೇವಸ್ಥಾನ ಇದ್ದಿದ್ದರೆ ನಮ್ಮೋರು ಅದನ್ನು ಕಿತ್ತು ಪೂಜೆಗೆ ಕೊಂಡೊಯ್ಯುತ್ತಿದ್ದರೇನೋ..?'

'ಸಾಧ್ಯ. ಯಾವ ಟ್ರಾಫಿಕ್ ಜಂಕ್ಷನ್‌ನಲ್ಲೂ ಒಬ್ಬನಾದರೂ ಪೊಲೀಸಿನವನು ಕಾಣಲಿಲ್ಲವಲ್ಲಾ?'

'ಆದರೂ ಎಲ್ಲರೂ ಟ್ರಾಫಿಕ್ ನಿಯಮಾನಾ ಅಷ್ಟು ಶಿಸ್ತಾಗಿ ಪಾಲಿಸುತ್ತಿದ್ದರಲ್ಲಾ ಹೇಗೆ? ಮಾಮೂಲಿಗೆ ಅವಕಾಶವೇ ಇಲ್ಲಾಂತ ಕಾಣುತ್ತೆ.'

'ಹಾಗಿದ್ದರೆ ಅಲ್ಲಿನ ಪೊಲೀಸಿನವರು ಬರೇ ಸಂಬಳದಲ್ಲೇ ಬದುಕು ಬೇಕು ಪಾಪ. ನಮ್ಮೋರೇ ವಾಸಿ.'

'ನನಗನ್ನಿಸುತ್ತೆ..'

'ಏನು?'

'ಅಮೆರಿಕದಲ್ಲಿ ನಾವಿದ್ದುದು ಸುಮ್ಮನೆ. ಬಿಬಿಎಂಪಿಯಲ್ಲಿರುವುದು ನಮ್ಮನೆ.'

'ವ್ಹಾ! ವ್ಹಾ!' ■

**ನಿಮಗೆ ಯಾವ ವಯಸ್ಸಿನಲ್ಲಿ ಕೋಪ ಬರುತ್ತಿತ್ತು**

ಕೋಪಕ್ಕೂ ವಯಸ್ಸಿಗೂ ಯಾವ ಸಂಬಂಧವೂ ಇಲ್ಲ. ವಿವೇಕ ಕಡಿಮೆಯಾದಾಗ ಕೋಪ ಹೆಚ್ಚಾಗುತ್ತದೆ.

**–ಉತ್ತರ ಭೂಪ**

# ನಮ್ ಕಂಪ್ಯೂಟರ್ಗೆ ತಲೆ ನೋಯ್ತಾ ಇದೆ ಕಣ್ರೀ...!

ಅಣಕು ರಾಮನಾಥ್

ಗುಡ್ ಮಾರ್ನಿಂಗ್, ನಾನು ಸೋಮಿ ಮಾತಾಡ್ತಿರೋದು. ನನ್ನ ಫ್ರೆಂಡ್ ಗಣೂ ಅವನ ಕೆಲವು ತೊಂದರೆಗಳನ್ನು ನಿಮ್ಮ ಹತ್ರ ಹಂಚ್ಕೊಳಕ್ಹೇಳಿದಾನೆ. ಪ್ಲೀಸ್ ಲೆಂಡ್ ಮಿ ಯುವರ್ ಇಯರ್ಸ್.

ಇರಿ ಸ್ವಾಮಿ... ಈ ಫೋನೆಟಿಕ್ಸನ್ನೋದು ಬಂದ್ಮೇಲೆ ಪ್ರಪಂಚವೇ ಹಾಳಾಗ್ಹೋಗಿದೆ. ಆಗ ಮಾರ್ಕ್ ಆಂತೋನಿ 'ಫ್ರೆಂಡ್ಸ್ ರೋಮನ್ಸ್ & ಕಂಟ್ರೀಮನ್, ಪ್ಲೀಸ್ ಲೆಂಡ್ ಮಿ ಯುವರ್ ಇಯರ್ಸ್' ಅಂದಾಗಿದ್ದಾಬತ್ತನ್ನೇ ನಾನ್ಕೇಳ್ತಿದ್ದೀನೇ ವಿನಃ 'ಡಿಯರ್ ಸನ್, ಪ್ಲೀಸ್ ಲೆಂಡ್ ಮಿ ಯುವರ್ ಇಯರ್ಸ್' ಅಂತ ಕೇಳಿದ ಯಯಾತಿಯ ಬಾಬ್ತಿನ ಇಯರ್ಸನ್ನಲ್ಲ ನಾನು ಕೇಳ್ತಿರೋದು. ನಮ್ಮ ಗಣೂನೂ ಈ ಬಾಬ್ತಲ್ಲಿ ಸಾಕಷ್ಟು ನರಳ್ತಿದಾನೆ. 'ಪ್ರೊನೌನ್ಸ್ ಡಾಟ್ ಕಾಮ್' ವೆಬ್ಸೈಟಿಗೆ ಹೋಗಿ 'ಎಸ್ಸಿಹೆಚ್ಡಿಯೂಎಲ್ಇ' ಅನ್ನೋದನ್ನ ಉಚ್ಚಾರ ಮಾಡೂಂದ್ರೆ 'ಷೆಡ್ಯೂಲ್', 'ಸ್ಕೆಡ್ಯೂಲ್', 'ಸ್ಕಿಡ್ಯೂಲ್' ಅನ್ನೋದಲ್ಲದೆ ಚೀನಾದವರೋ, ಜಪಾನಿನವರೋ 'ಷಿಡುಲೆ' ಅಂದಿರೋದನ್ನೂ ತೋರಿಸೋ ಸೈಟುಗಳಿವೆಯಲ್ಲ, ಇವುಗಳಿಂದ ಕಡಿಮೆ ಗೊಂದಲ ಉಂಟಾದೀತೇನು? ಇಂಗ್ಲಿಷ್ ಪದಕ್ಕೇ ಇಷ್ಟು ಗೊಂದಲವಿರೋವಾಗ ಝೆಕೋಸ್ಲೋವಾಕಿಯಾದೋ ಜರ್ಮನೀದೋ ಪದವನ್ನ ಉಚ್ಚರಿಸಕ್ಕೆ ಹೇಳಿದರೆ ಇನ್ನೇನೇನು ಅನರ್ಥಗಳು ಉಂಟಾದಾವೋ!

ಗಣೂ ಸರ್ಕಲ್ಲಲ್ಲಿ ಜಿ.ಸಿ. ಅನ್ನೋ ಕೊಲೀಗ್ ಇದಾನೆ. ಅವನು ಆರು ತಿಂಗಳಿಗೆ ಹುಟ್ಟಿದ ಆಸಾಮಿಯ ತರಹಾನೇ ಅಡ್ತಾನೆ. ಮಾರ್ಕ್ ಅನ್ನಕ್ಕಿಲ್ಲ ಝುಕರ್ಬರ್ಗ್ ಅಂತ ಬಾಲ ಸೇರಿಸ್ಕೊಂಡು ಸಿದ್ಧವಾಗೋ ಈ ಕಾರ್ಯಕರ್ತನ್ನ ಕೇರ್ಫುಲ್ಲಾಗಿ ಹ್ಯಾಂಡಲ್ ಮಾಡ್ಬೇಕು. 'ಇಂದುಶ್ರೀ' ಅಂತ ಟೈಪಿಸಿ ವೆಂಟ್ರಿಲಾಕ್ವಿಸಮ್ ಬಗ್ಗೆ ತಿಳ್ಕೊಳೋಣಾಂತ ಹೋದ್ರೆ ಇಂಡಸ್ಟ್ರಿ ಅಂತ ಆಟೋಕರೆಕ್ಟ್ ಮಾಡ್ಕೊಂಡು ಬೇಡ್ವಾದಿಂಡಸ್ಟ್ರಿಗಳ ಬಾಬ್ತೆಲ್ಲಾ ಪರಿಚಯಿಸ್ತಾನೆ ಹಾಗಂತ ಇಂಡಸ್ಟ್ರಿ ಅಂತ ಸೀಕ್ ಮಾಡಿದ್ರೋ, 'ಇನ್ ಡಸ್ಟ್ ಸ್ಟ್ರೀಟ್ಸ್' ಅಂತ ಶುರು ಹಚ್ಕೊಂಡು ಯಾವ್ಯಾವ್ದೋ ಸೀರಿಯಲ್ಲೂ, ಸೀಫಾಲ್ಲೂ, ಸೀನ್ಯೂಟ್ರಲ್ಲುಗಳ ಪಟ್ಟಿಗಳನ್ನೇ ನಿಮ್ಮ ತಲೆಯ ತುಂಬಾ ತುಂಬಿಸಿಬಿಡ್ತಾನೆ.

ಎ ಮ್ಯಾನ್ ಈಸ್ ನೋನ್ ಬೈ ದ ಕಂಪನಿ ಹಿ ಕೀಪ್ಸ್ ಅಂತೆ. ನಮ್ಮ ಗಣೂಗೆ ಕಂಪ್ನಿ ಕೊಡೋವ್ರು ಹೇಗಿದ್ದಾರೇಂತೀರೀ! ಒಬ್ಬ ಬರ್ತಾನೆ; ಫೇಸ್ಬುಕ್ ಓಪನ್ ಮಾಡ್ತಾನೆ, ಏನೋ ಪೋಸ್ಟ್ ಮಾಡ್ತಾನೆ. ಅಲ್ಲಿಗೆ ಅವನ ಅವತ್ತಿನ ಕಥೆ ಮುಗಿದ್ಹಾಗೇ! ನಿಮಿಷ್ನಿಮ್ಷಕ್ಕೂ ಎಫ್ಬಿ ಓಪನ್ ಮಾಡೋದು, ಕಾಮೆಂಟು, ಲೈಕಿದೆಯಾಂತ ನೋಡೋದು, ಇಲ್ಲವಾದ್ರೆ ಹ್ಯಾಪ್ಮೋರೆ ಹಾಕ್ಕೊಳೋದು. ದಿನವೆಲ್ಲಾ ಇದೇ ಕೆಲಸ ಮಾಡ್ಕೊಂಡಿರೋ ಇಂತಹವರನ್ನ ಮೆಂಟಲ್ ಹಾಸ್ಪಿಟಲ್ಲಲ್ಲಾದ್ರೆ ಓಸಿಡಿ ಸಿಂಡ್ರೋಮಿನೋವ್ರೂಂತ ಕರೆಯೋವ್ರು. ಇನ್ನೊಬ್ಬ ಬರ್ತಾನೆ; ಒಂದೇ ನಿಮಿಷದಲ್ಲಿ ಎಂಟೋ ಹತ್ತೋ ಸೈಟುಗಳನ್ನ ಓಪನ್ ಮಾಡ್ಬಿಡ್ತಾನೆ; ಯಾವುದನ್ನೂ ಮೂವತ್ತು ಸೆಕೆಂಡಿಗಿಂತ ಹೆಚ್ಚು ನೋಡಲ್ಲ. ಕ್ಲಾಸಿಕ್ ಕೇಸ್ ಆಫ್ ಎಡಿಹೆಚ್ಡಿ! ಇವರ್ಪೈಕಿ ಇನ್ನೊಂದಿಸಮೂ ಇದೆ. ಲೈಕ್ ಬಂದಾಗೆಲ್ಲ ಅಟ್ಟಕ್ಹಾರಿ, ನೆಗೆಟಿವ್ ಕಾಮೆಂಟ್ ಬಂದಾಗೆಲ್ಲ ಡಿಪ್ರೆಸ್ ಆಗೋ ಇಂತಹ ಪ್ರಾಣಿಗಳನ್ನ ಬೈಪೋಲಾರ್ ಡಿಸಾರ್ಡರ್ ಕೇಸುಗಳೂಂತ ಸೈಕಿಯಾಟ್ರಿಸ್ಟುಗಳು ಹೇಳಿಯಾರು. ಗಣೂ, ಪಾಪ! ಸದ್ದಿಲ್ದೆ

ಇಂತಹವರನ್ನ ಪ್ರತಿ ದಿನವೂ ಸಹಿಸ್ಕೋಬೇಕು!

ಮೀರ್ ಸಾದಕ್ ಗೊತ್ತಾ ನಿಮಗೆ? ಉಂಡ್ಮನೇಗ್ ದ್ರೋಹ ಬಗೆದ ಅವನಂತಹದ್ದೇ ಸಹವಾಸ ಗಣೂಗೆ ಆಗ್ತಿರತ್ತೆ. ಬರುವಾಗ ಆಂಟಿವೈರಸ್ ಅಂತ ಪರಿಚಯ ಮಾಡ್ಕೊಂಡು, 'ಬಾಪ್ಪ, ನಿನ್ನದೇ ಮನೇಂತ ತಿಳ್ಕೋ. ಎಲ್ಬೇಕಾದ್ರೂ ಓಡಾಡ್ಕೊಂಡಿರು' ಅಂತ ಅವಕಾಶ ಕೊಟ್ರೆ, ಸ್ವಲ್ಪ ದಿನ ಚೆನ್ನಾಗಿದ್ದಾಗಿದ್ದು, ಆಮೇಲೆ ಹಿತ್ತಲಬಾಗಿಲು ತೆಗೆದು ಟ್ರೋಜಾನನ್ನೋ ಅವನ ಕಸಿನ್ನನ್ನೋ ಬರ್ಮಾಡ್ಕೊಳ್ಳೋ ವೈರಸ್ ರಾಜ್ಯದ ಗುಪ್ತಚರರು ಗಣೂನ ಆರೋಗ್ಯಾನ ಆಗಾಗ್ಗೆ ತಪ್ಪಿಸ್ತಿರ್ತಾರೆ. ಗಣೂ ತನ್ನಪಾಡಿಗೆ ರ್ಯಾಮ್ ರಾಮ್ (RAM, ROM) ಅಂತ ಜಪ ಮಾಡ್ಕೊಂಡಿದ್ರೆ ಈ ವೈರಸ್ಸಂಬೋ ವೈರಿ ಅವನು ಕ್ರ್ಯಾಷ್ ಆಗೋ ಮಟ್ಟಕ್ಕೆ ತಂದ್ಬಿಡ್ತಾನೆ.

ಇಂಗ್ಲಿಷ್ ಭಾಷೇನ ಗಣೂವಿನ ರಾಜ್ಯದಲ್ಲಿ ಬಳಸೋದೂ ವಿಚಿತ್ರವಾಗಿಯೇ. 'ಜಸ್ಟಿಫೈ' ಅಂತ ಕೋರ್ಟಲ್ಲಿ ಹೇಳಿದರೆ 'ಸಮರ್ಥನೆ ನೀಡುತ್ತೇನೆ' ಅಂತ ವಕೀಲರು ಎದ್ನಿಲ್ತಾರೆ. 'ಅಲೈನ್ ಲೆಫ್ಟ್' ಅಂತೇನಾದರೂ ಸಮಾಜದಲ್ಲಿ ಯಾರಾದರೂ ಹೇಳಿದರೆ ಅವನನ್ನ ಲೆಫ್ಟಿಸ್ಟೂಂತ ಬ್ರ್ಯಾಂಡ್ ಮಾಡ್ತಾರೆ. ಗಣೂ ಯಾರೇನಂದ್ರೂ ಕೇರ್ಮಾಡ್ದೆ 'ಕರ್ಮಣ್ಯೇವಾಧಿಕಾ' ರಸ್ತೆಯಲ್ಲೇ ಓಡಾಡ್ಕೊಂಡಿರ್ತಾನೆ. ಗಣೂ ಪ್ರಪಂಚದಲ್ಲಿ ಬುಲೆಟ್ಸ್ ಇವೆ. ಆದರೆ ಅವುಗಳಿಂದ ಯಾರ ಹತ್ಯೆಯೂ ಆಗಲ್ಲ; ಅವನ್ಹತ್ರ ದೊಡ್ಡೊಡ್ಡೇ ಔಟುಗಳ್ಲೇ ಇವೆ. ಆದರೂ ಅವು ಮೂರ್ಕಾಸಿಗೆ ಬಾಳಲ್ಲ. ಅವನ ಮುಖ ಹೇಗಿರ್ಬೇಕೂಂತ ಅವನು ಡಿಸೈಡ್ ಮಾಡೋಹಾಗಿಲ್ಲ. ಬ್ಯೂಟಿ ಪಾರ್ಲರ್ನವರ ಮರ್ಜಿಗೆ ಸಿಕ್ಕಿಹಾಕಿಕೊಂಡ ಬ್ರೈಡ್ ತರಹ ಯಾರೋ ಡಿಸೈಡ್ ಮಾಡಿದ ರೀತಿಯಲ್ಲೇ ಇವನ ಮುಖ ಕಾಣಿಸ್ಬೇಕು.

ಗಣೂ ಮನೇಗ್ಯಾರ್ಯಾರೋ ಬರ್ತಿರ್ತಾರೆ. ಇಹೆಚ್ಚಿ ಅನ್ನೋವ್ನೊಬ್ಬ ಆಗಾಗ್ಗೆ ಇವನ ಮನೆಗೆ ನುಸುಳಿ, ತನ್ನಲ್ಲಿರೋ ವಸ್ತುಗಳನ್ನೆಲ್ಲ ಇವನ ಮನೇಲಿ ಹಾಕ್ಬಿಟ್ಟು, ತಾನು ಹಗುರವಾಗಿ, ಇವನಿಗೆ ಭಾರ ಏರಿಸಿ ಹೊರಟ್ಹೋಗ್ತಾನೆ. ಪಿಡಿ ಅನ್ನೋ ವಿಸಿಟರ್ದೂ ಅದೇ ಕಥೆ. ಗಣೂ ತಿಂಗಳು ತುಂಬಿದ ಬಸುರಿಯ ತರಹ ಸ್ಲೋ ಆಗಿ ವರ್ಕ್ ಮಾಡಕ್ಕೆ ಆ ಆಗಂತುಕರು ಹೇರ್ಸೋ ಭಾರವೇ ಕಾರಣ.

ಗಣೂ ಒಂಥರಾ ವಠಾರ ಇದ್ದಾಗೆ. ಇಲ್ಲಿ ಹಾಡ್ಹೇಳೋವ್ರು, ಪಿಕ್ಚರ್ನೋವ್ರು, ಡಾಕ್ಯುಮೆಂಟ್ ರೈಟರ್ಸು, ಉಗ್ರಾಣದವರು ಎಲ್ರೂ ಇರ್ತಾರೆ. ಗಣೂ ಇವರೆಲ್ಲರಿಗೂ ಒಂದೊಂದು ಮನೆಯನ್ನ ಒದಗಿಸ್ಬೇಕು. ಅವರೆಲ್ಲ ಅವನ್ನ ಪಿಕ್ಚರ್ ಫೋಲ್ಡರ್ಸ್, ಡಾಕ್ಯು ಫೋಲ್ಡರ್ಸ್ ಮೊದಲಾದ ಹೆಸರುಗಳಿಂದ ಕರೀತಾರೆ. ಗಣೂ ಅವರ್ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಕಾಪಾಡ್ಕೊಂಡ್ಬರೋ ಹೊಣೆ ಹೊತ್ತಿರ್ತಾನೆ.

ಇಷ್ಟೆಲ್ಲವನ್ನೂ ದಿನವೂ ನಿಭಾಯಿಸಬೇಕಾದರೆ ತಲೆ ಚಿಟ್ಟುಹಿಡಿಯೋದು ಗ್ಯಾರಂಟಿ ಅಲ್ವೇ? ಇಲ್ಲಾಗ್ತಿರೋದೂ ಅದೇನೇ. ಬೆಳಗಿನಿಂದ ಸಂಜೆಯವರೆಗೆ ಲೈಫ್ ಇಂಪ್ರಿಸನ್ಮೆಂಟ್ಗೆ ಒಳಗಾದ ಕೈದಿಯ ಹಾಗೆ ಸೈಬರ್ ಕೆಫೆ ಅನ್ನೋ ಜಾಗದಲ್ಲಿ ಕೂತಿರೋ ಗಣೂವಿನ ಸ್ನೇಹಿತನಾದ ನಾನು ಸೋಮಿ ಅಂದ್ರೆ ಸೋಷಿಯಲ್ ಮೀಡಿಯಾ. ಮೇಲ್ಕಾಣಿಸಿದ ಗಣೂನ ಸಹವಾಸಿಗಳು ಜಿ.ಸಿ. ಗೂಗಲ್ ಕ್ರೋಮು; ಇಹೆಚ್ಚಿ ಎಕ್ಸ್ಟರ್ನಲ್ ಹಾರ್ಡ್ಡಿಸ್ಕು; ಪಿಡಿ ಪೆನ್ ಡ್ರೈವು. ಗಣೂ ಅಂದ್ರೆ ಗಣಕಯಂತ್ರ ಉರುಫ್ ಕಂಪ್ಯೂಟರ್. ಅವನ ಮುಖವೇ ಮಾನೀಟರ್. ಗಣೂ ದಿನಾ ನನ್ಹತ್ರ ತೋಡ್ಕೋತಿರೋದೊಂದೇ ರಾಗ – ತಡೆಯಾಕ್ಕಾಗಲ್ಲ ಸೋಮಿ... ಹೋಗು, ಜಗತ್ತಿಗೇ ಕಿರುಚಿ ಹೇಳು – ನಮ್ ಕಂಪ್ಯೂಟರ್ಗೆ ತಲೆ ನೋಯ್ತಾ ಇದೆ ಕಣ್ರೀ...!

■

# ಯಡಿಯೂರು ಯಂಗ್ಟ

ಡಾ. ಎ ಭಾನು

**ಫ್ಲಾಷ್ ಬ್ಯಾಕ್–1**

ಯಡಿಯೂರು ಯಂಗ್ಟ ಚಿಕ್ಕಂದಿನಿಂದಲೇ ತರಲೆ, ಮಾತಿನ ಮಲ್ಲ ಅಂತೆಲ್ಲ ಖ್ಯಾತಿ ಪಡೆದಿದ್ದ. ಯಡಿಯೂರು ಸರಕಾರಿ ಶಾಲೆಯಲ್ಲಿ ಬುದ್ಧಿವಂತ ಹುಡುಗನೆಂದು ಸೈ ಎನಿಸಿಕೊಂಡಿದ್ದ. ಮನೆಯಲ್ಲಿ ಬಡತನವಿದ್ದರೂ ಓದಿನಲ್ಲಿ ಒಂದು ಕೈ ಮೇಲೆಯೇ. ಮುದ್ದೆ ಊಟವುಂಡು ಗಟ್ಟಿಮುಟ್ಟಾಗಿದ್ದ ಯಂಗ್ಟ ಆಟಗಳಲ್ಲೂ ಚತುರ!

ಕಾನ್ವೆಂಟ್ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡ್ತಿದ್ದ ಅವನ ಕೆಲ ಸ್ನೇಹಿತರು ಆಡುತ್ತಿದ್ದ ಚೆಸ್, ಕ್ರಿಕೆಟ್, ಬ್ಯಾಡ್ಮಿನ್ಟನ್‌ಗಳು ಅವನಿಗೆ ಎಟುಕದವಾಗಿದ್ದವು. ಗೋಲಿಯಾಟ, ಚಿನ್ನಿದಾಂಡು, ಕಬಡ್ಡಿ, ಖೋ ಖೋ ಮುಂತಾದ ದೇಸೀ ಆಟಗಳಲ್ಲಿ ಪ್ರವೀಣ.

ಒಂದು ಸಂಜೆ ಆಟವಾಡಿ ದಣಿದಿದ್ದ ಯಂಗ್ಟಿಗೆ ಅವನ ಗೆಳೆಯ ಮುರಳಿಯ ತಾಯಿ ದೊಡ್ಡ ಲೋಟದಲ್ಲಿ ನೀರು ಕೊಟ್ಟರು. "ಹಾಗೇ ಒಂದು ಸೋಪು ಕೊಟ್ಬಿಡಿ, ಸ್ನಾನ ಮಾಡ್ಕೊಂಡ್ ಹೋಗ್ತೀನಿ", ಅಷ್ಟು ದೊಡ್ಡ ಲೋಟ ನೋಡಿ ರೇಗಿಸಿದ್ದ ಯಂಗ್ಟನ ಹಾಸ್ಯದ ಮಾತು ಕೇಳಿ ಎಲ್ಲರೂ ನಕ್ಕಿದ್ದರು. ಮುರಳಿಯ ತಾಯಿಗೆ ಯಂಗ್ಟ ಹತ್ತಿರವಾದ. ಆಗಾಗ ಅವರು ಹಾಕುವ ಕೈತುತ್ತು ತಿಂದು ಬೆಳೆದ.

ಪಕ್ಕದ ಖಾಲಿ ಸೈಟಿನಲ್ಲಿ ಒಮ್ಮೆ ಗೋಲಿ ಆಡ್ತಿದ್ದ ಯಂಗ್ಟನನ್ನು ಮುರಳಿಯ ತಂದೆ ಕರೆದು ಬೈದರು, "ಬೇರೆ ಎಲ್ಲಾದರೂ ಹೋಗಿ ಆಡ್ಕೊ. ಈ ನನ್ನ ಮಗ ನಿನ್ನ ಜತೆ ಸೇರ್ಕೊಂಡು ಪೋಕರಿಯಾಗಿದ್ದಾನೆ. ಕ್ಲಾಸಿನಲ್ಲಿ ಫೇಲಾಗಿದ್ದಾನೆ", ಅಂತ ಜಬರ್ದಸ್ತು ಮಾಡಿದ್ದು ಯಂಗ್ಟನಿಗೆ ಸರಿತೋರಲಿಲ್ಲ.

"ನೋಡಿ, ಮಿ.ರಾವ್, ಬೇಕಾದರೆ ನಿಮ್ಮ ಮಗನಿಗೆ ಕೊರಳಪಟ್ಟಿ ಹಾಕಿ ನಿಮ್ಮನೆ ನಾಯಿ ಜತೆ ಕಟ್ಟಿ ಗೇಟಾಚೆ ಬರದಂತೆ ಕೂಡ್ಹಾಕ್ಕೊಳಿ. ಅವನು ನಮ್ಮ ಜತೆ ಸೇರಕ್ಮುಂಚೇನೂ ಫೇಲಾಗ್ತಿದ್ದ. ಅವನೇ ಹೇಳ್ತಿದ್ದ, 'ನಮ್ಮಪ್ಪಾನೂ ಫೇಲ್ ಗಿರಾಕಿ ಕಣ್ರೋ, ಫೇಲಾಗೋದು ನಮ್ಮನೇಲಿ ಹೆರಿಡಿಟ್ರಿ' ಅಂತ. ನಿಮಗಿಂತಲೂ ಅವನಿಗೇ ಮಾರ್ಕ್ಸ್ ಜಾಸ್ತಿ ಬರುತ್ತಂತೆ. ನಿಮ್ಮ ಮಗನ್ನ ಬೇಕಾದರೆ ನೀವು ಬೈಯ್ಕಳಿ. ನನ್ನನ್ನ ದಂಡ್ಸಕ್ಕೆ ನಮ್ಮಪ್ಪ ಅಮ್ಮ ಇದ್ದಾರೆ. ಬೇರೇವ್ರ ಮಕ್ಕಳಿಗೆ ಹೀಗ್ಮಾಡ್ಬೇಡ ಹಾಗಾಡ್ಬೇಡ ಅಂತೆಲ್ಲ ಹೇಳಕ್ಕೆ ಬದಲು ನಿಮ್ಮಗನ್ನ ನೋಡ್ಕಳಿ, ಸಾಕಾಗುತ್ತೆ", ಟಾಂಗ್ ಕೊಟ್ಟ ಯಂಗ್ಟ.

ಪಡ್ಡೆ ಹುಡುಗನೊಬ್ಬನಿಂದ "ಮಿ.ರಾವ್" ಅನ್ನಿಸಿಕೊಂಡು ಸಹಿಸಲಾಗದೆ, ತಮ್ಮ ಮಾರ್ಕ್ಸ್ ಕಾರ್ಡ್ ರಹಸ್ಯ ತಮ್ಮ ಮಗನಿಂದಲೇ ಬಟಾಬಯಲಾದ ಅವಮಾನ ತಡೆಯಲಾಗದೆ ಮುರಳಿಯ ಕಿವಿ ಹಿಡಿದು ದರ ದರ ಒಳಗೆಳೆದುಕೊಂಡು ಹೋದ ಮಿ.ರಾವ್ ದಡಾರನೆ ಬಾಗಿಲು ಹಾಕ್ಕೊಂಡ್ರು.

ಮರುದಿನ ಮುರಳಿ ಚಿನ್ನಿದಾಂಡು ಆಟಕ್ಕೆ ನಗುತ್ತಲೇ ಬಂದ. ಹಿಂದಿನ ದಿನ ನಡೆದದ್ದನ್ನೆಲ್ಲ ಕಿಟಕಿಯಲ್ಲಿ ನೋಡಿದ್ದ ಅವನಮ್ಮ "ಮಕ್ಕಳ ತಂಟೇಗ್ ಹೋಗಿ ಮರ್ಯಾದೆ ಕಳ್ಕೋಬೇಡಿ" ಅಂತ ಮಿ.ರಾವ್ ಗೆ ತಾಕೀತು ಮಾಡಿದರಂತೆ!

**ಬೆಂಕಿ ಕಡ್ಡಿ (2)**

"ಥೂ ಇವರ ಜನ್ಮಕ್ಕೆ ಬೆಂಕಿ ಹಾಕ, ಇವರ ಮನೆ ಸಡುಗಾಡಿಗೆ ಹೋಗ", ಎಚ್ ಆರ್ ಮ್ಯಾನೇಜರ್ಯಡಿಯೂರು ಯಂಗ್ಟನ ಮುಂದೆ ಕುಳಿತ ಮಾಜಿ ಉದ್ಯೋಗಿ ಪುರುಷೋತ್ತಮ ಕಿಡಿಕಾರಿದ.

"ಸ್ವಲ್ಪ ಸಮಾಧಾನದಿಂದಿರಿ. ನಾನು ವಿಚಾರಿಸ್ಕೊಳ್ತೀನಿ", ಪಕ್ಕದಲ್ಲಿದ್ದ ಅವನ ವಕೀಲ ಬೆನ್ನು ಸವರಿದ.

"ಯಾಕ್ರಿ ಇವರನ್ನ ಕೆಲಸದಿಂದ ವಜಾ ಮಾಡಿದ್ರಿ?"

"ನಾವು ತೆಗೆದು ಹಾಕಲಿಲ್ಲ. ಅವರೇ ಸ್ವಯಿಚ್ಚೆಯಿಂದ ರಾಜೀನಾಮೆ ಕೊಟ್ಟರು", ಉತ್ತರಿಸಿದ ಯಂಗ್ಟ, ರಾಜೀನಾಮೆಯ ಪತ್ರವನ್ನು ತೋರಿಸುತ್ತ.

"ನೀವು ಬಲವಂತ ಮಾಡಿ, ಹೆದರಿಸಿ ಪಡೆದ ಪತ್ರಕ್ಕೆ ಕಾನೂನಾತ್ಮಕವಾಗಿ ಯಾವ ಬೆಲೆಯೂ ಇಲ್ಲ". ಲಾಪಾಯಿಂಟ್ ಹಾಕಿ ಹುಬ್ಬೇರಿಸಿದ ನ್ಯಾಯವಾದಿ.

"ಅಂತದ್ದೇನೂ ಆಗಿಲ್ಲ. ಕಂಪನಿ ಇವರನ್ನ ಆನ್ ಸೈಟ್ ಪ್ರಾಜೆಕ್ಟ್ ಲೀಡರ್ ಮಾಡಿ ರಾಂಚೀಗೆ ವರ್ಗಾವಣೆ ಮಾಡಿತು. ಹೋಗಲ್ಲ ಅಂತ ಇವರು ಖ್ಯಾತೆ ತೆಗೆದರು. ರಾಂಚೀಗೆ ಹೋಗದಿದ್ರೆ ಮನೇಗೆ ಕಳಿಸಿ ಅಂದ್ರು ಮೇಲಿನವರು. ನಾನೇ ಇವರಿಗೆ ಬೇರೆ ಕೆಲಸ ನೋಡಿಕೊಳ್ಳಿ ಅಂತ ಸಲಹೆ ಕೊಟ್ಟೆ. ಕೆಲಸದಿಂದ ವಜಾಗೊಳಿಸಿದರೆ ಇನ್ನೊಂದು ಕೆಲಸ ಸಿಗೋದು ಕಷ್ಟ, ರಾಜೀನಾಮೆ ಕೊಡಿ. ಒಳ್ಳೆಯ ಸೆವೆರೆನ್ಸ್ ಪ್ಯಾಕೇಜ್ ಬರೋ ಹಾಗೆ ಅನುಕೂಲ ಮಾಡ್ತೀನಿ ಅಂದೆ. ಅವರು ಬೇರೆ ಕೆಲಸ ಹುಡುಕಿಕೊಳ್ಳಲು ಒಂದು ವರ್ಷ ಬೇಕಾಗುತ್ತೆ ಅಂತ ಕಡತದಲ್ಲಿ ನಾನೇ ಬರೆದು, ಇವರಿಗೆ ಹನ್ನೆರಡು ತಿಂಗಳ ಸಂಬಳ ಮುಂಗಡವಾಗಿ ಕೊಡ್ಸಿದ್ದೀನಿ. ಹಾಗಾಗಿ ಇವರು ಸ್ವಯಂ ರಾಜೀನಾಮೆ ಪತ್ರ ಕೊಟ್ಟರು", ಯಂಗ್ಟ ವಿವರಿಸಿದ.

"ಇವರವ್ವ, ಯಾರಿಗೆ ಬೇಕು ಅವರ ಎಂಜಲು ಕಾಸು. ಆ ಎಂಡೀಮನೇಗೆ ಬೆಂಕಿ ಬೀಳ" ಅಬ್ಬರಿಸಿದ ಅಗ್ನಿಪುತ್ರ.

"ಈ ವಾಚಾಳಿತನವೇ ಇವರನ್ನ ಎಲ್ಲರಿಂದ ದೂರ ಮಾಡಿರೋದು. ಮಾತೆತ್ತಿದರೆ ಬೆಂಕಿ ಹಾಕ್ತಾರೆ. ಸಹೋದ್ಯೋಗಿಗಳು, ಮೇಲಿನವರು, ಜವಾನರು, ಕಸಗುಡಿಸುವವರು ಎಲ್ಲರ ಮೇಲೂ ಕೆಂಡಕಾರ್ತಾರೆ. ಇವರನ್ನ "ಕೊಳ್ಳಿ ದೆವ್ವ" ಅಂತ ರೇಗಿಸ್ತಾರೆ ಜತೆಯವರು. ಇವರ ಸಹೋದ್ಯೋಗಿಗಳೆಲ್ಲಇವರ ವಿರುದ್ಧ ವರದಿಬರೆದು, ಇವರಿಂದ ತಂಡದ ಉತ್ಸಾಹ ಕುಗ್ಗತ್ತೆ ಅಂದಿದ್ದಾರೆ. ಇವರು ನಾಲ್ಕು ವಾರ ರಜೆ ತಗೊಂಡಾಗ ಅವರೆಲ್ಲ ಸಂತೋಷದಿಂದ ಎಲ್ಲಾ ಅಸೈನ್ಮೆಂಟುಗಳನ್ನೂಮುಂಚಿತವಾಗಿಯೇ ಮುಗಿಸಿ, ಇನ್ನಷ್ಟು ಬೇರೆಪ್ರಾಜೆಕ್ಟ್ಮೆಲೆ ಕೆಲಸ ಪ್ರಾರಂಭಿಸಿದರು. ನಾಲ್ಕು ವಾರ ಇವರಿಲ್ಲದ್ದು ಯಾರಿಗೂ ಏನೂ ತೊಂದರೆ ಆಗಲಿಲ್ಲ, ಅನುಕೂಲವೇ ಆಯ್ತು. ಆಗ ಇವರ ಹಿಂದಿನ ಮೂರು ವರ್ಷದ ಪರ್ಫಾರ್ಮೆನ್ಸ್ ರಿಪೋರ್ಟ್ ತೆಗೆಸಿ ನೋಡಿದರೆ ಇಲ್ಲಿ ಇವರದು ಕೊಡುಗೆ ಶೂನ್ಯ ಅಂತ ಗೊತ್ತಾಯ್ತು. ಮೂರು ವರ್ಷಗಳಿಂದ ಟೀಂಮೆಂಬರ್ಸ್ಮಾಡಿದ ಕೆಲಸಕ್ಕೆ ಇವನ ಹೆಸರು ಸೇರಿಸಿ ಸುಮ್ಮನೆ ಸಂಬಳ ಪಡೀತಿದ್ದ. ಮೂರು ವರ್ಷಗಳಿಂದ ಮನೇಲೇ ಕೂತು ವರ್ಕ್ ಫ್ರಂಹೋಂಅಂತ ಕಾಲಕಳೀತಿದ್ದ. ಇವನು ಕಂಪನಿಯಲ್ಲಿರೋದು ಅವನ ತಂಡದವರಿಗೆ ಬಿಟ್ಟರೆ ಬೇರೆಯವರಿಗೆ ಗೊತ್ತೇ ಇರಲಿಲ್ಲ. ಮನೆಯಿಂದ ಇವನ ಹೆಂಡತಿ ಕರೆ ಮಾಡಿ ಇವನ್ನ ಆಫೀಸಿಗೆ

ಕರೆಸ್ಕೊಳ್ಳಿ. ಮನೇಲಿ ಇವನ ಕಾಟ ತಡೆಯಕ್ಕಾಗಲ್ಲ ಅಂತ ಗೋಳಾಡಿದ್ರು. ಮನೇಲೂ ನೆಂಟರ ಮೇಲೆ, ಸ್ನೇಹಿತರ ಮೇಲೆ ಬೆಂಕಿ ಹಾಕ್ತಾನಂತೆ. ಆಯ್ತು, ಆಫೀಸಿಗೆ ಬಂದು ಕೆಲಸ ಮಾಡು, ವರ್ಕ್ ಫ್ರಂ ಹೋಂ ಸಾಕು ಅಂದ್ರೆ, ಉರಿದುಕೊಂಡೇ ಆಫೀಸಿಗೆ ಬಂದ. ಬೇರೆ ಕ್ಲೈಯೆಂಟ್ಸಳಿ ಇವನ ಅನುಭವದ ಉಪಯೋಗ ಆಗಲಿ ಅಂತ ರಾಂಚೀಗೆವರ್ಗಾಯಿಸಿದರೆ, ಜ್ವಾಲಾಮುಖಿಯಾದ. ನಾವಾಗೋ ಹೊತ್ತಿಗೆ ಇವನನ್ನ ಮರ್ಯಾದೆಯಿಂದ ಕಳಿಸಿಕೊಟ್ಟಿದ್ದೀವಿ. ಸರಿಯಾಗಿ ಬುದ್ಧಿ ಹೇಳಿ ಕರಕೊಂಡು ಹೋಗಿ. ಇವನು ಅಗ್ನಿ ಅಸ್ತ್ರ ಆದ್ರೆ ನಾವು ವರುಣಾಸ್ತ್ರ ಪ್ರಯೋಗ ಮಾಡ್ಬೇಕಾಗುತ್ತೆ". ಮೀಟಿಂಗ್‌ಮುಗೀತು ಅಂತ ಯಂಗ್ಸ ಎದ್ದ.

"ಎಲ್ಲ ಹಾಳಾಗಿ ಹೋಗಿ, ನಿಮ್ಮ ಮನೆಗಳೆಲ್ಲ ಉರಿದುಬೀಳಲಿ, ನಿಮ್ಮ ಬದುಕೆಲ್ಲ ನಾಶವಾಗಲಿ" ಅಂತ ಕೂಗಾಡಿಕೊಂಡು ಕೊಳ್ಳಿ ದೆವ್ವ ಹೊರನಡೆದ.

"ಮೂರು ವರ್ಷಗಳಿಂದ ಸುಮ್ಮನೆ ಸಂಬಳ ಕೊಡ್ತಿದ್ರಾ? ಇವ್ನು ಇದ್ದಾನೋ ಇಲ್ವೋ ಅಂತ್ಲೂ ಗೊತ್ತಿರಲಿಲ್ಲವಾ? ಎಂಥಾ ಒಳ್ಳೆಯ ಕಂಪನೀ ರೀ ನಿಮ್ದು" ಕೊಳ್ಳಿ ದೆವ್ವದ ವಕೀಲ ಆಶ್ಚರ್ಯಚಕಿತನಾದ.

"ರೀ, ಮಿಸ್ಟರ್ ಯಂಗ್ಸ, ಇವನ ಕೇಸ್ ತೊಂದರೆಯಾಗದಂತೆ ನಾನು ಕ್ಲೋಸ್ ಮಾಡಿಸ್ತೀನಿ. ನಿಮ್ಮ ಕಂಪೆನೀಲಿ ನನಗೆ ಒಂದು ಕೆಲಸ ಕೊಡಿಸಿ ಪ್ಲೀಸ್" ಹಲ್ಲು ಗಿಂಜಿದ ಮಳ್ಳಿದೆವ್ವ!

■

**ಮದುವೆ ಆಗಿ ಮೂರೇ ತಿಂಗಳಾಯ್ತು ಅತ್ತೆ ಸೊಸೆ ಜಗಳ ಪ್ರಾರಂಭವಾಗಿಬಿಟ್ಟಿದೆ ಮುಂದೇನು ಗತಿ** ?

ಮೂರು ತಿಂಗಳು ! ಧನ್ಯರು ಸ್ವಾಮಿ ನೀವು, ಅಷ್ಟು ಕಾಲ ಜಗಳವಾಡದೇ ಹೇಗಿದ್ದರು.

ಅತ್ತೆ ತೀರ್ಥಯಾತ್ರೆ ಹೋಗಿದ್ದರೋ, ಸೊಸೆ ತವರಿಗೆ ಹೋಗಿದ್ದಳೋ

**–ಉತ್ತರ ಭೂಪ**

**ನನ್ನ ಆಪ್ತಮಿತ್ರನಿಗೆ ಒಂದು ಮುದ್ದಾದ ಗಂಡು ಮಗು ಹುಟ್ಟಿದೆ. ಅದು ತಂದೆಯನ್ನೂ ಹೋಲುತ್ತಿಲ್ಲ ತಾಯಿಯನ್ನೂ ಹೋಲುತ್ತಿಲ್ಲ.**

ಆದ ಪ್ರಮಾದವೇನು? ಕಪ್ಪು ಕೋಳಿ ಬಿಳಿ ಮೊಟ್ಟೆಯನ್ನಿಡುವುದಿಲ್ಲವೇ.

**–ಉತ್ತರ ಭೂಪ**

## ಖಂಡವಿದೆಕೋ.. ಮಾಂಸವಿದೆಕೋ....ಬಂದನಾ ಹುಲಿರಾಯನೂ...

ಸುಮನಾ

(ಪುಣ್ಯ ಕೋಟಿ ರಚಯಿತರ ಕ್ಷಮೆ ಕೋರುತ್ತಾ..)

ಏನೋ ಇದೂ ಜಗ್ಗೂ .ಅಯ್ಯೋ ಭಯ್ವಾಗುತ್ತೇ..ಒಳಗ್ಬಾರೋ ಅದೇನು ನಮ್ಮ ಪೆಟ್ ಅನಿಮಲ್ಲಾ???..ಬಾಪ್ಪಾ ಬಾ..ನಂಗೆ ಕೈ ಕಾಲು ನಡುಕ ಬಂದು, ತಣ್ಣಗಾಗ್ತಿದೀನೆನೋ ಅನ್ಸುತ್ತೆ..ಅಂದ್ರು ಅಮ್ಮ. ".....ಅಯ್ಯೋ ಹೆದರಬೇಡಾ ಅಮ್ಮಾ, ಬಾ ಇಲ್ಲಿ ಇದೂ ನಮ್ಮ ಪುಸ್ಸಿ ತರಾನೇ ಏನೂ ಮಾಡಲ್ಲ.. "....ನಿಂಗೊತ್ತಾ?? ನಂಜೊತೆ ಇದು ಮಾತಾಡುತ್ತೆ..ನೋಡ್ತಿರು ಈಗ..ಅಂದ ಮಗ ಜಗ್ಗು..ಸುಮ್ನೇ ಇರೋ, ನಿಂಗೇನೂ ಹುಚ್ಚು ಹಿಡ್ದಿಲ್ಲಾ ತಾನೇ?? ಅಲ್ಲಾ ಅದ್ರ ಮುಖಾನಾ ಮುದ್ದು ಬೇರೆ ಮಾಡ್ತಿದೀಯಾ?? ಒಂದು ಸಲ ಅದು ಎಗ್ರಿ ಬಿದ್ರೇ ಮುಗೀತು ನಿನ್ಕತೆ, ಜೊತೆಗೆ ನಮ್ಮೆಲ್ಲರ ಕಥೆ..ಆಗ್ತಾ ಇದ್ಯಲ್ಲೋ ನಂಗೆ ತುಂಬಲಾರದ ವ್ಯಥೆ... !!!!!

"..ಅಯ್ಯೋ ಅಮ್ಮಾಅದೇನೂ ಮಾಡಲ್ಲಮ್ಮಾ, ತುಂಬಾ ಸಾಧು ಪ್ರಾಣಿ ಆಗಿದೆ..ಪುಣ್ಯ ಕೋಟಿ ಯಷ್ಟೇ ಸಾಧು ಕಣಮ್ಮ. .ಜಗ್ಗದೆ ಅಂದ ಜಗ್ಗು....." ..ಓ..ಹೋ...ಹೋ..ನೀನು ಹೇಳ್ದೆ ನಾನ್ಕೇಳ್ದೆ ಸುಮ್ನಿರು.. ಬೆಳಗಾನ್ ಬೆಳಗು..ಏನೋ ಇದು ನಿನ್ನ ತರಲೆ,ಸುಮ್ನಿರ್ಲಾರ್ದೆ ಇರುವೆ ಬಿಟ್ಕೊಂಡ್ರಂತೆ ..ಅಂದಂಗೆ, ನೀನೂ ಈ ಹುಲೀನ ತಂದು ಮನೆ ಅಂಗಳದಲ್ಲಿ ಬಿಟ್ಕೊಂಡಿದೀಯಾ..ರಾಮ .. ರಾಮಾ..ಭಗವಂತಾ ನೀನೇ ಕಾಪಾಡು ಅಂತ ಕೆನ್ನೆಗೆ ತಪ್ಪು ಒಪ್ಪಿಸಿಕೊಂಡರು ಅಮ್ಮ...."ನೋಡಮ್ಮ, ಈಗ ಮಾತಾಡ್ತಿದೆ..ಪಾಪ ಮೈಯಲ್ಲೆಲ್ಲಾ ಗಾಯವಾಗಿದೆ. ನಾನೇ ಔಷಧಿ ಹಾಕಿ ಬ್ಯಾಂಡೇಜ್ ಹಾಕಿದೀನಿ, ಪಾಪ....ಕಣ್ಣೀರು ಹಾಕ್ತಿದೆ..ಹೇಳಪ್ಪಾ ಹುಲಿರಾಯ ನಿಂದೇನು ಪ್ರಾಬ್ಲಂ..ಅಂತ ಜಗ್ಗು ಹೇಳಿದಾಕ್ಷಣ..ಹುಲಿರಾಯ".... ಕಥೆ ಹೇಳುವೇ... ನನ್ನ ಕಥೆ ಹೇಳುವೇ...ಅಂತ ..ಶುರು ಮಾಡಿದ.. ಅಮ್ಮ..ನಂಗೂ ನಿಮ್ಮಂತೆ ಮಕ್ಕಳು, ಮರಿ ಇದ್ದಾರೆ.. ನನ್ನ ಮಗಳ ಮದುವೆ ನಿಶ್ಚಯ ವಾಗಿದೆ ಕಾಡಿನ ಯುವರಾಜನ ಜೊತೆಗೆ.. ನನ್ನ ಮಗಳು ಮೆಹಂದಿ, ಹಳದಿ, ಸಂಗೀತ್ ಕಾರ್ಯಕ್ರಮ ಇಟ್ಟು ಕೊಳ್ಳ ಬೇಕಂತೆ..ಮನುಷ್ಯನ ತಲೆ ಕಡಿದು ತರ್ಬೇಕಂತೆ. ಇಲ್ಲಿಯವ್ರು ನೇಲ್ ಆರ್ಟ್ ಅಂತ ವೆರೈಟಿ ಉಗುರು ಗಳ ಅಲಂಕಾರ ಮಾಡ್ತಾರಂತಲ್ಲಾ. ಹಂಗೇ ನಮ್ ಕಾಡ್ನಲ್ಲಿ ಈಗ ಹೊಸ ಫ್ಯಾಷನ್ ಅಂತೆ,ಮಗಳು ಅಳಿಯ ಮನುಷ್ಯನ ತಲೆಯ ಹಾರ ಹಾಕ್ಕೋ ಬೇಕಂತೆ..ಅದ್ರಲ್ಲೇ ಪೆಂಡೆಂಟ್,ಉಂಗುರ ಮಾಡ್ಸ್ ಬೇಕಂತೆ..ನಂಗೆಲ್ಲಿಂದ ಈ ಕರ್ಮ ಅಮ್ಮ..ನೀವೇ ಹೇಳಿ..ಆಗ ಪುಣ್ಯ ಕೋಟಿಗೆ ಕೊಟ್ಟ ಕಷ್ಟಕ್ಕೆ ತಾವೇ ಶಿಕ್ಷೆ ಕೊಟ್ಕೊಂಡಾಯ್ತಲ್ಲ ನಮ್ಮ ಪೂರ್ವಜರು....."..ಅಯ್ಯೋ ಇದೇನು ಹುಲಿರಾಯ ಮಾತಾಡ್ತಿದೆ..??

ಆಗಿನ ಕಾಲವಾಗಿದ್ರೆ ಪುಣ್ಯ ಕೋಟಿ, ಹುಲಿ ಮಾತಾಡಿದ್ದು ನಂಬೋ ಹಂಗಿತ್ತು..ಇದೇನಪ್ಪಾ ಪ್ರಪಂಚದ್ ಎಂಟನೆ ಅಧ್ಭುತ ನಮ್ಮನೆ ಅಂಗಳದಲ್ಲಿ????.....ಅಂತ ಬಿಟ್ಕಣ್ಣು ಬಿಟ್ಟು ಎವೆಯಿಕ್ಕದೇ ನೋಡಿದ್ರು ಅಮ್ಮ.. "ಹ್ಞೂ ..ಹೇಳಪ್ಪಾ.. ಅಂತ ಹುಲಿಯ ಬೆನ್ನು ಸವರಿದ ಜಗ್ಗ.. ಅದಕ್ಕೇ ಹಾಗೇ ಬೆಳಗ್ಗೆ ವಾಕ್ ಮಾಡ್ತಾ ನಿಂ ಏರಿಯಾಗೆ ಬಂದೆ, ಇದ್ದಿದ್ರಲ್ಲಿ ನೀಂ ಏರಿಯಾ ಚೆನ್ನಾಗಿದೆ,ಊರ ಹೊರಗೆ ಇರೋದ್ರಿಂದ ಹಸಿರು ತುಂಬಿ ಪರಿಸರ ನಗ್ತಾ ಇರುತ್ತೆ. ಯಾರಾದ್ರೂ ಸಿಕ್ರೆ ನನ್ನ ಮಗಳು, ಅಳಿಯಂಗೆ ಉಡುಗೊರೆ ತೊಗೊಂಡು ಹೋಗಿ ಕೊಡೋಣ ಅಂತಿದ್ದೆ..

ಒಂದೆರಡು ಟ್ರೈ ಮಾಡೋಕೆ ಹೋದಾಗ್ಲೇ ಗೊತ್ತಾಗಿದ್ದು ಅರರೇ,ನನ್ನ ಉಗುರುಗಳೇ ಮಾಯವಾಗ್ಬಿಟ್ಟಿವೆ..ಮೊನ್ನೆ ನನ್ನ ಮೇಲೆ ಅಟ್ಯಾಕ್ ಆಗಿತ್ತು ಬಹಳ ವೀಕ್ ಆಗಿದ್ದೆ.ಹೀಗಾಗಿದೆ ಅಂತ ನಂಗೆ ಗೊತ್ತೇ ಇರಲಿಲ್ಲ..ಇವತ್ತು ನನ್ನ ಮಗಳ ಕೋರಿಕೆ ಈಡೇರಿಸೋಕೆ ಹೋದಾಗ, ನಂಗೆ ಶಕ್ತೀನೇ ಇಲ್ಲದೇ ಧರಾಶಾಯಿ ಆಗ್ಬಿಟ್ಟಿದ್ದೆ, ಪಾಪ ನಿಮ್ಮ ಮಗ ಜಗ್ಗು ಬಂದು ನನ್ನ ಪ್ರಾಣ ಉಳಿಸಿದ್ದಾನೆ.. ಒಂದು ಪವಾಡ ಏನಾಯ್ತು ಅಂದ್ರೆ ಆ ರಾಕ್ಷಸರು ಉಗುರು ಕತ್ತರಿಸಿಕೊಂಡು ಹೋಗ್ತಿದ್ದಾಗೆ ನಂಗೆ ಮಾತಾಡೋ ಶಕ್ತಿ ಬಂದಿದೆ. ನಂಗೂ ಈಗ್ಲೇ ಗೊತ್ತಾಗಿದ್ದು, ತುಂಬಾ ಆಶ್ಚರ್ಯ ಅನ್ನಿಸ್ತಿದೆ.. ಅಮ್ಮ, ಅಂತ ಹುಲಿರಾಯ ಪ್ರವರ ಒಪ್ಪಿದಾಗ..ಅಮ್ಮ ಬೆಕ್ಕಸ ಬೆರಗಾಗಿ ನೋಡ್ತಿದ್ದರು.. ಮುಂದುವರಿಸಿ.. ಹುಲಿಯಪ್ಪ ಅದೇನೋ ಯಾವುದೋ ರಿಯಾಲಿಟಿ ಷೋ ಒಂದರ ಬಗ್ಗೆ ಟಿ.ವಿ.ವರದಿ ಬಂದಿತ್ತಂತಲ್ಲಾ, ಆ ಷೋ ನವ್ರು ಒಬ್ರು ಮತ್ತು ಬೇರೆ ಅನೇಕರು ನಮ್ಮ ಉಗುರಿನ ಪೆಂಡೆಂಟ್, ಉಂಗುರ ಎಲ್ಲಾ ಮಾಡಿಸಿ ಹಾಕ್ಕೊಂಡಿದ್ರಂತಲ್ಲ. ಈ ವಿಷಯ ಸೋಷಿಯಲ್ ಮೀಡಿಯಾ ದಲ್ಲಿ ಸಖತ್ ವೈರಲ್ ಆಗಿದ್ಯಲ್ಲಾ ಆ ಉಗುರುಗಳು ನಂದೂ ,ಮತ್ತು ನನ್ನ ಕುಟುಂಬದ ಅನೇಕರದೂ ಅಂತಾನೇ ಹೇಳೋಕ್ಬಂದೇ.. ಇನ್ನೂ ಕೆಲವರ ಕೈಲಿ,ಕತ್ನಲ್ಲಿ ನನ್ನ, ಮತ್ತು ನನ್ನ ಹಿರೀಕರ ಉಗುರುಗಳು.. ಅಲಂಕಾರವಾಗಿರೋದೆ ನನ್ನ ದುಃಖಕ್ಕೆ ಕಾರಣ ಅಮ್ಮ, ಈಗ ನಮ್ಗೆ ಬೇಟೆಯಾಡೋಕೆ ನಮ್ಮ ಆಯುಧ ವಾಗಿದ್ದ ನಮ್ಮ ಉಗುರುಗಳು ಇಲ್ವಲ್ರಮ್ಮ..ನೀವೇ ನ್ಯಾಯ ಹೇಳಿ ಏನ್ಮಾಡೋದು..????????

"ಹಸಿರುಳಿಸಿ, ವನ್ಯ ಪ್ರಾಣಿ ಸಂರಕ್ಷಣೆ ಮಾಡಿ, ಹುಲಿ ಸಂತತಿ ರಕ್ಷಿಸಿ ಅಂತೆಲ್ಲಾ ಭಾಷಣ ಮಾಡ್ತಾರಲ್ಲ, ಹುಲಿಗಾಗಿ ಘರ್ಜಿಸಿ, ಎಲ್ಲರೂ ಒಂದಾಗಿ, ನಾವೆಲ್ಲಾ ಹುಲಿಗೆ ಧ್ವನಿಯಾಗೋಣ, ಭೂಮಿಯ, ಮನುಕುಲದ ಸಂರಕ್ಷಣೆಗಾಗಿ, ಹುಲಿಗಾಗಿ ಘರ್ಜಿಸಿ, ನಮ್ಮ ಹೆಮ್ಮೆಯದು ರಕ್ಷಿಸಿ, ಅಂತೆಲ್ಲಾ ಘೋಷವಾಕ್ಯ ಘೋಷಿಸಿದರು, ನಾನು ಹುಲಿ, ಪ್ರತಿ ವರ್ಷ ಜುಲೈ 29 ಹುಲಿ ರಕ್ಷಣಾ ದಿನ ಅಂತ ಬೇರೆ ನಡೆಸ್ತಾರೆ ಇದ್ಯಾವ ದೇವ್ರಿಗೆ ಪ್ರೀತೀನೋ..ನಾನು ರಾಷ್ಟ್ರೀಯ ಪ್ರಾಣಿ..ನಂಗೇ ಈ ಗತಿ ಆದ್ರೆ..ಮಿಕ್ಕ ಪ್ರಾಣಿಗಳ ಗತಿ ಭಗವಂತಂಗೇ ಪ್ರೀತಿ. ಮನುಷ್ರು ಹುಲಿ ಬೇಟೆ ಮಾಡಿದ್ರೆ ಅದು ಕ್ರೀಡೆ, ಅದೇ ನಾವು ಮನುಷ್ಯನ ಬೇಟೆ ಆಡಿದ್ರೆ ಭಯಂಕರ ಕ್ರೌರ್ಯ ಅಂತಾರಲ್ಲಾ..ಇದಕ್ಕೇನು ಹೇಳಮ್ಮಾ ಅಂತ ನಿಟ್ಟುಸಿರು ಬಿಡುತ್ತಾ ಆಕಾಶದತ್ತ ನೋಡಿದ ಹುಲಿರಾಯ..

ಹೌದಪ್ಪಾ..ಆದ್ರೆ ಈಗ ನೀನೂ ಮನೇವ್ರನ್ನೆಲ್ಲಾ, ಮದುವೆ ಆಗ್ಬೇಕಾಗಿರೋ ಹುಡುಗೀನ ಬಿಟ್ಟು ಬಂದ್ಬಿಟಿದೀಯಾ, ಅಲ್ಯಾರು ನೋಡ್ಕೋತಾರೆ ಅಮ್ಮನೂ ಧೈರ್ಯ ಮಾಡಿ ಮಾತಾಡಲಾರಂಭಿಸಿದ್ರು.. ಹಾಗೇ ಮಮತೆ, ಕರುಣೆಯಿಂದ ವಿಚಾರಿಸಿ, ಕೇಳಿದಾಗ.. ನನ್ನ ಅಣ್ಣ ತಮ್ಮಂದಿರು,ಅಕ್ಕ ತಂಗಿಯರಿಗೆ ಹೇಳಿ ಬಂದಿದೀನಿ.."ಮುಂದೆ ಬಂದರೆ ಮುನಿಯಬೇಡಿ, ಹಿಂದೆ ಬಂದರೆ ಹಾರಬೇಡಿ.."ಅಂತ ಪುಣ್ಯ ಕೋಟಿ ಹಾಡಿದ್ದ ವರ್ಶನ್ ನ ಸ್ವಲ್ಪ ಚೇಂಜ್ ಮಾಡಿ ಹೇಳಿದೀನಿ. ಈಗ ಮನುಷ್ಯನೆಂಬ ರಾಕ್ಷಸನ ಹತ್ತಿರ ಕೇಳ್ತಿದೀನಿ.. ಓ ಉಗ್ರ ರಕ್ಕಸನೇ,ಖಂಡವಿದೆಕೋ ..ಮಾಂಸವಿದೆಕೋ.. ಗುಂಡಿಗೆಯ ಬಿಸಿ ರಕ್ತವಿದೆಕೋ..ರಾಕ್ಷಸ ಮಾನವನೇ ನನಗೆ ನನ್ನ ಜೀವವಾದ ಉಗುರುಗಳನ್ನು ವಾಪಸ್ ಮಾಡು,ನಂಗೆ ಮಾತನಾಡುವ ಶಕ್ತಿ ಹೋದ್ರೂ ಪರವಾಗಿಲ್ಲ.. ಅಮ್ಮ....ನೋಡೋಣ ಅವ್ರೂ ಹಿಮಾಲಯ ದಂಥ ಬೆಟ್ಟ ಹತ್ತಿ ಪ್ರಾಣ ತ್ಯಾಗ ಮಾಡ್ತಾರೇನೋ ಅಂತ. ಆದ್ರೆ ಅವರಿಗೆ ನನ್ನ ಪೂರ್ವಜರಿಗೆ ಇರೋಷ್ಟು ಸಂಸ್ಕಾರ

ಇಲ್ರಮ್ಮ, ಅವ್ರು ಪುಣ್ಯ ಕೋಟಿಯ ನಂಬಿಕೆ,ಪ್ರಾಮಾಣಿಕತೆಗೆ ಕರಗಿ, ಮರುಗಿ..ಪ್ರಾಣಿಯಾಗಿದ್ದೂ ಮಾನವೀಯತೆ ತೋರಿ ಬೆಟ್ಟದಿಂದ ಬಿದ್ದು" ಪ್ರಾಣ ತ್ಯಾಗ" ಮಾಡಿದ್ರು.

ಆದ್ರೆ ಈ ಉಗ್ರರು ನರರಾಕ್ಷಸರು ದುರ್ವ್ಯವಹಾರ,ಅಪ್ರಾಮಾಣಿಕತೆ, ಅಪನಂಬಿಕೆ, ಸುಳ್ಳು, ದಗಾ, ವಂಚನೆ..ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತುಂಬಿ ತುಳುಕಾಡ್ತಾ ಇದಾರೆ ಅವ್ರಿಂದ ಒಳ್ಳೆಯ ನಡತೆ, ಸತ್ಯ, ಪ್ರಾಮಾಣಿಕತೆ ನಿರೀಕ್ಷೆ ಮಾಡೋದು ನನ್ನ ಮೂರ್ಖತನ ಅಷ್ಟೇ.. "ನ್ಯಾಯ, ನೀತಿ, ಸತ್ಯ ಧರ್ಮ, ನಮ್ಮ ಜೀವನ್ದಲ್ಲಿ, ಕಾಡಿನ..ಜೀವನದ ನಿಘಂಟಿನಲ್ಲಿರುವ ಅಪಾರವಾದ ಶಾಶ್ವತ ನಿಧಿ.. ಈ ಉಗ್ರರ ಜೀವನದ ಡಿಕ್ಷನ್ರಿ ನಲ್ಲಿ ಆ ಪದಗಳೇ ಇಲ್ಲವಲ್ಲಾ..ಏನು ಅಂತ ಹೇಳಲಿ?????? ನಾನು ಕಾಡಿನ ಪ್ರಾಣಿಗಳೆಲ್ಲರ ಪರವಾಗಿ ಮನುಕುಲದ ಎಲ್ರನ್ನೂ ಕೇಳಿ ಕೊಳ್ತೀನಿ.. "...ದಯಮಾಡಿ ನಮ್ಮನ್ನು ಜೀವಸಹಿತ ಬಿಟ್ಟು ಬಿಡಿ, ಪರಿಸರ ವ್ಯವಸ್ಥೆ ಗಳ ಆರೋಗ್ಯ ಸಮ ತೋಲನ,ಜೀವ ವೈವಿಧ್ಯತೆ ಸಂರಕ್ಷಣೆ ನಮ್ದೇ ಜವಾಬ್ದಾರಿ, ನಮ್ಮನ್ನು ಸುರಕ್ಷಿತ ವಾಗಿರಿಸೋದು ಮಾನವರಾಗಿ ನಿಮ್ಮ ಜವಾಬ್ದಾರಿ ಅಲ್ವೇ..??? ಅನ್ನೋದು ನನ್ನ ಪ್ರಶ್ನೆ.. ಜೊತೆಗೆ ಈಚೆಗೆ ಮತ್ತೊಂದು ಕಾನೂನು ಬಾಹಿರ ಕೆಲಸ ನಡೆದಿದೆಯಂತೆ, ಪಾಪದ ನವಿಲು, ಅದೂ ನಮ್ಮ ರಾಷ್ಟ್ರ ಪಕ್ಷಿ ಅಲ್ವೇ.. ಅದರ ಗರಿಗಳನ್ನು ಇಟ್ಕೊಳೋದೂ ತೀವ್ರತರ ತಪ್ಪು ಅಂತ..ಗೊತ್ತಿದ್ದೂ ಈ ಮಾಡ್ಬಾರದ ಕುಚೇಷ್ಟೆ ಮಾಡ್ತಿದಾರಲ್ಲ..ಅಂತ ತಲ್ತಲೆ ಚಚ್ಕೊಂಡ ಹುಲಿಯಪ್ಪ.

ನಿಮ್ಮ ಮನದಾನಂದಕೆ, ನಿಮ್ಮ ಆಡಂಬರಕ್ಕೆ ನಮ್ಮನ್ನು ಬಲಿ ತೊಗೋಬೇಡಿ ಅಂತ..ನನ್ನ ವಿನಂತಿ..ಅಷ್ಟೇ ಅಮ್ಮ..ಅಂದಾಗ ಅಮ್ಮ ಬಹಳ ಬೇಜಾರು ಪಟ್ರು..ಸರಿ..ಈಗೇನು ಮಾಡೋಣ ಹೇಳಪ್ಪಾ..ನಾನೂ ನಿಂಗೆ ಆದಷ್ಟು ಸಹಾಯ ಮಾಡ್ತೀನಿ..ಅಂದರು ಅಮ್ಮ..ಹುಲಿರಾಯನ ಉವಾಚ ಕೇಳಿ ಮತ್ತಷ್ಟು ವಿಸ್ಮಯ ಆಯಿತು ಅಮ್ಮ, ಮಗನಿಗೆ..ಇದನ್ನೆಲ್ಲಾ ನಿಮ್ಮ ಮಗ ವೀಡಿಯೋ ಮಾಡಿದಾನೆ, ಆದಷ್ಟು ಸೋಷಿಯಲ್ ಮೀಡಿಯಾ ದಲ್ಲಿ ಪೋಸ್ಟ್ ಮಾಡಲು ಹೇಳಿದೀನಿ..ಇದು ಸಾಕಷ್ಟು" ವೈರಲ್" ಆದ್ರೆ ನಮ್ಮ ವೈರಿಗಳು "ವಯೋಲೆನ್ಸ್," ಮಾಡೋದು ಬಿಡಬಹುದು..

ಸೈಲೆಂಟೂ ಆಗ್ಬಹುದು, ಜಗತ್ತಿನಾದ್ಯಂತ ಈ ಒಳ್ಳೆಯ ಗುಣ ಹರಡಲೂ ಬಹುದು.ಅಂತರಾಷ್ಟ್ರೀಯ ಪ್ರಾಣಿದಯಾ ಸಂಘಗಳಿಂದ ದೊಡ್ಡ ದೊಡ್ಡ ಸೂಪರ್ ಅವಾರ್ಡ್ಸ್‌ಗಳೂ ಬರಬಹುದು.. ಈಗ ನಾನು ವಾಪಸ್ಸು ಹೋಗಿ ನಮ್ಮ ಕುಟುಂಬದ ಎಲ್ಲರನ್ನೂ ಕರ್ಕೊಂಡು ಬಂದು,..ಆಮೇಲೆ ಸರಕಾರಕ್ಕೆ ರಿಕ್ವೆಸ್ಟ್ ಹಚ್ತೀವಿ..ಗಾಂಧಿ ತಾತನಂತೆ ಉಪವಾಸ ಸತ್ಯಾಗ್ರಹ ಮಾಡ್ತೀವಿ.. "ನಮ್ಮ ಜೀವ..ನಮ್ಮ ಹಕ್ಕು.."

"ಹುಲಿಗಾಗಿ ಘರ್ಜಿಸಿ, ವನ್ಯ ಜೀವಿಗಳ ಬೇಟೆ ವರ್ಜಿಸಿ" ಅಂತ ಘೋಷವಾಕ್ಯ ಹಾಡ್ತೀವಿ.. ಸರಿ,ಸರಿ. .."....ಬಾರಪ್ಪಾ, ಜಗ್ಗು.. ಬಾ, ಸ್ವಲ್ಪ ನಂಜೊತೇಗೆ ಆ ರೋಡಿನ ಅಂಚಿನವರೆಗೂ, ನಮ್ಮ ಕಾಡಿನ ಎಂಟ್ರೀ ಪಾಯಿಂಟ್ ತನ್ಕ, ಯಾಕೆಂದ್ರೇ ನಂಗೆ ಇಲ್ಲಿ ಯಾವ್ದೇ ಸೇಫ್ಟೀ ಇಲ್ಲ, ಈ ಸಲ ಬರ್ಬೇಕಾದ್ರೇ ನವಿಲುಗಳ ಕುಟುಂಬದ ಎಲ್ರನ್ನೂ ಕರ್ಕೊಂಡು ಬರ್ತೀನಿ.ಅವಕ್ಕೂ ರಕ್ಷಣೆ ಬೇಕಿದೆ. ಸರಿ, ನಾನಿನ್ನು ಬರ್ಲಾ..

"ಧರಣಿ ಮಂಡಲ ಮಧ್ಯದೊಳಗೆ..ಮೆರೆಯುತಿಹ ಕರ್ನಾಟ ದೇಶದಿ..".ಅಂತ ಪುಣ್ಯ ಕೋಟಿ ಯ ಹಾಡು ಹಾಡುತ್ತಾ ಹೊರಟ ಹುಲಿರಾಯ..

■

# ನೀರಜಳ ಕೋಪ

✍ಜಿ.ವಿ. ನಿರ್ಮಲ

ನೀರಜ ಮನೆಯ ಮೂಲೆಯಲ್ಲಿ ಕುಳಿತು ಯಾವುದೋ ಆಲೋಚನೆಯಲ್ಲಿ ಮುಳುಗಿದ್ದಳು. ಬೆಳಗಿನ ಕೆಲಸ ಮುಗಿದ ನಂತರ ಆಯಾಸ ಪರಿಹರಿಸಿಕೊಳ್ತಿದ್ದಾಳೆ ಎಂದು ಭಾವಿಸಿದ ವಿಶ್ವ ಅವಳತ್ತ ಗಮನ ನೀಡಲಿಲ್ಲ. ತನ್ನ ಪಾಡಿಗೆ ತಾನು ಸುದ್ದಿ ಪತ್ರಿಕೆಗೆ ಅಂಟಿಕೊಳ್ಳಲು ಹೆಜ್ಜೆ ಹಾಕುತ್ತಿದ್ದ. ಅಷ್ಟರಲ್ಲಿ ' ರೀ ' ನಾದ ಕಿವಿಗೆ ತಟ್ಟಿತು. ನೀರಜಳದ್ದೇ ಧ್ವನಿಯೇ ಎಂದು ಅನುಮಾನ ಬರುವಷ್ಟು ಕ್ಷೀಣವಾಗಿತ್ತು. ಇದ್ದಕ್ಕಿದ್ದಂತೆ ಇವಳಿಗೇನಾಯ್ತು ಎನ್ನುವ ಗಾಬರಿಯಿಯಿಂದ ಅವಳತ್ತ ಲಗುಬಗನೆ ಓಡಿದ ಪತಿ ಪ್ರಾಣನಾಥ. 'ಏನಾಯ್ತು ನೀರಜ? ನೀನೆಂದೂ ಮಂಕಾಗಿ ಕೂಡುವವಳೇ ಅಲ್ಲ. ತಿಂಡಿ ತಿಂದ್ಯಾ? ಕಾಫಿ ಆಯ್ತಾ?' ಎಂದು ಪ್ರಶ್ನೆಗಳ ಮಾಲೆಯನ್ನೇ ಹರಿಬಿಟ್ಟ. ಅವಳ ಕಡೆಯಿಂದ ಹೊರಹೊಮ್ಮಿದ್ದು ಕೇವಲ ನಿಡಿದಾದ ಉಸಿರು. ಮಾತಿನ ಮಲ್ಲಿಯ ಮಾತೂ ಅಡಗಿತ್ತು ಮತ್ತೆಲ್ಲೋ. ವಿಶ್ವನ ಗಾಬರಿ ಇಮ್ಮಡಿಸಿತು. ಮತ್ತೊಮ್ಮೆ 'ನೀರಜ, ಮಾತಾಡು. ನಾನೇನಾದರೂ ತಪ್ಪು ಮಾತಾಡಿದ್ನಾ? ನಾನು ಈ ನಡುವೆ ಮಾತು ಕಡಿಮೆ ಮಾಡಿದೀನಿ ಅಲ್ವಾ? ಛೇ, ಛೇ. ಅದೇನು ನಿನ್ನ ಮೇಲಿನ ಬೇಸರದಿಂದಲ್ಲ. ಅದು ಈಗೀಗ ನನ್ನ ಸ್ವಭಾವವೇ ಆಗ್ಹೋಗಿದೆ. ನಿನ್ನ ಈ ಮೌನ, ನಿಟ್ಟುಸಿರು ನನಗಂತೂ ದಿಕ್ಕೇ ತೋಚುತ್ತಿಲ್ಲ.'

'ರೀ, ನನಗೆ ಒಂದು ಚಿಕ್ಕ ಸಮಸ್ಯೆ ಎದುರಾಗಿದೆ.' ಮೊಟಕಾದ ಉತ್ತರ ನೀರಜಳಿಂದ.

'ಸಮಸ್ಯೆ ದೊಡ್ಡದೋ, ಚಿಕ್ಕದೋ ಮುಖ್ಯವಲ್ಲ ನೀರಜ. ಸಮಸ್ಯೆ ಅಂದ್ರೆ ಸಮಸ್ಯೆಯೇ. ಸಮಸ್ಯೆಯನ್ನ ಚಿಕ್ಕದಾಗಿರಬೇಕಾದ್ರೆ ಪರಿಹರಿಸಿಕೊಂಡು ನಿರಾಳವಾಗಿರ್ಬೇಕು. ಸರಿ ಸರಿ. ಈಗ ಹೇಳು ನಿನ್ನ ಸಮಸ್ಯೆ ಏನು?

'ರೀ ಇತ್ತೀಚಿಗೆ ' ಅಲ್ಲೇ ನಿಂತಿತು ನೀರಜಳ ಧ್ವನಿ

'ಓ, ಇತ್ತೀಚಿಗೆ ನಿಂಗೆ ಊಟ ಸೇರ್ತಾ ಇಲ್ವಾ? ಅದೇನು ದೊಡ್ಡ ವಿಷ್ಯ ಅಲ್ಲ ಬಿಡು. ವಯಸ್ಸಾದ ಮೇಲೆ ಹೀಗೆಲ್ಲಾ ಆಗೋದು ಸಾಮಾನ್ಯ. ಅದಕ್ಕೆ ಅಷ್ಟೊಂದು ಯೋಚಿಸಬೇಡ. ತಾನೇ ಸರಿಹೋಗತ್ತೆ. ಕೋವಿಡ್ ರೋಗ ಬಂದಾಗ್ಲೂ ಎಷ್ಟೋ ಜನ್ರಿಗೆ ಬಾಯಿರುಚಿ ಕೆಟ್ಹೋಗಿದ್ದು ಪೇಪರ್ನಲ್ಲಿ ಬರ್ತಾ ಇತ್ತಲ್ಲಾ?'

'ಅಬ್ಬಾ! ನಿಮ್ಗೆ ಪೇಪರ್ನಲ್ಲಿ ಬಂದಿದ್ದು ಅಂದ್ರೆ ವೇದವಾಕ್ಯ ಅಲ್ವೇನ್ರೀ? ಆದ್ರೆ ನನ್ನ ಸಮಸ್ಯೆ ಅದಲ್ಲ. ಸಲೀಸಾಗಿ ಮೂರ್ಹೊತ್ತು ತಿಂದ್ಕೊಂಡು ಆರಾಮವಾಗಿದೀನಿ. ಅಜೀರ್ಣವೂ ಅಲ್ಲ. ನೀವು ಮತ್ತೊಂದು ಭಾಷಣ ಬಿಗಿಬೇಡಿ.' ಸಮಾಧಾನಕರವಾದ ಉತ್ತರ ನೀರಜಳಿಂದ.

'ಸರಿ ಸರಿ. ಮತ್ತೆ ನಿಂಗೆ ನಾಟಕ, ಸಿನಿಮಾ ಏನಾದ್ರೂ ನೋಡ್ಬೇಕು ಅಂತ ಆಸೆ ಆಗ್ತಾ ಇದ್ಯಾ? ಸಂದೀಪನ್ನ ಕೇಳೋಣ. ವೀಕ್ ಎಂಡ್ನಲ್ಲಿ ಎಲ್ರೂ ಒಟ್ಟಾಗಿ ಹೋಗಿ ಬರೋಣ. ಅಥ್ವಾ ಮತ್ತಿನ್ನೇನಾದ್ರೂ ಬಯಕೇನಾ?

'ಉಹುಂ. ನಂಗೆ ನಾಟಕ, ಸಿನಿಮಾ ಅಂತ ಯಾವ ಆಸೇನೂ ಇಲ್ಲ. ಮತ್ತೆ ಯಾವ ತರಹ ಬಯಕೇನೂ ಇಲ್ಲಾರೀ. ಮುದಿ ಬಸುರಿಗೆ ಹಸಿ ಮೆಣಸಿನಕಾಯಿ ತಿನ್ನೋ ಬಯಕೆ ಆಯ್ತಂತೆ ಅಂದ್ಹಾಗಾಯ್ತು. ನಂಗೆ ಈ ವಯಸ್ನಲ್ಲಿ ಯಾವ ಬಯಕೆ? ಆದ್ರೂ '

'ನೀರಜ, ಉಂಡು–ತಿಂದು ಚೆನ್ನಾಗಿದ್ದೀ ಅಲ್ವಾ? ಹಾಗಿದ್ದೂ ಈ ಆದ್ರೂ... ರಾಗ ಯಾಕೆ? ನಿನ್ನ ಮನಸ್ಸು ಬಿಚ್ಚಿ ಮಾತಾಡೋದು ತಾನೆ?'

'ಸರಿ. ಹೇಳೇ ಬಿಡ್ತೀನಿ. ನಂಗೆ ಕೋಪ ಮಾಡ್ಕೋಬೇಕು ಅನ್ನಿಸ್ತಾ ಇದೆ. ಅಂತಿಂಥ ಕೋಪ ಅಲ್ಲ. ದೂರ್ವಾಸ ಮುನಿಗಳಿಗೆ ಬರ್ತಾ ಇತ್ತಂತಲ್ಲಾ ಅಂಥ ಕೋಪ. ಆಗತ್ತಾ?'

'ಅಯ್ಯೋ ನೀರಜಾ.. ಈ ವಯಸ್ಸಲ್ಲಿ ಕೋಪ–ತಾಪ–ಪ್ರತಾಪ ಎಲ್ಲ ಬಿಟ್ಟು ಶಾಂತವಾಗಿರ್ಬೇಕು ಅಂತ ಕೇಳಿಲ್ವಾ? ಕೋಪ ಮಾಡ್ಕೊಂಡ್ರೆ ಬಿಪಿ, ಶುಗರ್ ಅಂತ ಎಂತೆಂತದ್ದೋ ರೋಗಗಳು ಬರತ್ವಂತೆ. ದಿನ ಬೆಳಗಾದ್ರೆ ಟಿವಿಗಳಲ್ಲಿ ಯೋಗ, ಧ್ಯಾನ, ಸಂಗೀತ, ನೃತ್ಯ, ವ್ಯಾಯಾಮ, ಪ್ರಶಾಂತ ವಾತಾವರಣ ಮಣ್ಣು–ಮಸಿ ಇತ್ಯಾದಿ ಏನೇನೋ ಹೇಳ್ತಾ ಇರ್ತಾರೆ. ಹತ್ತು ದಿನಗಳ ತರಬೇತಿ ಶಿಬಿರಕ್ಕೆ ಹತ್ತಾರು ಸಾವಿರ ಅಂತ ಜಾಹಿರಾತುಗಳು ಹಾಕ್ತಾನೇ ಇರ್ತಾರೆ. ಅಂತದ್ರಲ್ಲಿ ನಿಂಗೆ ಕೋಪ ಬರಿಸ್ಕೋಳ್ಳೋ ಆಸೆ, ಭ್ರಮೆ ಯಾಕೆ ಅಂತೀನಿ? ಅದೂ ಅಲ್ದೆ ಬಡವನ ಕೋಪ ದವಡೆಗೆ ಮೂಲ ಅಂತ ಗಾದೇನೂ ಇದ್ಯಲ್ಲಾ?'

'ನೀವು ಅದೇನು ಬೇಕಾದ್ರೂ ಹೇಳಿ. ಹುಚ್ಚುಚ್ಚು ಕೋಪ ಬಂದ ಮೇಲೆ ಶಾಂತವಾದ್ರೆ ಅದರ ಅನುಭವಾನೇ ಬೇರೆ. ಹಸಿದು ಉಂಡರೆ ರುಚಿಯು ಬಹಳ ಅನ್ನೋ ಗಾದೇನ ಕೇಳಿದೀರಿ ತಾನೆ? ಸಿಕ್ಕಾಪಟ್ಟೆ ಕೋಪ ಬಂದು, ಶಾಂತವಾದರೆ ಅದರ ಸೊಗಸೇ ಬೇರೆ.'

'ಅಬ್ಬಾ! ನಿನ್ನ ಆಸೆಯೇ? ಹೋಗ್ಲಿ ಒಂದ್ಕೆಲಸ ಮಾಡು ನೀರಜ. ಕೋಪ ಬರಸಿದ್ರೆ ಕಾಯಿ ಒಡಿಸ್ತೀನಿ ಅಂತ ಯಾವ್ದಾರೂ ದೇವ್ರಿಗೆ ಹರಕೆ ಕಟ್ಕೋ.' ತನಗೆ ಹೊಳೆದ ಉಪಾಯ ಸೂಚಿಸಿದ ವಿಶ್ವ.

'ಅಯ್ಯೋ, ಇದುವರ್ಗೂ ಯಾರೂ ಇಂಥ ಹರಕೆ ಕಟ್ಕೊಂಡಿಲ್ಲ ಅಂತ ಕಾಣ್ಸತ್ತೆ ಅಲ್ವಾ? ಅಷ್ಟಕ್ಕೂ ಯಾವ ದೇವ್ರು ಇಂತಹ ಹರಕೆಗೆ ಓಗೊಡ್ತಾನೆ? ಅದನ್ನಾದ್ರೂ ಹೇಳಿ'

'ಸರಿ. ಸ್ವಲ್ಪ ತಾಳು. ಯೋಚಿಸ್ತೀನಿ.' ಅಂದ ವಿಶ್ವ ತಲೆ ಕೆರ್ಕೋತಾ ಅತ್ತಿತ್ತ ಅಡ್ಡಾಡಿ, ದೊಡ್ಡ ವಿಚಾರ ಕಂಡ್ಕೊಂಡಂತೆ 'ಆಹಾ, ನಂಗೆ ಗೊತ್ತಾಯ್ತು. ಉಗ್ರ ನರಸಿಂಹಂಗೆ ಹರಕೆ ಹೊತ್ಕೋ. ಅವನು ಕೋಪಕ್ಕೆ ಹೆಸರಾದ ದೇವ್ರಲ್ವೇ? ಅವನು ಹಿರಣ್ಯಕಶಿಪುವನ್ನು ಕೊಲ್ಲುವಾಗ ಉಗ್ರರೂಪ ತಾಳಿದ್ದು ಪುರಾಣ ಪ್ರಸಿದ್ಧ. ಅಷ್ಟೇಕೆ ಅವನ ಕೋಪ ಶಾಂತವಾಗಿಸಲು ಎಲ್ಲಾ ದೇವಾನುದೇವತೆಗಳೂ ಹರಸಾಹಸ ಪಟ್ರಂತೆ. ಹಾಂ, ಹರ ಅಂದಾಗ ನೆನಪಾಯ್ತು. ಈಶ್ವರ ಕೂಡ ಕೋಪಕ್ಕೆ ಹೆಸರಾದವನೆ. ನೋಡು ಇಬ್ಬರಿಗೂ ಒಂದೊಂದು ಕಾಯಿ ಒಡಿಸು. ಅದರಲ್ಲೇನು?' ಎಂದು ಹೇಳಿ, ತನ್ನ ಉಪಾಯ ಸೂಚನೆಗೆ ತಾನೇ ಭೇಷ್ ಎಂದುಕೊಂಡು ಬೀಗಿದ ವಿಶ್ವ.

'ನೀವು ಹೇಳಿದಂತೆ ಮಾಡಲು ನಾನು ತಯಾರು. ಆದರೆ '

'ನೀರಜ.., ಈ ನಿನ್ನ ಆದರೆಗಳನ್ನು ಆದರಿಸುತ್ತಾ, ಉಪಾಯಗಳನ್ನು ಅರಸುತ್ತಾ ಈಗ ನಂಗೇ ಕೋಪ ಬರೋದ್ರಲ್ಲಿದೆ. ಅದೇನು ಹೇಳಬೇಕೋ ಬೇಗ ಹೇಳು' ಎಂದ ವಿಶ್ವ ತುಸು ಬಿಗಿಯಾದ ಧ್ವನಿಯಲ್ಲಿ.

'ದೇವರುಗಳು ವರ ಕೊಡುವುದು, ವರ ಕರುಣಿಸುವುದು ಅಷ್ಟು ಸುಲಭವಲ್ಲ. ನೂರಾರು ವರ್ಷಗಳು ತಪಸ್ಸು ಮಾಡಬೇಕು. ಹಾಗಂತ ಎಷ್ಟೋ ಬಾರಿ ಕೇಳಿದೀನಿ. ಅದೂ ಅಲ್ಲದೆ ಇಷ್ಟು ಸಣ್ಣ ವಿಷಯಕ್ಕೆ ದೇವರಿಗೆ ಯಾಕೆ ತೊಂದ್ರೆ? ಈ ಭೂಲೋಕದಲ್ಲೇ ಯಾರಾನ್ನಾದರೂ ಕೇಳ್ಬಾರ್ದೆ?' ನೀರಜ ಮತ್ತೊಂದು ವರಸೆ ತೆಗೆದೇ ಬಿಟ್ಳು.

'ನೋಡು ನೀರಜ, ನಾನು ಇತ್ತೀಚಿಗೆ ನೀವು ಪತ್ರಿಕೆಯಲ್ಲೇ ಮುಳುಗಿರ್ತೀರಿ ಅಂತ ಪದೇಪದೇ ಹೇಳ್ತಾನೇ ಇರ್ತಿ. ಒಪ್ಕೋತೀನಿ. ಆದ್ರೆ ಇಲ್ಲೀತನಕ ಕೋಪ ತರಿಸುವ ಸಹಾಯಕರು ದೊರೆಯುತ್ತಾರೆ ಎನ್ನುವ ಯಾವ ಜಾಹಿರಾತೂ ನನ್ನ ಕಣ್ಗೆ ಬಿದ್ದಿಲ್ಲ.'

'ರೀ.., ನಂಗೆ ಒಂದು ಉಪಾಯ ಬರ್ತಾ ಇದೆ. ನಾವೇ ಕೋಪ ಬರಿಸುವ ಸಹಾಯಕರು ಬೇಕಾಗಿದ್ದಾರೆ ಎಂದು ಜಾಹಿರಾತು ಕೊಡಬಹುದಲ್ವೇ?'

'ಸರಿ, ಸರಿ. ನಿನ್ನ ಮಾತು ತೆಗೆದುಹಾಕಿ, ನಿಂಗ್ಯಾಕೆ ನಿರಾಶೆ ಮಾಡಲಿ. ತಾಳು ಈಗಲೇ ಪೇಪರ್ನಲ್ಲಿ ಅಂತಹ ಜಾಹಿರಾತು ಕಳಿಸಲು ವಿಳಾಸ ಹುಡುಕುತ್ತೇನೆ'

ಎಂದ ವಿಶ್ವ, ಅವಕಾಶ ಸಿಕ್ಕಿದ್ದೇ ಸಾಕು ಅಂತ ತನ್ನ ಪ್ರಿಯವಾದ ಸುದ್ದಿ ಪತ್ರಿಕೆಯನ್ನು ಕೈಗೆತ್ತಿಕೊಂಡ. ಅಲ್ಲಿ ಅವನ ಕಣ್ಣಿಗೆ ಬಿದ್ದ ಸುದ್ದಿ ಅವನ ಕಣ್ಣನ್ನು ಮತ್ತಷ್ಟು ಅರಳುವಂತೆ ಮಾಡಿತು. ಆತನಿಗೆ ಆಶ್ಚರ್ಯವೋ ಆಶ್ಚರ್ಯ. ಏನದು ಅಂತಹ ಸುದ್ದಿ?' ಬೆಂಗಳೂರಿನಲ್ಲಿ 'ರೇಜ್ ರೂಮ್' ತೆರೆಯಲಾಗಿದೆ ಎನ್ನುವ ಸುದ್ದಿ! ಇಂತಹ ರೂಮುಗಳು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಯಶಸ್ವಿಯಾಗಿವೆ ಅಂತ್ಲೂ ಓದಿದ. ಕೂಡಲೆ ಕೂಗಿದ 'ನೀರಜ, ನಿಂಗೆ ಸರಿಯಾದ ಜಾಗ ಸಿಕ್ಕೇಬಿಡ್ತು. ಬೆಂಗಳೂರಿನಲ್ಲಿ 'ರೇಜ್ ರೂಮ್' ತೆರೆದಿದ್ದಾರೆ. ನೋಡು. ಇಲ್ಲಿ ಸುದ್ದಿ ಪ್ರಕಟವಾಗಿದೆ. ನೀನು ಅಲ್ಲಿಗೆ ಹೋದ್ರೆ ನಿನ್ನ ಕೆಲಸವಾದಂತೆಯೇ' ಎಂದ ಸಂತೋಷದಿಂದ.

'ರೀ ಹಾಗಂದ್ರೇನು? ಅದರಿಂದ ನಂಗೇನು ಪ್ರಯೋಜನ? ಸ್ವಲ್ಪ ಬಿಡಿಸಿ ಹೇಳ್ರೀ' ಎಂದು ಗೋಗರೆದಳು ನೀರಜ.

'ನೋಡು ನೀರಜ. ಕೋಪ ಬಂದವರು ಮನೆಯಲ್ಲಿದ್ದರೆ ಅಥವಾ ಆಫೀಸಿನಲ್ಲಿದ್ದರೆ ಒಂಥರಾ ಅಪಾಯ. ಅಲ್ವಾ? ಅದ್ರಬದ್ಲು ಕೋಪ ಬಂದವರು 'ರೇಜ್ ರೂಮ್' ನಲ್ಲಿ ಸಮಯ ಕಾಯ್ದಿರಿಸಿದರೆ, ಅವರ ಸರದಿ ಬಂದಾಗ ಅದರೊಳಗೆ ಹೋಗಿ, ಬಾಗಿಲು ಹಾಕ್ಕೊಂಡು ಕೂಗಬಹುದು, ಕಿರಿಚಬಹುದು. ಕಾಗದ ಹರಿದು ಬಿಸಾಡಬಹುದು. ಗಾಜಿನ ಸಾಮಾನುಗಳನ್ನು ಮನಸ್ಸು ಬಂದಂತೆ ಎಸೆದು ಚೂರು, ಚೂರು ಮಾಡ್ಬಹುದು. ಒಟ್ಟಿನಲ್ಲಿ ಸ್ವೇಚ್ಛೆಯಾಗಿ ಕೋಪವನ್ನು ಹೊರಕ್ಕೆ ದೂಡಬಹುದು. ಅಂತೂ ಇಂತೂ ದುಡ್ಡು ತೆತ್ತು ಕೋಪ ಶಮನ ಮಾಡಿಕೊಳ್ಳಬಹುದು. ಏನಂತೀಯಾ?'

'ಓಹೋ, ನೀವು ಹೇಳ್ತಾ ಇರೋದು ರಾಮಾಯಣದಲ್ಲಿ ಕೈಕೇಯಿ ದಶರಥನ ಬಳಿ ವರ ಕೇಳುವುದಕ್ಕೆ ಮುಂಚೆ 'ಕೋಪ ಗೃಹ' ದಲ್ಲಿದ್ಳು ಅಂತ ಕೇಳಿದ್ವಲ್ಲಾ ಅದೇ ತರಹದ್ದಾ?'

'ಹಾಂ, ಕನ್ನಡದಲ್ಲಿ 'ಕೋಪ ಗೃಹ' ಅಂತ ಹೇಳ್ಬಹುದು. ಆದ್ರೂ ಸ್ವಲ್ಪ ಬೇರೆ ಅಂತಾನೂ ಹೇಳ್ಬಹ್ದು. ಏನಾದ್ರೂ ಸರಿ. ನಾಳೆ 'ರೇಜ್ ರೂಂ' ಗೆ ಹೋಗೋಕ್ಕೆ ನೀನು ತಯಾರಾಗು. ನಾನೂ ನಿಂಜೊತೆ ಬರ್ತೀನಿ.'

'ಅಯ್ಯೋ ರಾಮ. ನಂಗೆ ಮೊದ್ಲು ಕೋಪ ಬರಬೇಕು ರೀ. ಕೋಪ ಬಂದ್ರೆ ತಾನೆ 'ಕೋಪ ಗೃಹ' ಕ್ಕೆ ಹೋಗೋದು? ಆಮೇಲೆ ಕೋಪ ಶಮನ ಅಲ್ವಾ?' ನೀರಜ ಮೊದಲ ಘಟ್ಟಕ್ಕೇ ಬಂದ್ಳು.

ವಿಶ್ವ ಸೋಲಲಿಲ್ಲ. 'ನೋಡು ನೀರಜ, ನೀನು 'ರೇಜ್ ರೂಮ್'ನ ಹೊರಗಡೆಯ ಕಾಯುವ ಕೊಟಡಿಯಲ್ಲಿ ಕೂತ್ಕೋ. ಅಲ್ಲಿ ಕೋಪದಿಂದ ಕುದಿಯುತ್ತಿರುವ ಹಲವಾರು ಜನ ಇರ್ತಾರಲ್ವಾ? ಅವರನ್ನು ಮೆಲ್ಲಗೆ ಮಾತಿಗೆಳೆದು, ಅವರಿಗೆ ಕೋಪ ಹೇಗೆ ಬಂತು? ಕಾರಣವೇನು? ಅನ್ನೋದನ್ನ ಕೇಳಿ, ಕೇಳಿ ವಿವರವಾಗಿ ತಿಳ್ಕೋ. ನಿನ್ನ ಸಮಸ್ಯೆಗೆ ಉತ್ತರ ಸಿಕ್ಕೇ ಸಿಗತ್ತೆ. ಆ ನಂಬಿಕೆ ನಂಗಿದೆ' ಎಂದ ತಾನು ಗೆದ್ದಂತೆ.

'ಆಂ , ಎಂಥಾ ಮಾತು ರೀ. ಈ ಮಾತನ್ನ ನೀವು ಬೇರೆ ಯಾರಿಗೋ ಹೇಳ್ತಿಲ್ಲ. ನಂಗೆ ಅಂದ್ರೆ ನಿಮ್ಮನ್ನೇ ನಂಬಿ ಕೈಹಿಡಿದವಳಿಗೆ ಹೇಳ್ತಾ ಇದ್ದೀರಿ. ಅಷ್ಟು ಜನ ಕೋಪಿಷ್ಠರ ನಡುವೆ ಕೂತು, ನಾನು ಒಬ್ಬೊಬ್ಬರನ್ನೇ ಮಾತಾಡಿಸ್ತಾ ಹೋದ್ರೆ ನಂಗೇನಾದ್ರೂ ಅಪಾಯ ಆಗಲ್ವಾ? ಹುಚ್ಚರ ಸಂತೆ ತರಹ ಇದ್ರೂ ಇರಬಹುದು ಆ ಕಾಯುವ ಕೊಠಡಿ. ನೀವು ಹೀಗೆ ಹೇಳೊದು ಕೇಳೇ ನಂಗೆ ಎಲ್ಲಿಲ್ಲದ ಕೋಪ ಉಕ್ಕೇರ್ತಾ ಇದೆ' ಎಂದು ಕೋಪದಿಂದ ಹಲ್ಲು ಕಡಿದಳು.

'ಅಗೋ! ಬಂದೆ ಬಿಡ್ತು. ಬಂದೇ ಬಿಡ್ತು. 'ರೇಜ್ ರೂಮ್' ಯಾಕೆ ಬೇಕು? ನೀರಜ ನಿಂಗೆ ಕೋಪ ಇಲ್ಲೇ ಬಂತಲ್ಲಾ. ಇನ್ನು ಅಲ್ಲಿಗ್ಯಾಕೆ ಹೋಗ್ಬೇಕು? ನಾನು ಗೆದ್ದೆ. ನನ್ನ ಉಪಾಯ ಫಲಿಸೇ ಬಿಡ್ತು. ಹಾಗೆ ಇರು. ನಿನ್ನ ಕೋಪಾನಾ ಎಂಜಾಯ್ ಮಾಡು ನೀರಜ. ನಾನು ಎರಡು ಲೋಟ ಕಾಫಿ ಮಾಡ್ಕೊಂಡು ತಂದೇ ಬಿಡ್ತೀನಿ. ನಿನ್ನ ಕೋಪ ಶಾಂತವಾದಾಗ ಸಮಸ್ಯೆ ಬಗೆಹರಿದಂತೇ' ಎಂದು ಒಳಗೆ ಓಡಿದ ವಿಶ್ವ ಬೀಳುವುದನ್ನೂ, ಏಳುವುದನ್ನೂ ಲೆಕ್ಕಿಸದೆ.

■